


# ಕರ್ನಾಟಕದಲ್ಲಿ ದಲಿತರು

**ಎಸ್. ಎಸ್. ಹಿರೇಮಠ**

**ಸಂಯೋಜನೆ:** ಎಂ. ಭೈರಪ್ಪ

DOI: https://doi.org/10.5281/zenodo.13283983

## ಆಶಯ:

**ನೆಲಮೂಲ ಸಂಸ್ಕೃತಿಯ ಮಹಾಶೋಧಕರಾಗಿ ಪ್ರೊ.ಎಸ್.ಎಸ್.ಹಿರೇಮಠರ ಕಾಯಕ**

ನೆಲಮೂಲ ಸಂಸ್ಕೃತಿಯ ಜಾಡಿನಲ್ಲಿ ಸಂಶೋಧನೆಯನ್ನು ಕೈಗೊಂಡು ಬಹುತ್ವ ಭಾರತ ಹಾಗೂ ದಲಿತ ಸಂಸ್ಕೃತಿಯ ವಿರಾಟ್ ಸ್ವರೂಪವನ್ನು ಅನಾವರಣ ಮಾಡಿದ ಮಹಾಶೋಧಕರಲ್ಲಿ ಪ್ರೊ.ಎಸ್.ಎಸ್.ಹಿರೇಮಠ ಅವರು ಪ್ರಾತಃಸ್ಮರಣೀಯರಾಗಿದ್ದಾರೆ. ತಮ್ಮ ಅಧ್ಯಾಪನ ಮತ್ತು ಸಂಘಟನಾ ಕಾಯಕದ ಮೂಲಕ ಜನಪರ ಮನಸುಗಳನ್ನು ರೂಪಿಸಿದ ಕ್ರಾಂತಿಕಾರಿಯೂ ಆಗಿದ್ದ ಹಿರೇಮಠ ಮೇಷ್ಟ್ರು ಸಂಶೋಧನಾ ಕಾಯಕದ ಮೂಲಕ ಸೀಮಿತ ಬೌದ್ಧಿಕ ಹಾಗೂ ಸಾಂಸ್ಕೃತಿಕ ಸೀಮೆಗಳನ್ನು ಬಹುವಾಗಿ ವಿಸ್ತರಿಸಿಕೊಟ್ಟಿದ್ದಾರೆ. ಆದಿಮ ನೆಲೆಯಿಂದ ಹಿಡಿದು ಆಧುನಿಕ ನೆಲೆಯ ಸಾಂಸ್ಕೃತಿಕ ಸಂಗತಿಗಳ ವರೆಗೂ ಆಳವಾದ ಸಂಶೋಧನೆಯನ್ನು ಕೈಗೊಂಡ ಹಿರೇಮಠರು ಲೋಕಮುಖೀ ಒಳಹರವಿನ ಅನೇಕ ಸೂಕ್ಷ್ಮಗಳನ್ನು ನಿಕಷಕ್ಕೆ ಒಡ್ಡಿದ್ದಾರೆ; ನೆಲದರಿವಿನ ಸೀಮೆಗಳನ್ನು ವಿಶಾಲಗೊಳಿಸಿದ್ದಾರೆ. ಸಬಾಲ್ಟ್ರನ್ ಸಂಶೋಧನೆಗೆ ಮಹತ್ತರ ನುಡಿಘಸಲನ್ನು ನಾಡಿಗೆ ಸಮರ್ಪಿಸುವ ಮೂಲಕ ಮಾದರಿ ಮಾರ್ಗದರ್ಶಿಯಾಗಿದ್ದಾರೆ.

ವಿದ್ಯಾರ್ಥಿ ಹಾಗೂ ವಿದ್ವಾಂಸ ವಲಯಲ್ಲಿ ಪ್ರಗತಿಪರ ಪ್ರೀತಿಯ ಮೇಷ್ಟ್ರು ಎನಿಸಿದ್ದ ಪ್ರೊ.ಎಸ್.ಎಸ್.ಹಿರೇಮಠ (ಶಿವರುದ್ರಯ್ಯ ಸದಾಶಿವಯ್ಯ ಹಿರೇಮಠ) ಅವರು ಜನಿಸಿದ್ದು 1950ರ ಜೂನ್ 1ರಂದು ಬೆಳಗಾವಿ ಜಿಲ್ಲೆಯ ಸಾಣಿಕೊಪ್ಪದದಲ್ಲಿ. ಬೆಳಗಾವಿಯಲ್ಲಿ ಬಿ.ಎ. ಮತ್ತು ಧಾರವಾಡದಲ್ಲಿ ಎಂ.ಎ. ಪದವಿ ಪಡೆದ ನಂತರ ಹಿರೇಮಠರು ಹೊಸಪೇಟೆ, ಹಡಗಲಿ, ಹರಪನಹಳ್ಳಿಗಳಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲಸ ಮಾಡಿದ್ದರು. ಬಳ್ಳಾರಿ ಜಿಲ್ಲೆಯ ಕೊಟ್ಟೂರಿನ ಕೊಟ್ಟೂರೇಶ್ವರ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದರು. ಜಾತಿಮೂಲದ ಶ್ರೇಷ್ಠ-ಕನಿಷ್ಠತೆಯ ವ್ಯಸನಕ್ಕೆ ಎಂದೂ ಸಿಕ್ಕಿಕೊಳ್ಳದೆ, ಅಬಲ ಸಮುದಾಯಗಳ ಸಬಲೀಕರಣಕ್ಕಾಗಿ ತಮ್ಮ ಬದುಕನ್ನೇ ಮುಡಿಪಿಟ್ಟು, ಪ್ರಗತಿಪರ ಸಂಘಟನೆ ಮತ್ತು ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜನಪರವಾದ ದುಡಿಮೆಯನ್ನೂ ಮಾಡಿದ್ದು ಅವಿಸ್ಮರಣೀಯ. ಅನೇಕ ಬಡವಿದ್ಯಾರ್ಥಿಗಳಿಗೆ ಬದುಕಿನ ಜೀವಸೆಲೆ ತುಂಬಿದ ಹಿರೇಮಠರು ಮಾನವತೆಯ ಮೇಷ್ಟ್ರು ಸಹ. ಸಾವಿರಾರು ವಿದ್ಯಾರ್ಥಿಗಳ ಲೋಕದೃಷ್ಟಿಯನ್ನು ಬದಲಿಸಿದ ಕೀರ್ತಿ ಮೇಷ್ಟ್ರಿಗೆ ಸಲ್ಲುತ್ತದೆ.

ಹಿರೇಮಠ ಮಾಸ್ತರರ ಅನೇಕ ವಿದ್ಯಾರ್ಥಿಗಳು ಹೇಳುವಂತೆ, "ಹಿರೇಮಠ ಮೇಷ್ಟ್ರು ತಮ್ಮ ಜೀವಮಾನವಿಡಿ ಮಿಡಿದದ್ದು ಬಡವರಿಗಾಗಿ, ದಲಿತರಿಗಾಗಿ, ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರ ಏಳಿಗೆಗಾಗಿ. ಅವರ ಸಂಸ್ಕೃತಿ, ಪರಂಪರೆ ಹಬ್ಬಗಳು ಮತ್ತು ಜಾತ್ರೆಗಳ ಬಗೆಗೆ ಅವರ ವಿಭಿನ್ನ ಚಿಂತನೆಗಳು ಹಾಗೂ ಹೋರಾಟದ ಮಜಲುಗಳನ್ನು

ನಾಡಿಗೆ ಪರಿಚಯಿಸಿ ಅಧ್ಯಯನ ಹಾಗೂ ಅಧ್ಯಾಪನದ ಜೊತೆಗೆ ಸಂಘಟನೆ, ವೈಚಾರಿಕ ಜ್ಞಾನ, ಸಂಸ್ಕೃತಿ ಪರಂಪರೆಯ ಚರ್ಚೆ, ಅಭಿವ್ಯಕ್ತಿ ಹಾಗು ಹೋರಾಟಕ್ಕೆ ಅನೇಕ ವೇದಿಕೆ ಒದಗಿಸಲು ಚರಿತ್ರಾರ್ಹವಾದ ಕಾಯಕವನ್ನು ಮಾಡಿದ್ದಾರೆ". ಇಂತಹ ಬಹುಮುಖಿ ವ್ಯಕ್ತಿತ್ವದ ಹಿರೇಮಠ ಮೇಷ್ಟ್ರು ಅನೇಕ ಹೋರಾಟಗಾರರನ್ನು ಹಾಗೂ ಚಿಂತಕರನ್ನು ತಮ್ಮ ಜ್ಞಾನಗರಡಿಯಲ್ಲಿ ಪಳಗಿಸಿರುವುದು ಹೆಮ್ಮೆಯ ಸಂಗತಿಯಾಗಿದೆ. ವಿದ್ವಾಂಸರು ಗುರ್ತಿಸುವಂತೆ, ಚಾರಿತ್ರಿಕ ಭೌತವಾದವನ್ನು ಅತ್ಯಂತ ವೈಜ್ಞಾನಿಕವಾಗಿ ಈ ದೇಶಕ್ಕೆ ಪರಿಚಯ ಮಾಡಿಕೊಟ್ಟಂತ ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಲೇಖಕರಾದ ಡಿ.ಡಿ.ಕೋಸಾಂಬಿ, ಎಸ್.ಜಿ.ಸರ್ದೇಸಾಯಿ ಅವರ ಪ್ರವಾಹಕ್ಕೆ ಒಳಗಾಗಿದ್ದ ಹಿರೇಮಠ ಮೇಷ್ಟ್ರು ತಮ್ಮ ಶಿಷ್ಯರಿಗೆ ಭಾರತದಲ್ಲಿ ದ್ವಂದ್ವಮಾನ ಮತ್ತು ಚಾರಿತ್ರಿಕ ಭೂತವಾದವನ್ನು E=mc2 ಒಂದೇ ಸೂತ್ರದ ಮೂಲಕ ಅತ್ಯಂತ ಸರಳವಾಗಿ ಮನದಟ್ಟು ಮಾಡಿದ ರೀತಿ ಅತ್ಯಂತ ಮನೋಜ್ಞವಾದದ್ದು

ಭಾರತೀಯ ಸಾಂಸ್ಕೃತಿಕ ಸಂದರ್ಭದಲ್ಲಿ ಜಾತಿವ್ಯವಸ್ಥೆಯ ಬೇರುಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಹೊಸ ಹೋರಾಟಗಳನ್ನು ರೂಪಿಸಬೇಕು ಎನ್ನುವ ಚಿಂತನೆಯಿದ್ದ ಎಸ್.ಎಸ್.ಹಿರೇಮಠ ಮೇಷ್ಟ್ರು, ವೈಜ್ಞಾನಿಕ ಸೈದ್ಧಾಂತಿಕ ಸ್ಪಷ್ಟತೆಯಲ್ಲಿ ಮುನ್ನಡೆದಿದ್ದರು. ರಾಜ್ಯಾದ್ಯಂತ ಅನೇಕ ಜಾಥಾಗಳನ್ನು ಸಂಘಟಿಸಿ ಅಸ್ಪೃಶ್ಯತೆಯ ವಿರುದ್ಧ ಹಾಡು ಹಾಗೂ ಬೀದಿ ನಾಟಕಗಳನ್ನು ಆಯೋಜಿಸಿ, ಪಟ್ಟಭದ್ರ ಹಿತಾಸಕ್ತಿಗಳ ವಿರೋಧ ಕಟ್ಟಿಕೊಂಡು ವಯಕ್ತಿಕ ತೊಂದರೆ ಅನುಭವಿಸಿದ್ದರೂ ಕೂಡ ದೃತಿಗೆಡದೆ ಜೀವಮಾನವಿಡಿ ನೊಂದಜನರ ದಿಟ್ಟಧ್ವನಿಯಾಗಿದ್ದರು. ರಂಗನಾಟಕ ಮತ್ತು ಬೀದಿನಾಟಕಗಳನ್ನು ಬರೆದು, ಸಂಭಾಷಣಾ ಪ್ರಸ್ತುತಿಯ ಚಾತರ್‍ಯ, ಕಾಲ-ದೇಶ-ಕ್ರಿಯಾನುಗುಣವಾಗಿ ಬರೆಯುತ್ತಿದ್ದ ಅತ್ಯಂತ ಶಕ್ತ ಸಂಭಾಷಣೆಗಳ ರೀತಿಯಿಂದಾಗಿ ಹಿರೇಮಠರ ಅಸಂಖ್ಯ ಅಭಿಮಾನಿಗಳು ಸೃಷ್ಟಿಯಾಗಿದ್ದು ಮನನೀಯ.

ಭಾರತೀಯ ನೆಲದ ಸಾಂಸ್ಕೃತಿಕ ವೈವಿಧ್ಯತೆ ಹಾಗೂ ಕ್ರಿಯಾಶೀಲತೆಗೆ ದ್ಯೋತಕವಾದ ಶೋಧನ ಹಾಗೂ ಬೋಧನ ಕಾಯಕವನ್ನು ಏಕವಾಗಿ ಕೈಗೊಂಡ ಹಿರೇಮಠರ ಕೃತಿಗಳು ಅತ್ಯಮೂಲ್ಯವಾಗಿದೆ. ಬಯಕೆ ಬಯಲು, ಕೆಂಪು ಕವನಗಳು, ಹಸಿರಿನುಸಿರು, ಚಂದ್ರನ ದಾರಿಗಳು, ಮನುಷ್ಯನೆಲ್ಲಿ?(ಕಾವ್ಯ), ಕ್ಯಾದಗಿಹಳ್ಳಿ ಅಂಬವ್ವನ ಪದಗಳು, ಮೈಲಾರನ ಜಾತ್ರೆ, ಮಾನವಪದ ಶಾಸ್ತ್ರ, ಕೊಪ್ಪಳ ಜಿಲ್ಲೆಯ ಜಾತ್ರೆಗಳು, ಜನಪದ ಸಮಾಜ ಸಂಸ್ಕೃತಿ (ಜಾನಪದ), ಮನುಸ್ಮೃತಿಯಲ್ಲಿ ಜಾತಿ ಮತ್ತು ವರ್ಗ, ಬಳ್ಳಾರಿ ಜಿಲ್ಲೆಯ ಆಧುನಿಕ ಸಾಹಿತ್ಯ, ಬಂಡಾಯ ಸಾಹಿತ್ಯ, ಪಂಚಗಣಾಧೀಶ್ವರ, ಸಮಾಜ ಸಂಸ್ಕೃತಿ ಸಂಘರ್ಷ(ವಿಮರ್ಶೆ), ರಾಘವಾಂಕನ ವೀರೇಶ ಚರಿತೆ, ವಿಚಾರ ಸಾಹಿತ್ಯ-1995, ಹರಿಹರನ ಮೂರು ರಗಳೆಗಳು(ಸಂಪಾದನೆ), ಬಂಡಾಯ ಮತ್ತು ಲೈಂಗಿಕ ಪ್ರಶ್ನೆ, ರಾಷ್ಟ್ರೀಯ ಭಾವೈಕ್ಯತೆ ಮತ್ತು ಉಪ ಸಂಸ್ಕೃತಿಗಳು, (ವೈಚಾರಿಕ), ಹಕ್ಕಿ ಅಮರ ಮತ್ತು ಜೋಗತಿ ಕಲ್ಲು(ನಾಟಕಗಳು), 'ಟಿ.ವಿ.ಶಿವಾನಂದನ್: ಬದ್ಧತೆಗೊಂದು ಮಾದರಿ'(ಪತ್ರಕರ್ತ ಟಿ.ವಿ. ಶಿವಾನಂದನ್ ಅವರಿಗೆ ಸಲ್ಲಿಸಿದ ಅಭಿನಂದನ ಗ್ರಂಥ), ಕರ್ನಾಟಕ ಸಂಸ್ಕೃತಿ ಪರಂಪರೆ: ಭಾಗ-1 ಹಬ್ಬಗಳು, ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ: ಭಾಗ-2 ಜಾತ್ರೆಗಳು, ಮಾದಾರ ಚೆನ್ನಯ್ಯನ ನಾಡಿನಲ್ಲಿ, ಉಪ್ಪಾರರು, ಹರಿಹರ ಚಿತ್ರಿಸಿದ ದಲಿತ ಶರಣರು, ಕನ್ನಡ ಜನಪದ ಗುರುಪರಂಪರೆ, ದಲಿತ ಸಂಸ್ಕೃತಿ, ಸಾಂಖ್ಯ ದರ್ಶನ, ಪಾಶುಪತ ದರ್ಶನ, ಕಾಳಾಮುಖ ದರ್ಶನ, ಲಾಕುಳ ದರ್ಶನ, ಲೋಕಾಯತ ದರ್ಶನ, ಯೋಗ ದರ್ಶನ(ಸಂಶೋಧನೆ) – ಇವು ಹಿರೇಮಠರ ಸಾಹಿತ್ಯಕೃಷಿಯಲ್ಲಿ ಮೂಡಿಬಂದಿರುವ ಮಹತ್ವದ ಕೃತಿಫಸಲುಗಳಾಗಿವೆ. ಹಿರೇಮಠರ ಶೋಧನ ಹಾಗೂ ಬೋಧನ ಕೃಷಿಗಾಗಿ ಶ್ರೀ ಮೃತ್ಯುಂಜಯ ಸಾರಂಗಮಠ ಸ್ಮಾರಕ ಪ್ರಶಸ್ತಿ, ಶ್ರೀ ರುದ್ರೇಶ್ವರ ಸಾಹಿತ್ಯ ಪ್ರಶಸ್ತಿ, ಡಾ.ಎಚ್.ನರಸಿಂಹಯ್ಯ ಪ್ರಶಸ್ತಿ, ಅತ್ಯುತ್ತಮ ಶಿಕ್ಷಕ ಪ್ರಶಸ್ತಿ, ಗುಲ್ಬರ್ಗಾ ವಿವಿಯ ಗೌರವ ಪ್ರಶಸ್ತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ವಿವಿಧ

ದತ್ತಿ ಪ್ರಶಸ್ತಿಗಳು ಮೊದಲಾಗಿ ಹಲವಾರು ಗೌರವ ಪುರಸ್ಕಾರಗಳು ದೊರೆತಿವೆ.

ಹಿರೇಮಠರು ನಾಟಕಕಾರರಾಗಿ ಬೆಟಗೇರಿ ಕೃಷ್ಣಶರ್ಮರ "ಜೋಗತಿಕಲ್ಲು" ಕಥೆಯನ್ನು ನಾಟಕಕ್ಕೆ ಇಳಿಸಿದ ರೀತಿ ಕೂಡ ಅನನ್ಯ. ಈ ಕಥೆಯಲ್ಲಿ ತ್ಯಾಗದ ಪ್ರತೀಕವಾಗಿ, ಆರಾಧ್ಯ ದೈವವಾಗಿ ಸಾರ್ಥಕತೆ ಪಡೆವ ದೇವದಾಸಿ ಚಂದಕ್ಕ-ಹಿರೇಮಠರ ಕಣ್ಣೋಟದಲ್ಲಿ ಸಾಮಾಜಿಕ ಸಮಸ್ಯೆಯೊಂದರ ಕಣ್ಮರೆಯಂತೆ ಕಾಡುತ್ತದೆ. ಪರಂಪರೆಯನ್ನು ನೋಡುವ, ಅರ್ಥೈಸುವ ಪಾಠಗಳನ್ನು ಸಾಮಾನ್ಯರಿಗೆ ಮುಟ್ಟಿಸುವ ರೀತಿಯಿಂದಾಗಿ ಹಿರೇಮಠರ ಪ್ರಯತ್ನ ಬಹುಮುಖ್ಯವಾದದ್ದು. 1986ರಲ್ಲಿ ಪ್ರದರ್ಶನಗೊಂಡ ಈ ನಾಟಕ, ಪ್ರದರ್ಶನವಾದ ಕಡೆಯಲ್ಲೆಲ್ಲಾ ನಾಟಕದ ಪರಿಣಾಮ ಹೃದಯಕ್ಕೆ ತಟ್ಟುವಂತೆ ಮತ್ತು ವ್ಯವಸ್ಥೆ ಕಲಿಸಿರುವ ಕೀಳು ಅಭಿರುಚಿಯ ವಿರುದ್ಧ ಬಂಡಾಯವೇಳುವ ಅಗತ್ಯವನ್ನು ನಾಟಕ ಹೇಳುತ್ತಾ ಹೋಯಿತು. ಇಡೀ ರಾಜ್ಯಾದ್ಯಂತ ಪ್ರಚಾರ ಪಡೆದ ಈ ನಾಟಕದ ಕುರಿತು ಅಂದಿನ ದಿ.5-1-1986ರ ಟೈಮ್ಸ್ ಆಫ್ ಇಂಡಿಯಾದಲ್ಲಿ, "Jogathikallu made a scathing attack on the evils of Devadasi system which is still prevailing in North Karnataka .The play was so rich in songs that it engulfed the action of the play it-self" ಚರಿತ್ರೆಯನ್ನು ಮುರಿದು ಕಟ್ಟುವ ಇಂತಹ ಪ್ರಯತ್ನಗಳಿಗೆ ಪ್ರೇಕ್ಷಕರ ಸ್ಪಂದನೆ ಮಾತ್ರ ಅದ್ಭುತವಾಗಿತ್ತು ಎಂದು ಈಗಲೂ ರಂಗನಿರ್ದೇಶಕ ಸಿ.ಬಸವಲಿಂಗಯ್ಯ ಅವರು ನೆನಪಿಸಿಕೊಳ್ಳುತ್ತಾರೆ.

ಚಿಂತಕರಾದ ಡಾ.ಮೊಗಳ್ಳಿ ಗಣೇಶ್ ಅವರು ಹೇಳುವಂತೆ, ದಲಿತ ಸಮುದಾಯಗಳ ಸಾಂಸ್ಕೃತಿಕ ಅಂತಃಸತ್ವವನ್ನೂ ಸಮಕಾಲೀನತೆಯಲ್ಲಿ ಅವು ಪ್ರಧಾನ ಧಾರೆಯಲ್ಲಿ ಎಲ್ಲ ರೀತಿಯಲ್ಲೂ ಸಂಯೋಗ ಸಂವೇದನೆಯ ವಿಕಾಸತ್ವಕ್ಕೆ ಒಳಗಾಗುವುದನ್ನು ಸೂಕ್ಷ್ಮವಾಗಿ ಆಳವಾಗಿ ವಿಭಿನ್ನವಾಗಿ ಸಮಷ್ಟಿ ಧ್ಯಾನಚಿತ್ತದಿಂದ ವಿಶ್ಲೇಷಿಸಿ ಸಾಂಸ್ಕೃತಿಕ ಚರ್ಚೆಗಳಿಗೆ ಹಾಗೂ ಅವುಗಳ ವಿಕಾಸಗಳಿಗೆ ಪೂರಕವಾದ ಶೋಧನೆಗಳನ್ನು ರೂಪಿಸಬೇಕಾದ ಅಗತ್ಯವಿದೆ. ಆಧುನಿಕ ಯುಗದ ಈ ಹೊತ್ತಿನಲ್ಲಿ ಕೆಳಜಾತಿ ಎಂಬ ಶಾಪಕ್ಕೆ ಒಳಗಾದ ಅನೇಕ ಸಮುದಾಯಗಳು ಜಗತ್ತಿನ ವೇಗದ ರೂಪ ಮತ್ತು ವಿರೂಪಗಳೆರಡರ ತಕ್ಕಡಿಯಲ್ಲಿ ಅದಲು ಬದಲಾಗುತ್ತಾ ಸಂವೇದನೆಯ ರೂಪಾಂತರಗಳಾಗುತ್ತಾ ಎಲ್ಲೆಲ್ಲಿಯೊ ತಮ್ಮ ಅನನ್ಯತೆಗಳನ್ನು ವಿಸ್ತರಿಸಿಕೊಳ್ಳುತ್ತಿವೆ. ಪ್ರಭುತ್ವದ ಜೊತೆ ಹೋರಾಡುತ್ತಲೇ ರಾಜಿ ಒಪ್ಪಂದ ಮಾಡಿಕೊಂಡಂತೆಯೂ ಸಾಂಸ್ಕೃತಿ ಅಂತಃಸತ್ವಗಳನ್ನು ರಾಜಕೀಯದ ವರಸೆಗಳಲ್ಲಿ ಈ ಸಮುದಾಯಗಳು ಬೆಸುಗೆ ಮಾಡಿಕೊಳ್ಳುತ್ತ ಎಚ್ಚರದ ಸ್ಥಿತಿಯಲ್ಲಿ ಎಡವಿ ಬೀಳುತ್ತ ಮೇಲೇಳುತ್ತ ತಮ್ಮ ತಮ್ಮ ಅಸ್ತಿತ್ವಗಳಿಗಾಗಿ ಎಲ್ಲ ಬಗೆಯ ಬಾಗಿಲುಗಳನ್ನು ಬಡಿಯುತ್ತಿವೆ. ಇವತ್ತು ನಮ್ಮ ರಾಜಕಾರಣ ಅದರ ಪ್ರಭುತ್ವ ಮತ್ತು ಸಮಕಾಲೀನ ಸಾಮಾಜಿಕ ಪ್ರಕ್ರಿಯೆಗಳೆಲ್ಲ ಒಂದಾಗಿಯೇ ಸಮಸ್ಯೆಗಳನ್ನು ಬಿಡಿಸಿಕೊಳ್ಳುತ್ತಲೇ ಸಂಕೀರ್ಣ ಸವಾಲುಗಳು ಎದುರಾಗುತ್ತಿವೆ. ಇಂತಲ್ಲಿ ಸಮುದಾಯದ ಒಳಗೇ ತಣ್ಣಗೆ ಮೌನವಾಗಿ ಪ್ರವಹಿಸುವ ಮಾನವೀಯ ಜೀವಧಾತುವಿನಂತಹ ಹುಡುಕಾಟಗಳಿಗೆ ಹೊಸ ಪೀಳಿಗೆಯ ಮನಸ್ಸು ತೆರೆದುಕೊಳ್ಳಬೇಕಾಗಿದೆ ಎಂಬ ಆಶಯಕ್ಕೆ ಪೂರಕವಾಗಿ ಮೂಡಿಬಂದಿರುವ ಸಂಶೋಧನ ಗ್ರಂಥಗಳಲ್ಲಿ ಹಿರೇಮಠರ ದಲಿತ ಸಂಸ್ಕೃತಿ ಕೇಂದ್ರಿತ ಶೋಧನ ಕೃತಿಗಳು ಬಹುಮೌಲ್ಯಯುಳ್ಳವಾಗಿವೆ.

'ಕರ್ನಾಟಕ ಸಂಸ್ಕೃತಿ ಪರಂಪರೆ ಭಾಗ-1 ಮತ್ತು ಭಾಗ-2' ಕೃತಿಗಳಲ್ಲಿ ಹಬ್ಬಗಳು ಮತ್ತು ಜಾತ್ರೆಗಳನ್ನು ಗಂಭೀರವಾಗಿ ಅಧ್ಯಯನ ಮಾಡಿದ ಹಿರೇಮಠರು ನೆಲಮೂಲದ ದಲಿತ ಸಂಸ್ಕೃತಿ, ವಲಸೆಗಾರ ಪಶುಪಾಲಕ ಸಂಸ್ಕೃತಿ ಹಾಗೂ ವೈದಿಕ ಸಂಸೃತಿಗಳನ್ನು ಕುರಿತು ಗಂಭೀರವಾದ ಸಂಶೋಧನೆ ಮಾಡಿದ್ದಾರೆ. ಆವರೆಗೆ ಅಸ್ಪಷ್ಟವಾಗಿದ್ದ ವಿಚಾರಗಳನ್ನು ಹೊಸ ಮಾಹಿತಿಗಳ ಮೂಲಕ ಇಲ್ಲಿ ಇನ್ನಷ್ಟು ಸ್ಪಷ್ಟಪಡಿಸಿದ್ದಾರೆ. ಇಲ್ಲಿ, ಹಿರೇಮಠರು ಮೂರು

ಅಂಶಗಳತ್ತ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ ಮತ್ತು ಅದನ್ನು ಒಂದು ಪ್ರಮೇಯವಾಗಿ ಅಂಗೀಕರಿಸಿ, ವಿಷಯ ಮಂಡನೆ ಮಾಡಿದ್ದಾರೆ, ಅವುಗಳೆಂದರೆ- 1) ಹೊಲೆ ಮಾದಿಗರೇ ಈ ನೆಲದ ಮೊದಲ ಕೃಷಿಕರು. ಕೃಷಿಕರಾಗುವ ಮುನ್ನ ಅವರು ಬೇಟೆಗಾರರಾಗಿದ್ದರು. ಕೃಷಿಕರಾಗಿರುವುದರಿಂದಲೇ ಅವರು ತಂತ್ರದ ಕಡೆ ವಾಲಿದರು. ಮೂಲತಃ ಶಾಕ್ತರಾಗಿರುವ ಅವರು ಯೋನಿ ಪೂಜಕರಾಗಿದ್ದರು. ಇವರಲ್ಲಿ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಇತ್ತು. 2) ಎರಡನೇ ಹಂತದಲ್ಲಿ ಪಶುಪಾಲಕರಾಗಿದ್ದ ದ್ರಾವಿಡರು ದಕ್ಷಿಣಕ್ಕೆ ವಲಸೆ ಬಂದರು. ಹಾಗೆ ವಲಸೆ ಬಂದ ಅನಂತರ ಅವರು ಕೃಷಿಕರಾಗಿ ಮಾರ್ಪಟ್ಟರು ಇಲ್ಲವೇ ಹೊಲೆ ಮಾದಿಗರೊಂದಿಗೆ ಒಂದು ಬಗೆಯ ಸಮನ್ವಯವನ್ನು ಏರ್ಪಡಿಸಿಕೊಂಡರು, ಇವರು ಶಿಶ್ನಾರಾಧಕರು, ಸಿದ್ಧ ಪರಂಪರೆಯವರು. 3)ಮೂರನೆಯ ಹಂತದಲ್ಲಿ ವೈದಿಕರ ಪ್ರವೇಶ ಆಗಿದೆ. ಪುರುಷ ಪ್ರಧಾನ ಚಿಂತಕರಾದ ಇವರ ಪ್ರವೇಶದಿಂದ ಜಾತಿ-ವರ್ಗಗಳು ಕಾಣಿಸಿಕೊಂಡವು. ಈ ಮೂರು ಅಂಶಗಳನ್ನು ಹಿರೇಮಠರು ಸುಮಾರು 51 ಜನಪದ ದೈವಗಳ ಆಚರಣಾ ವಿಧಿ-ವಿಧಾನಗಳ ಸಹಾಯದಿಂದ ಚರ್ಚಿಸಿ, ಸಮರ್ಥಿಸುತ್ತಾರೆ. ಊರು, ಹಳ್ಳಿ, ಲಿಂಗ, ಹಬ್ಬ, ತೇರು, ಜಾತ್ರೆ ಹೀಗೆ ಬಹು ಅಂಶಗಳನ್ನು ಎತ್ತಿಕೊಂಡು ತನ್ನ ವಾದವನ್ನು ಗಟ್ಟಿಗೊಳಿಸಿದ್ದಾರೆ. ಲಭ್ಯವಿರುವ ಮಾಹಿತಿಗಳೆಲ್ಲವನ್ನು ಸಂಗ್ರಹಿಸಿ, ಅವನ್ನು ತನ್ನ ಕೇಂದ್ರ ಉದ್ದೇಶಕ್ಕೆ ಜೋಡಿಸಿ, ವಿಷಯ ಮಂಡನೆ ಮಾಡಿದ್ದಾರೆ; ದಲಿತ ಸಂಸ್ಕೃತಿಯ ವಿರಾಟ್ ಸ್ವರೂಪದ ದರ್ಶನ ಮಾಡಿಸಿದ್ದಾರೆ. ಇದರ ಜೊತೆಗೆ ಗಮನಿಸಬೇಕಾದ ಮತ್ತೊಂದು ಸಂಗತಿಯೆಂದರೆ, ಎಲ್ಲ ಹಬ್ಬಗಳ ಆಶಯ ಒಂದಿಲ್ಲೊಂದು ರೀತಿಯಿಂದ ಕೃಷಿಗೆ ಸಂಬಂಧಿಸಿರುವುದು. ಮಾನವ ಜೀವನ ಮತ್ತು ಕೃಷಿಗೆ ಅಗತ್ಯವಾದ ಪ್ರಾಣಿ ಜೀವನಗಳೂ ರಂಗಕ್ಕೆ ಪ್ರವೇಶಿಸುತ್ತವೆ. ಆದ್ದರಿಂದ ಹಬ್ಬಗಳ ವೈಜ್ಞಾನಿಕ ಶೋಧನೆಯ ಸಾಧ್ಯತೆಯನ್ನು ಹಿರೇಮಠರು ಕೈಗೊಂಡಿರುವುದು ಮಹತ್ವದ್ದಾಗಿದೆ. ಈ ಕೆಲಸದ ಹಿಂದೆ ಇರುವ ಅಪಾರವಾದ ಶ್ರಮ, ತಾಳ್ಮೆ ಮತ್ತು ಆಳವಾದ ವಿದ್ವತ್ತು ವಿಶೇಷವಾದುದು. ಮೇಲಾಗಿ ತನ್ನ ಇಡೀ ವಾದವನ್ನು ಒಂದು ಜನಪರವಾದ ನಿಲುವಿಗೆ ಸೇರಿಸುವಲ್ಲಿ ಹಿರೇಮಠರು ತೋರುವ ಬದ್ಧತೆಯು ಇಲ್ಲಿ ಗಮನಾರ್ಹ.

ಕರ್ನಾಟಕದಲ್ಲಿ ಎಪ್ಪತ್ತು ಎಂಬತ್ತರ ದಶಕ ಹಲವು ಚಳುವಳಿಗಳ ಮೂಲಕ ಸಂಚಲನವನ್ನು ಉಂಟುಮಾಡಿತ್ತು. ಸಂಸ್ಕೃತಿಯ ಅರ್ಥ ವ್ಯಾಖ್ಯಾನಗಳು ಪಲ್ಲಟಗೊಂಡು ಹೊಸ ಅರ್ಥ ವ್ಯಾಖ್ಯಾನಗಳನ್ನು ಹುಟ್ಟುಹಾಕಿತು. ಅದರ ಬೆಳಸಿನ ಕೊಯ್ಲಿಗೆ ಎಸ್.ಎಸ್. ಹಿರೇಮಠರ 'ದಲಿತ ಸಂಸ್ಕೃತಿ' ಹಾಗೂ 'ಮಾದಾರ ಚೆನ್ನಯ್ಯನ ನಾಡಿನಲ್ಲಿ' ಕೃತಿಗಳೂ ಸಾಕ್ಷಿಯಾಗಿವೆ. ಅಧ್ಯಯನ ಕ್ಷೇತ್ರಗಳು ಶ್ರೇಣೀಕರಣದ ಕಾರಣದಿಂದ ಅವಜ್ಞತೆಗೆ ಮತ್ತು ಶ್ರೇಷ್ಠ ಕನಿಷ್ಠತೆಗೆ ಒಳಗಾಗಿದ್ದವು. ಆದರೆ ದಲಿತ ಬಂಡಾಯ ಚಳುವಳಿಯಿಂದ ಈ ಅವಜ್ಞತೆಯನ್ನು ಪ್ರಶ್ನಿಸುವ ಪ್ರತಿಭಟಿಸುವ ಕ್ರಿಯೆಗಳೆಲ್ಲ ನಡೆದವು. ಹೀಗಾಗಿ ಮುಟ್ಟಬಾರದ ಲೋಕಗಳನ್ನು ಮುಟ್ಟಿ ಅದರೊಳಗಿನ ಚಾರಿತ್ರಿಕ ಸಂಗತಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಯಿತು. ದಲಿತ ಸಂಸ್ಕೃತಿಯೆಂಬುದನ್ನು ಕಟ್ಟಿಕೊಳ್ಳುವ ಹೊತ್ತಿನಲ್ಲಿ ಚರಿತ್ರೆಯಲ್ಲಿ ಕಾಣೆಯಾಗಿದ್ದವುಗಳನ್ನು ಹುಡುಕಿಕೊಳ್ಳುವುದು ಬಹು ಕಷ್ಟದ ಕೆಲಸ. ಭಾರತದಂತಹ ದೇಶದಲ್ಲಿ ಎಲ್ಲವುಗಳನ್ನು ಸಾಕ್ಷ್ಯಾಧಾರಗಳ ಮೂಲಕ, ಪ್ರಮಾಣಗಳ ಮೂಲಕವೇ ಹೇಳಬೇಕಾಗುತ್ತದೆ, ಬರೆಯಬೇಕಾಗುತ್ತದೆ. ಹೀಗಾಗಿಯೇ ಹಿರೇಮಠರು ಶಾಸನ, ಕಾವ್ಯ, ಪುರಾಣಗಳನ್ನೆಲ್ಲ ಜಾಲಾಡಿರುವರು. ದಲಿತ ಸಂಸ್ಕೃತಿ ಮತ್ತು ಅಧ್ಯಯನ ಸಂಬಂಧವಾಗಿ ಚರಿತ್ರೆಯಲ್ಲಿ ನಡೆದಿರುವ ಮೋಸ, ಶಾಸನಗಳಲ್ಲಿ ನಿರ್ದೇಶಿಸಿರುವ ದಲಿತ ಸಂಸ್ಕೃತಿ, ಕರ್ನಾಟಕ ರಾಜವಂಶಗಳು ಮತ್ತು ದಲಿತರು, ಎಲ್ಲಮ್ಮಪಂಥ, ತಾಯಿಪಂಥ, ತಾಂತ್ರಿಕ ಪಂಥ, ದಲಿತ ಸಂಸ್ಕೃತಿ ಮತ್ತು ವೈಜ್ಞಾನಿಕತೆ, ದಲಿತ ತತ್ವಜ್ಞಾನ ಮೊದಲಾದ ಸಂಗತಿಗಳನ್ನು ಚರ್ಚಿಸಿರುವರು. ಈ ಮೂಲಕ ಏಕಸಂಸ್ಕೃತಿಯ ಕಲ್ಪನೆಯನ್ನು ಒಡೆದು

ಬಹುಸಂಸ್ಕೃತಿಗಳನ್ನು ಶೋಧಿಸಿ ಚರಿತ್ರೆಯನ್ನು ಪುನರ್ ನಿರ್ಮಿಸುವ ಬದ್ಧತೆಯ ಕಾಯಕ ಪೂರೈಸಿದ್ದಾರೆ. ಈ ಬದ್ಧತೆಯನ್ನು ಶೋಧನೆ ಹಾಗೂ ಬೋಧನೆಯಲ್ಲಿ ಮಾತ್ರವಲ್ಲದೆ ತಮ್ಮ ಬದುಕಿನುದ್ದಕ್ಕೂ ಜೀವಂತವಾಗಿಟ್ಟುಕೊಂಡು ಬರೆದವರು ಎಸ್.ಎಸ್.ಹಿರೇಮಠರು ಎಂಬುದು ಹೆಮ್ಮೆಯ ಸಂಗತಿ.

'ಮಾದಾರ ಚೆನ್ನಯ್ಯನ ನಾಡಿನಲ್ಲಿ' ಎಂಬ ಕೃತಿಯಲ್ಲಿ ಹಿರೇಮಠರು ತಾವು ಈಗಾಗಲೇ ಕೈಗೊಂಡಿದ್ದ ದಲಿತತ್ವ ಶೋಧನೆಯ ಹೊಸಸಾಧ್ಯತೆ ಹಾಗೂ ಹೊಸಸೇರ್ಪಡೆಯನ್ನು ಮಾಡಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ನೆಲಮೂಲದ ದಲಿತ ಸಂಸ್ಕೃತಿಯ ಆಧುನಿಕ ರೂಪರೇಖೆಗಳನ್ನು ಆದಿಮತೆಯ ಅನುಸಂಧಾನದಲ್ಲಿ ಮುಖಾಮುಖಿಯಾಗಿಸುತ್ತಾ ಈ ಹೊತ್ತಿಗೂ ವಾಸ್ತವವೆನಿಸುವ ದಲಿತತತ್ವದ ಬಹುಮುಖಗಳನ್ನು ದರ್ಶಿಸಿದ್ದಾರೆ. ಕರ್ನಾಟಕದಲ್ಲಿ ವರ್ಣ-ಜಾತಿ ಸಮಸ್ಯೆ, ವರ್ಗ; ವರ್ಣ-ಜಾತಿ ಸಮಸ್ಯೆಗಳ ಅಂತರ್‌ಸಂಬಂಧ, ದಲಿತ-ಮುಸ್ಲಿಂರ ಐಕ್ಯತೆಯ ಸಾಧ್ಯಾಸಾಧ್ಯತೆ, ನಾಶವಾಗಬೇಕಾದದ್ದು ಜಾತಿಯೇ ಧರ್ಮವೇ? ಬ್ರಾಹ್ಮಣ ಸಮಾಜ ದ್ರಾವಿಡ ಮೂಲದ್ದೇ? ದ್ರಾವಿಡವಾದ ಎಷ್ಟು ಸರಿ? ಆಂತರಿಕ ಬಿಕ್ಕಟ್ಟಿನಲ್ಲಿ ಕ್ರಾಂತಿಕಾರಿಗಳು, ದಲಿತರ ನೇತೃತ್ವವೇ ಯಾಕೇ?, ಮಾದಾರ ಚೆನ್ನಯ್ಯನ ಮತ ಮತ್ತು ಮತಾಂತರ, ಸಾಮಾಜಿಕ ಸಮಾನತೆಯ ಸತ್ವ, ದಲಿತವಾದಿ ಬದ್ಧತೆ ಮೊದಲಾದ ಸಂಗತಿಗಳನ್ನು ಲೋಹಿಯಾ-ಅಂಬೇಡ್ಕರ್-ಗಾಂಧಿ ಮೊದಲಾದ ಚಿಂತಕರ ಕಣ್ಣೋಟದಲ್ಲಿ ಮೌಲ್ಯೀಕರಿಸಿದ್ದಾರೆ. ಇಲ್ಲಿ ಕಾಣುವ ದಲಿತತ್ವ ಪರವಾದ ಹಿರೇಮಠರ ವಸ್ತುನಿಷ್ಠ ದೃಷ್ಟಿಕೋನ, ಆಳವಾದ ಶೋಧನಪ್ರಜ್ಞೆ, ಪರಂಪರೆಯೊಂದಿಗಿನ ಆಧುನಿಕ ಅನುಸಂಧಾನ ಚಿಂತನೆ, ಸಮಕಾಲೀನ ಪ್ರಜ್ಞೆ ಹಾಗೂ ಪ್ರಖರ ವೈಚಾರಿಕತೆಗಳು ಅನುಕರಣೀಯವಾದುವು.

ಭಾರತೀಯ ಪ್ರಾಚೀನ ದರ್ಶನಗಳ ಸರಣಿಯಲ್ಲಿ ಪಾಶುಪತ ದರ್ಶನ, ಕಾಳಾಮುಖ ದರ್ಶನ, ಲಾಕುಳ ದರ್ಶನ, ಯೋಗದರ್ಶನ, ಲೋಕಾಯತ ದರ್ಶನ ಕೃತಿಗಳನ್ನು ಹಿರೇಮಠರು ರಚಿಸಿದ್ದಾರೆ. ಭಾರತದ ಅವಿಭಾಜ್ಯ ಭಾಗವಾದ ಕನ್ನಡ ನಾಡಿನ ಸಂಸ್ಕೃತಿಯ ಬೆಳವಣಿಗೆಯಲ್ಲಿ ದರ್ಶನಗಳ ಪಾತ್ರವೇನಿರಬಲ್ಲುದು ಎಂಬ ಪ್ರಶ್ನೆ ತುಂಬ ಮಹತ್ವದ್ದು. ಭಾರತದಲ್ಲಿ ತುಂಬ ಪ್ರಾಚೀನ ಕಾಲದಿಂದಲೂ ಹಲವಾರು ದರ್ಶನಗಳು ಪ್ರಚಲಿತವಿದ್ದವು. ಆಸ್ತಿಕ-ನಾಸ್ತಿಕ ಎಂಬ ಪ್ರಧಾನ ಪ್ರಭೇದಗಳ ಮೂಲಕ ನಮ್ಮ ದೇಶದ 'ದರ್ಶನ' ಪರಂಪರೆ ತುಂಬ ಪ್ರಾಚೀನ ಕಾಲದಿಂದ ಬೆಳೆದು ಬಂದಿದೆ. ಅದು ನಾಡಿನ ಪ್ರಗತಿಗಾಗಿ ನಡೆದ ಹೋರಾಟಗಳಿಗೆ ನಿರ್ದಿಷ್ಟ ದೃಷ್ಟಿಕೋನವನ್ನು ಮತ್ತು ತಾತ್ವಿಕ ನೆಲೆಗಳನ್ನು ಒದಗಿಸುತ್ತ ಬಂದಿದೆ. ಜಾತಿ, ಧರ್ಮ, ಮತ, ಪಂಥ, ಕೋಮುಗಳ ಪ್ರಭಾವ ದಟ್ಟವಾಗಿರುವ ಹಿನ್ನೆಲೆಯಲ್ಲಿ ಮತ್ತು ಅವುಗಳಿಂದ ಉಂಟಾಗುತ್ತಿರುವ ನಾನಾ ಬಗೆಯ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳಬೇಕಾದ ಅವಶ್ಯಕತೆಯಿರುವಲ್ಲಿ ದರ್ಶನಗಳ ಪಾತ್ರವೇನೆಂಬ ಪ್ರಶ್ನೆ ಪ್ರಸ್ತುತವೆನಿಸುತ್ತದೆ. ಆಧುನಿಕ ಪೂರ್ವ ಕಾಲಘಟ್ಟದಲ್ಲಿ ಜಾತಿ, ಧರ್ಮಾದಿಗಳು ಹುಟ್ಟು ಹಾಕಿದ್ದ ಸವಾಲುಗಳನ್ನು ನಮ್ಮ ಸಂಸ್ಕೃತಿ ಪರಂಪರೆಗಳು ಸ್ವೀಕರಿಸಿದ ಮತ್ತು ಎದುರಿಸಿದ ಸಂದರ್ಭ ಹೇಗಿತ್ತು ಮತ್ತು ಪರಿಹಾರಗಳೇನಿದ್ದವು? ಈ ಹಿನ್ನೆಲೆಯಲ್ಲಿ 'ದರ್ಶನ'ಗಳ ಪಾತ್ರದ ಪ್ರಾಮುಖ್ಯತೆ ಗೊತ್ತಾಗುತ್ತದೆ ಎಂದು ದರ್ಶನಗಳ ಶೋಧನೆಗೆ ಇಳಿದ ಹಿರೇಮಠರು ರಚಿಸಿದ ದರ್ಶನ ಕೃತಿಗಳು ದಾರ್ಶನಿಕತೆಯ ತೋರುದಾರಿಗಳಾಗಿವೆ.

ಒಂದು ನಾಡಿನ ಅಥವಾ ಸಮುದಾಯದ ಸಂಸ್ಕೃತಿಯಲ್ಲಿ 'ದರ್ಶನ'ಗಳ ಪಾತ್ರ ಪ್ರಧಾನ. ಜಾಗತಿಕ ದೃಷ್ಟಿಕೋನ, ಅಥವಾ ಲೋಕದೃಷ್ಟಿಗಳನ್ನು ರೂಪಿಸುವ ದರ್ಶನಗಳು ಸಂಸ್ಕೃತಿಯನ್ನು ಪ್ರಭಾವಿಸುತ್ತವೆ. ಕರ್ನಾಟಕದ ಇದ್ದುಳ್ಳವರ ಮತ್ತು ಇಲ್ಲದವರ ಸಂಸ್ಕೃತಿಗಳಲ್ಲಿ ಯಾವ ಯಾವ ದರ್ಶನಗಳು ದುಡಿದಿವೆ ಎಂಬುದನ್ನು ಶೋಧಿಸುವ ಆಶಯದಲ್ಲಿ ಎಸ್.ಎಸ್.ಹಿರೇಮಠರ 'ಸಾಂಖ್ಯ', 'ಪಾಶುಪತ', 'ಕಾಳಾಮುಖ', 'ಲಾಕುಳ',

ಯೋಗ' ಹಾಗೂ 'ಲೋಕಾಯತ' ದರ್ಶನಗಳನ್ನು ಕುರಿತು ಮಹತ್ತರವಾದ ಸಂಶೋಧನ ಗ್ರಂಥಗಳು ಮೂಡಿಬಂದಿವೆ; ದರ್ಶನ ಶೋಧನೆಯಲ್ಲಿ ಮೌಲ್ಯಯುತ ಸ್ಥಾನಮಾನಕ್ಕೆ ಪಾತ್ರವಾಗಿವೆ. ವೈದಿಕೇತರ ಸಾಂಸ್ಕೃತಿಕ ಜ್ಞಾನಪರಂಪರೆ, ತಾತ್ವಿಕ ಒಳನೋಟಗಳು ಮತ್ತು ಜೀವನ ದರ್ಶನಗಳು ಅನಾತ್ಮವಾದಿಯಾದ ಶುದ್ಧ ಭೌತವಾದವಾಗಿ ಮತ್ತೆ ಪಾರಂಪರಿಕ ಪ್ರಮುಖ ಪ್ರವಾಹಸ್ಥಾನ ಪಡೆಯಬೇಕಾದ ಸಾಂಸ್ಕೃತಿಕ ತುರ್ತಿನ ಈ ದಿನಮಾನಗಳಲ್ಲಿ ಅವೈದಿಕ ದರ್ಶನ ಪರಂಪರೆಗಳೆಡೆಗೆ ಪ್ರೊ. ಹಿರೇಮಠರು ಸಾಂಖ್ಯ ದರ್ಶನದ ಮೂಲಕ ಕೈಮರ ತೋರಿಸಿದ್ದಾರೆ. ಅವರ 'ಸಾಂಖ್ಯದರ್ಶನ'ವು ದರ್ಶನ ಪರಂಪರೆಗಳ ಪ್ರಸ್ತಾಪ ಮತ್ತು ವೈದಿಕ ಸಾಂಸ್ಕೃತಿಕ ಆಧಿಪತ್ಯದಿಂದ ಆದ ಪ್ರತಿಕೂಲತೆಯ ಬಗ್ಗೆ ಒಂದು ಪ್ರವೇಶಿಕೆಯನ್ನು ತೆರೆದಿರಿಸಿದೆ ಎನ್ನಬಹುದು. ಶಾಸ್ತ್ರೀಯ ಹಾಗೂ ಜಾನಪದೀಯ ನೆಲೆಗಳಲ್ಲಿ ಒಡಮೂಡಿ ಬಂದಿರುವ 'ಕಾಳಾಮುಖ ದರ್ಶನ'ವನ್ನು ಕುರಿತಾದ ಹಿರೇಮಠರ ಶೋಧನೆಯನ್ನು ಪರಿಶೀಲಿಸುತ್ತಾ ಮೇರುವಿದ್ವಾಂಸರಾದ ಎಂ.ಎಂ.ಕಲ್ಬುರ್ಗಿ ಅವರು, "ದೊಡ್ಡ ಅಭ್ಯಾಸ, ದೊಡ್ಡ ಶ್ರಮಗಳನ್ನು ಪ್ರತಿನಿಧಿಸುವ ಈ ಕೃತಿಗಾಗಿ ನಿಮ್ಮನ್ನು ಪ್ರೀತಿಯಿಂದ ಅಭಿನಂದಿಸುತ್ತೇನೆ. ಇಲ್ಲಿಯ ಕೆಲವು ಅಭಿಪ್ರಾಯಗಳನ್ನು ಒಪ್ಪದಿದ್ದರೂ. ಈ ಬರವಣಿಗೆ ನನಗೆ ಕೆಲವು ಹೊಸ ಹಾದಿಗಳನ್ನು ತೋರಿಸಿದೆ. ನಿಮ್ಮಿಂದ ಪರಾಜಿತನಾಗುವುದು ನನಗೆ ಸಂತೋಷದ ವಿಷಯವೆಂದು ಬೇರೆ ಹೇಳಬೇಕಿಲ್ಲ" ಎಂದಿರುವುದು ಕನ್ನಡ ಸಂಶೋಧನ ಜಗತ್ತಿನ 'ಹಳೆಬೇರು ಹೊಸಚಿಗುರು'ತನಕ್ಕೆ ಹಿಡಿದ ಕನ್ನಡಿಯಂತಿದೆ.

ಭಾರತೀಯ ಶೈವ ಪ್ರಪಂಚದ ಕೆಲ ಗ್ರಹಿತ ನಂಬಿಕೆಗಳನ್ನು ಸಾಧಾರವಾಗಿ ನಿರಾಕರಿಸುತ್ತಾ ಮಹತ್ವಪೂರ್ಣ ದರ್ಶನವಾದ 'ಪಾಶುಪತ ದರ್ಶನ'ವನ್ನು ಕುರಿತು ಹಿರೇಮಠರು ಕೈಗೊಂಡ ಶೋಧನೆಯು ಕಡಲನ್ನು ಹಿಡಿಯೊಳಡಗಿಸಿದಂತಿದೆ. ಕೇವಲ ನೂರೆಂಟು ಪುಟಗಳಲ್ಲಿ ಅವರು ಒದಗಿಸುವ ಶಾಸ್ತ್ರ, ಶಾಸನ ಮತ್ತು ಇನ್ನಿತರ ಆಕರಗಳ ಮಾಹಿತಿ ದಿಗ್ಭ್ರಮೆಗೊಳಿಸುವಂಥದ್ದು. ಇಲ್ಲಿ ವಿಸ್ತರಿತವಾದ 'ಪಾಶುಪತ ದರ್ಶನ'ವು ಪ್ರಾಚೀನದಿಂದ ಆಧುನಿಕ ಕಾಲದ ವರೆಗಿನ ಚರ್ಚಾ-ಹರವನ್ನು ಪಡೆದುಕೊಂಡಿದೆ. ಪ್ರಕೃತಿ ಪ್ರಧಾನ ಸಾಂಖ್ಯತತ್ವ ಹಾಗೂ ಪುರುಷ ಪ್ರಧಾನ ಪಾಶುಪತ ತತ್ವಗಳೆರಡೂ ಅವೈದಿಕ ಎಂದರೆ ದ್ರಾವಿಡ ದರ್ಶನಗಳೆಂಬುದರತ್ತ ನಮ್ಮ ಗಮನ ಸೆಳೆಯುತ್ತಾರೆ. ರುದ್ರನನ್ನು ಪಾಶುಪತದ ಹೊರಗಿಟ್ಟು ನೋಡುವ ಪ್ರಯತ್ನ ಕುತೂಹಲಕಾರಿಯಾಗಿದೆ. ಪಾಶುಪತ ದರ್ಶನದ ಪ್ರಾಚೀನತೆಯನ್ನು ಸಿಂಧು ನಾಗರೀಕತೆಯ ಉಪಲಬ್ಧ ಕುರುಹುಗಳಿಂದ, ಪ್ರಾಚೀನ ತಮಿಳು ಹಾಗೂ ಸಂಸ್ಕೃತ ಕೃತಿಗಳ ಆಧಾರದಿಂದ ಗುರುತಿಸಿದ್ದಾರೆ. ಭೌತ ನಿರೀಶ್ವರ ತಳಹದಿಯಲ್ಲಿ ರೂಪುಗೊಂಡು ವೈದಿಕರ, ಭಾವನಾವಾದಿಗಳ ಸೊತ್ತಾಗಿ ಮಾರ್ಪಾಟುಗೊಂಡ ದರ್ಶನಗಳನ್ನು ಬಣವೆಯಲ್ಲಿನ ಸೂಜಿಯನ್ನು ಹುಡುಕುವಷ್ಟು ತಾಳ್ಮೆಯಿಂದ ಮುಖ್ಯವಾಗಿ ಎಡಪಂಥೀಯ ವಿಚಾರವಾದದ ಮೂಲಕ ಲೇಖಕರು ವಿಶ್ಲೇಷಿಸಿರುವ ಬಗೆಯು ಅಪೂರ್ವವಾದುದು.

ಭಾರತದೇಶವ್ಯಾಪಿಯಾಗಿ ಹರಡಿದ್ದ ಪ್ರಾಚೀನತಮ ಸಿದ್ಧಾಂತವಾಗಿದ್ದ 'ಲೋಕಾಯತ ದರ್ಶನ'ವು ಕರ್ನಾಟಕದಲ್ಲಿ ಹೇಗೆ ಬಾಳಿ ಬದುಕಿತ್ತೆಂಬ ನೆಲೆಯಲ್ಲಿ ಚರ್ಚೆ ಮಾಡುವಾಗ ಹಿರೇಮಠರು ಬೌದ್ಧ, ಜೈನ, ವೈದಿಕ ಆಕರಗಳನ್ನು ಬಳಸಿಕೊಂಡಿದ್ದಾರೆ. ದೇವಿಪ್ರಸಾದ ಚಟೋಪಾಧ್ಯಾಯರಂಥ ಪ್ರಕಾಂಡ ವಿದ್ವಾಂಸರು ತೋರಿರುವ ಮಾರ್ಗದಲ್ಲಿ ಪರಿಶ್ರಮ ಪಟ್ಟು ನಿರಂತರವಾಗಿ ಪ್ರಯಾಣಿಸುತ್ತಲೆ (ಲೋಕಾಯತ) ಅದರ ಆಚೆ ಇನ್ನೂ ಬಗಿಯುವುದಿದೆ ಎಂಬ ಪ್ರಯತ್ನ ಇಲ್ಲಿಯದು. ಈ ಸಂದರ್ಭದಲ್ಲಿ ದೇವಿಪ್ರಸಾದರ ಗಮನಕ್ಕೆ ಬರದೇ ಇದ್ದಿರಬಹುದಾದ ಸಂಗತಿಗಳತ್ತಲೂ ಕಣ್ಣಿಡಬೇಕಾಗುತ್ತದೆ ಎಂದು ಕನ್ನಡದ ದೇಶಿ ನೆಲೆಯಲ್ಲಿ ಲೋಕಾಯತ ಮಾಡಿರಬಹುದಾದ ಪ್ರಭಾವಗಳನ್ನು ಗುರುತಿಸಿದ್ದಾರೆ. ಅವರೇ ಹೇಳಿದಂತೆ, ಇಂಥ ಯಾವ ಪ್ರಯತ್ನವೂ ಪೂರ್ಣವಲ್ಲವಾದರೂ ಅಧ್ಯಯನ, ಸಂಶೋಧನೆ,

ನಿರಂತರ ಪ್ರಕ್ರಿಯೆ ನಡೆಯಬೇಕಾಗಿರುವ ದಾರಿಯು ದೀರ್ಘವಾದುದು. ಈ ದಾರಿಯಲ್ಲಿ ಹೋಗುತ್ತ, ಹೋಗುತ್ತ ಬೇರೆ, ಬೇರೆ ದಿಕ್ಕುಗಳ ಕವಲುಗೊಳ್ಳುವ ದಾರಿಗಳು, ಕಾಣುವ ಬೇರೆ, ಬೇರೆ ಲೋಕಗಳು ನಮ್ಮನ್ನು ಚಕಿತಗೊಳಿಸುತ್ತವೆ, ಸಂತುಷ್ಟರನ್ನಾಗಿ ಮಾಡುತ್ತವೆ ಎಂದಿರುವುದು ಗಮನಾರ್ಹ. ವಸ್ತುನಿಷ್ಠ ದೃಷ್ಟಿಯಿಂದ ದರ್ಶನಗಳನ್ನು ವಿಮರ್ಶಿಸಿ, ಸತ್ಯವನ್ನು ಸಾರುವ ಹಿರೇಮಠರ ನಿರ್ಭೀತ ನಿಲುವು ಮೆಚ್ಚುವಂಥದ್ದಾಗಿದೆ. ಹೀಗೆ, ಕರ್ನಾಟಕದ ಚರಿತ್ರೆ ಮತ್ತು ಸಂಸ್ಕೃತಿ ಪರಂಪೆಯ ಸಮಗ್ರ ತಿಳುವಳಿಕೆಗೆ ಅಗತ್ಯವಿದ್ದ ದರ್ಶನಗಳ ಅಧ್ಯಯನದ ಗಂಭೀರ ಕೊರತೆಯನ್ನು ಈ ದರ್ಶನ ಮಾಲಿಕೆ ತುಂಬಿಕೊಟ್ಟಿದೆ ಎಂಬುದನ್ನು ಮರೆಯಲಾಗದು.

ಭಾರತೀಯ ಬಹುಸಂಸ್ಕೃತಿಯ ವಿರಾಟ್ ದರ್ಶನ ಮಾಡಿಸುವ ಸಂಶೋಧಕರೂ ಪ್ರಗತಿಪರ ಚಿಂತಕರೂ ಆಗಬಲ್ಲ ವಿದ್ವಾಂಸರ ಸಂಖ್ಯೆ ಬೆರಳೆಣಿಕೆಯಷ್ಟು. ಅಲ್ಲಿಯೂ ಹೊಸ ವಾದಗಳನ್ನು ಮಂಡಿಸುವವರು ಇನ್ನೂ ವಿರಳ. ಇಂಥ ವಿರಳ ಸಂಖ್ಯೆಯ ವಿದ್ವಾಂಸರಲ್ಲಿ ಪ್ರೊ. ಎಸ್.ಎಸ್.ಹಿರೇಮಠರು ಪ್ರಮುಖರಾಗಿದ್ದಾರೆ. ವಿದ್ವಾಂಸರಾದ ಪುರುಷೋತ್ತಮ ಬಿಳಿಮಲೆ ಅವರ ಅಭಿಮತದಂತೆ, ಇಂದಿನ ಅತ್ಯುತ್ತಮ ಸಂಶೋಧಕನೊಬ್ಬ ಎಲ್ಲರನ್ನು ತೃಪ್ತಿಗೊಳಿಸಬಲ್ಲ ಹಾದಿಗಳಿಗಾಗಿ ಹುಡುಕಾಟ ನಡೆಸಲಾರ. ಬದಲು ಎಲ್ಲರನ್ನೂ ಚಿಂತನೆಗೆ ಹಚ್ಚುವ ಪ್ರಶ್ನೆಗಳನ್ನು ಎತ್ತುತ್ತಾನೆ. ಹಿರೇಮಠರು ಅಂಥ ಅನೇಕ ಪ್ರಶ್ನೆಗಳನ್ನು ಎತ್ತಿದ್ದಾರೆ ಎಂಬ ಕಾರಣಕ್ಕೆ ಮುಖ್ಯರಾಗುತ್ತಾರೆ. ಕರ್ನಾಟಕ ಸಂಸ್ಕೃತಿಯನ್ನು ಅಧ್ಯಯನ ಮಾಡುವ ಯಾರೂ ಎಸ್.ಎಸ್.ಹಿರೇಮಠರ ಸಂಶೋಧನ ಕೃತಿಗಳನ್ನು ಗಮನಿಸದೆ ಮುಂದೆ ಹೋಗುವಂತಿಲ್ಲ ಎಂಬುದು ಅವರ ಶೋಧನೆಯ ಹೆಗ್ಗಳಿಕೆಯಾಗಿದೆ. ಹೀಗೆ, ಎಸ್.ಎಸ್.ಹಿರೇಮಠರ ಸಂಶೋಧನ ಕೃತಿಗಳು ಚಿಂತಕರಿಗೆ, ಸಂಶೋಧಕರಿಗೆ ಹಾಗೂ ಹೋರಾಟಗಾರರಿಗೆ ಅಮೂಲ್ಯವಾದ ಆಕರ ಗ್ರಂಥಗಳಾಗಿವೆ.

ಪ್ರಸ್ತುತ ಆಯ್ದುಕೊಳ್ಳಲಾಗಿರುವ ಸಂಶೋಧನ ಲೇಖನವು ಪ್ರೊ.ಎಸ್.ಎಸ್. ಹಿರೇಮಠ ಅವರ 'ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ: ಭಾಗ-2 ಜಾತ್ರೆಗಳು' ಕೃತಿಯೊಳಗಿನ (ಪುಟ 253ರಿಂದ 295) ಒಂದು ಭಾಗವಾಗಿದೆ. ಕರ್ನಾಟಕದ ಜಾತ್ರೆಗಳನ್ನು ಆಧರಿಸಿ ನಡೆಸಲಾಗಿರುವ ಸಂಶೋಧನೆಯಲ್ಲಿ ದಲಿತ ಸಾಂಸ್ಕೃತಿಕ ಪರಂಪರೆಯ ಅನನ್ಯ ಸಂಗತಿಗಳನ್ನು ಹಿರೇಮಠರು ದಾಖಲಿಸಿದ್ದಾರೆ. ನೆಲಮೂಲ ದಲಿತ ಸಂಸ್ಕೃತಿಯ ವೈಶಾಲ್ಯತೆ, ಮಾತೃಸಂಸ್ಕೃತಿ ಮತ್ತು ದಲಿತತತ್ವದ ಅಂತರ್ಯ, ಕೃಷಿ ಸಂಸ್ಕೃತಿ ಮತ್ತು ಜಾತ್ರೆಗಳ ವೈವಿಧ್ಯತೆ, ಕರ್ನಾಟಕದ ದಲಿತರಾಗಿ ಹೊಲೆಯರು ಮತ್ತು ಮಾದಿಗರು, ಹೊಲೆಮಾದಿಗರಲ್ಲಿ ಮೂಡಿಬಂದ ಎಡಗೈ-ಬಲಗೈ ಭೇದದ ಪೂರ್ವೋತ್ತರಗಳ ವಿವೇಚನೆ, ದಲಿತತತ್ವದ ಆದಿಮತೆ ಮತ್ತು ಆಧುನಿಕತೆಗಳನ್ನು ಸಮೃದ್ಧವಾದ ಆಕರ-ಆಧಾರಗಳಿಂದ ವಿಶ್ಲೇಷಣೆ ಮಾಡಲಾಗಿದೆ. ದಲಿತ ಸಂಸ್ಕೃತಿಯ ಇತಿಹಾಸ ಮತ್ತು ವರ್ತಮಾನ ಕುರಿತಾದ ಗುರುತರವೂ ಮಾರ್ಗದರ್ಶಿಯೂ ಆದ ಸಂಶೋಧನೆಗೆ ಸಾಕ್ಷಿಯಾಗಿ 'ಕರ್ನಾಟಕದಲ್ಲಿ ದಲಿತರು' ಲೇಖನವು ಅಧ್ಯಯನಯೋಗ್ಯವಾಗಿದೆ.

**KEYWORDS:**

ಮಾದಿಗ, ಹೊಲೆಯ, ಕಪ್ಪೆ ಹೊಲೆಯ, ಕರ್ನಾಟಕ, ಕುರುಬ, ಚಲವಾದಿ, ದಲಿತರು.

ಮೈಸೂರು ಭಾಗದ ಮಾದಿಗರಲ್ಲಿ ವೈಷ್ಣವ, ಶೈವ, ಶಾಕ್ತ ಪಂಥೀಯರಿದ್ದು 5 ಮಠಗಳು, ಐವರು ಗುರುಗಳು ಇವರಿಗಿದ್ದಾರೆ. ಮಠಗಳು ಕಡವೆ, ಕೋಡಿಹಳ್ಳಿ, ಕೊಂಗಲ್ಲಿ, ನೆಲಮಂಗಲ, ಕೊಂಕಲ್ಲುಗಳಲ್ಲಿವೆ. ಇವರಿಗೆ ಜಾಂಬವರು, ಮಾತಂಗರು ಎನ್ನುತ್ತಾರೆ. ಇವರಲ್ಲಿ ದೇಶ ಭಾಗದವರು ವೈಷ್ಣವರು, ಮಲ್ಲರು, ಬಿಲ್ಲೋರು, ಅಮರಾವತಿಯವರು, ಮುನಿಗಳು, ಎನಮಲೋರು (ಎಮ್ಮೆ, ಕೋಣ) ಮೊರಬುವ್ವದವರು (ಮೊರದಲ್ಲಿ ಅನ್ನ ಇಡುವವರು) ಎಂಬ ಆರು ವಿಭಾಗಗಳಿವೆ. ಇತರರಿಗೆ ದೇಶ ಭಾಗದವರ ಜತೆ ಸಂಬಂಧವಿಲ್ಲ.

'ಮುನಿಗಳು' ಎಂಬ ಭಾಗ ವೈದಿಕರಲ್ಲಿಯ ಋಷಿಗಳನ್ನು ನೆಸಪಿಸುತ್ತದೆ, ಆದರೆ ಋಷಿ ಸಂಪ್ರದಾಯ ಬೆಳೆದು ಬಂದಂತೆ ದ್ರಾವಿಡರಲ್ಲಿ ಈ ಮುನಿ ಸಂಪ್ರದಾಯ ಬೆಳೆಯಲಿಲ್ಲ, ಜಾಂಬವ ಮುನಿ ಮೊದಲಾದವರ ಕೊಡುಗೆಯ ಕುರಿತು ಏನೂ ತಿಳಿಯದ್ದು ದುರ್ದೈವವೇ. ಎಮ್ಮೆ ಅಥವಾ ಕೋಣವನ್ನು ಉಪವಿಭಾಗವಾಗಿ ಗುರುತಿಸಿಕೊಂಡಿರುವುದು ಕೋಣಬಲಿಗೂ ದಲಿತರಿಗೂ ಇರುವ ಸಂಬಂಧವನ್ನು ನೆನಪಿಸುತ್ತದೆ.

ಕೂಡ್ಲಿಗಿಯ ಊರಮ್ಮನ ಜಾತ್ರೆಯ ಕುರಿತು Fawcett ಬರೆದುದನ್ನು ಥರ್‌ಸ್ಟನ್ ಉದ್ಧರಿಸುತ್ತಾರೆ: ಅಕ್ಕಿ ಮತ್ತು ರಾಗಿ ಹಿಟ್ಟಿನ ಬುಟ್ಟಿಯಲ್ಲಿ ಒಬ್ಬ ಮಾದಿಗ ಕಡಿದ ಕುರಿಯ ತಲೆಯನ್ನಿಟ್ಟುಕೊಂಡು ತರುತ್ತಾನೆ, ದೇವಿಯ ಎದುರು ತಗ್ಗು ತೆಗೆದು ಹುಗಿಯುತ್ತಾನೆ. ಬಸವಿಯರು ವಾದ್ಯ ಮೇಳದಲ್ಲಿ ಕುಣಿಯುತ್ತಾರೆ. 5 ಮಡಕೆಗಳನ್ನು ಅಮ್ಮನ ಪ್ರತೀಕವಾಗಿ ಪೂಜುವದು, ಮಾದಿಗನೊಬ್ಬ ಕೋಣವನ್ನು ಬಲಿಕೊಟ್ಟು ಬಲಗಾಲನ್ನು ಬಾಯಲ್ಲಿಟ್ಟು ಅದರ ಮೇಲೆ ದೀಪವನ್ನಿಡುವದು. ಬೇವಿನುಡೆಯುಟ್ಟು, ಮದುವೆ ಆಗಿರದ ಮತ್ತು ಬಸವಿಯ ಮಗನಾಗಿರದ ಮಾದಿಗನ ಮೈಯಲ್ಲಿ ದೇವಿ ಬರುವದು, ಇವನನ್ನು ಮೆರವಣಿಗೆಯಲ್ಲಿ ಒಯ್ಯುತ್ತಿರುವಾಗ 500 ಸೇರು ಜೋಳ ಹೊತ್ತ ಮಾದಿಗರು ಉಗ್ಗುತ್ತ ಬರುವದು, ಪೋತರಾಜನೆಂಬುವನು ಕುರಿಯ ಗಾವು ಸಿಗಿಯುವದು, ಇಲ್ಲಿಯ ಆಚರಣೆಗಳು.

ಬಂಡ್ರಿಯ ಉಡಿಸಲಮ್ಮ ಎಂಬ ಗ್ರಾಮ ದೇವತೆಯ ವಿವರಗಳು ಇದೇ ಪ್ರಕಾರವಾಗಿದ್ದುದನ್ನು ಥರ್‌ಸ್ಟನ್ ವಿವರಿಸುತ್ತಾರೆ. ಮಚಲಿಪಟ್ಟಣಂ ಎಂಬಲ್ಲಿ ನಡೆಯುವ ಜಾತ್ರೆಯಲ್ಲಿ ಕೊನೆಯ ದಿನ ದೇವರ ಪೋತು ಎಂಬ ಕೋಣವನ್ನು ಬಲಿ ಕೊಡಲಾಗುವುದು. ಊರ ತುಂಬ ಚರಗ ಚೆಲ್ಲುವ ಮಾದಿಗನ ಕೆಲಸ ಬಹಳ ಅಪಾಯಕಾರಿಯಾದುದೆಂದು ಇಲ್ಲಿ ಭಾವಿಸಲಾಗುತ್ತದೆ. ಆದರೆ ಅದು ಆಗತ್ಯವಾಗಿ ಜರುಗಬೇಕಾದ ಕಾರ್ಯ, ಅವನಿಗೆ ರಕ್ತದ ಬಟ್ಟೆಯನ್ನು ಕಟ್ಟಿರುತ್ತಾರೆ. ಭೂತಗಳ ತೃಪ್ತಿಗೆ ಕುರಿಗಳನ್ನು ಕಡಿದು ಎಸೆಯುತ್ತಾರೆ. ಜಾತ್ರೆಯ ಈ 'ಬಲಿಹರಣಂ' ಕೆಲಸಕ್ಕೆ ಹಲವೆಡೆ ಮಾದಿಗರಿಗೆ ಇನಾಂ ಜಮೀನುಗಳಿವೆ.

ಸೊಂಡೂರು ತಾಲೂಕಿನ ಹಳ್ಳಿಗಳಲ್ಲಿ ಅಮ್ಮನ ಜಾತ್ರೆಗಳಲ್ಲಿ 'ಭೂತಪಲ್ಲಿ' ಎಂದು, ಹರಿಜನನೊಬ್ಬ ಬತ್ತಲೆಯಾಗಿ ನಡುರಾತ್ರಿ ಊರಗಡಿಯ ಸುತ್ತ ಚರಗ ಚಲ್ಲುವ ಸಂಪ್ರದಾಯವಿದೆ.

ಕನ್ನಡ ನಾಡಿನ ಹೊಲೆಯರ (ಆದಿ ಕರ್ನಾಟಕ) ಕುರಿತ ಸಂಗತಿಗಳೂ ಇವರೇ

ಮೂಲ ಕೃಷಿಕರೆಂಬ ವಾದವನ್ನು ಗಟ್ಟಿಗೊಳಿಸುತ್ತವೆ. ಹೊಲೆಯ ಎಂಬ ಪದ 'ಹೊಲ'ದಿಂದ ಬಂದಿದೆ ಎಂದು ದಲಿತರಲ್ಲಿ ನಂಬಿಕೆ ಇದ್ದರೆ, 'ಹೊಲಸು' ಎಂಬ ಶಬ್ದದಿಂದ ಬಂದಿದೆ ಎಂದು ಬ್ರಾಹ್ಮಣರು ವಾದಿಸುತ್ತಾರೆಂದು ಥರ್‌ಸ್ಟನ್ ಹೇಳುವುದು ಸಮಂಜಸವೇ. ಭೂತಾರಾಧಕರಾದ ಇವರಲ್ಲಿ ಮಾರಿ, ಮೇರ, ಮಂಡಲ (ಬಾಕುಡ) ಎಂಬ ಭಾಗಗಳಿದ್ದು, ಹೆಂಡ, ಮಾಂಸ, ಬಲಿಗಳು ಭೂತಗಳ ಆರಾಧನೆಯಲ್ಲಿವೆ. ಕನ್ನಡ, ಗಂಗಡಿಕಾರ, ಮಗ್ಗದ, ಮೊರಸು ಎಂಬ ಉಪವಿಭಾಗಗಳೂ ಹಲವು ಕಡೆಗಿವೆ. ದಕ್ಷಿಣ ಕನ್ನಡದಲ್ಲಿ 'ಮೂಲದ ಹೊಲೆಯ', 'ಸಾಲದ ಹೊಲೆಯ'ರೆಂಬ ಜೀತ ಪದ್ಧತಿ ಇದೆ. 'ಹುಟ್ಟಾಳು', 'ಮಣ್ಣಾಳು' ಎಂದು ಹಲವೆಡೆ ಇವರಿಗೆ ಹೆಸರಿದೆ. ಮೂಲ ಕೃಷಿಕರಾದ ಹೊಲೆ-ಮಾದಿಗರನ್ನು ಜಾತಿ ಬದ್ಧ ಶೋಷಕ ವ್ಯವಸ್ಥೆ 'ಮೂಲಾಳು', 'ಹುಟ್ಟಾಳು' ಎಂಬ ರೂಪದಲ್ಲಿ ಜೀತಗಾರರನ್ನಾಗಿ ಮಾಡಿ ಉಳಿಸಿಕೊಂಡು ಬಂದಿತು. ಈ ಅನುವಂಶಿಕತೆಯ ಇವರು ಮೂಲ ಕೃಷಿಕರೆಂಬುದನ್ನು ಸಾಬೀತು ಪಡಿಸುತ್ತದೆ. ತಮಿಳುನಾಡಿನ ಪರೈಯಾನ್‌ರಲ್ಲೂ ಆನುವಂಶಿಕ ಆಳಿನ ಪದ್ಧತಿ ಇದೆ. ಹಾಸನದ ಕುಳುವಾಡಿಯನ್ನು ಪ್ರತಿಯೊಂದು ಜಾತಿಯವರೂ "dejure" ಎಂದು ಒಪ್ಪುತ್ತಾರೆ.

"All the thousand and one castes, whose members find a home in the village unhesitatingly admit that the Kulawadi is dejure the rightful owner of the village"[1] ಹಳ್ಳಿಯ ಮತ್ತು ಹೊಲಗಳ ಮೇರೆಗಳ ಬಗ್ಗೆ ವಿವಾದ ವಿದ್ದರೆ ಕುಳವಾಡಿಯೇ ಅಧಿಕೃತ ನಿರ್ಣಾಯಕನಾಗುತ್ತಿದ್ದ. ನಿರ್ಣಯವನ್ನು ಮಾಡುವ ಪದ್ಧತಿಯೆಂದರೆ ಕುರವಾಡಿಯ ಮಣ್ಣಿನ ಉಂಡೆಯನ್ನು ಮಾಡಿ ಮಧ್ಯದಲ್ಲಿ ನೀರು ಹಾಕಿ, ತಲೆಯ ಮೇಲೆ ಹೊತ್ತು ಗಡಿಯ ಗುಂಟ ಹೋಗುವುದು. ಸರಿಯಾಗಿ ದಾರಿಯಲ್ಲಿದ್ದರೆ ಸರಿ ಇಲ್ಲದಿದ್ದರೆ ತನ್ನಷ್ಟಕ್ಕೆ ಈ ಮಣ್ಣಿನ ಉಂಡೆ ಒಡೆದು ಚೂರಾಗುತ್ತಿತ್ತು. ಇದರಿಂದಾಗಿ ಮುಂದಿನ 15 ದಿನಗಳಲ್ಲಿ ಕುಳವಾಡಿ ಸಾಯುವನೆಂದು ತಿಳಿಯಲಾಗಿತ್ತು, ಅವನ ಮನೆಯ ಸರ್ವನಾಶವಾಗುತ್ತಿತ್ತು.

ಗಡಿ ವಿವಾದವಿದ್ದಾಗ "ಸಾಕ್ಷಿಗಳು ತಲೆಯ ಮೇಲೆ ಮಣ್ಣು ಹೊತ್ತು ಕೊಂಡು, ಕೆಂಪು ಬಟ್ಟೆಯುಟ್ಟು, ಹೂ ಮುಡಿದುಕೊಂಡು ಸುಳ್ಳಾಡಿದರೆ ತಮ್ಮ ಪುಣ್ಯವು ನಾಶ ಹೊಂದುವುದೆಂದು ಪ್ರತಿಜ್ಞೆ ಮಾಡಿ ನಿರ್ಣಯ ಗೊಳ್ಳಬೇಕು" ಎಂದು ಮನುಸ್ಮೃತಿ ಹೇಳುತ್ತದೆ.[2]

ಮನುಸ್ಮೃತಿಯ ಈ ಹೇಳಿಕೆ ದಲಿತರ ವಿಧಿಯಾಚರಣೆಯನ್ನು ಎಷ್ಟು ನಿಕಟವಾಗಿ ಹೋಲುತ್ತದೆಂಬುದನ್ನು ನೋಡಬಹುದು. ಮನುಸ್ಮೃತಿ ಹೇಳದಿದ್ದರೂ ಈ ಕ್ರಿಯೆ ಆಗಲೂ ದಲಿತರದ್ದೇ ಆಗಿರುವಂತಿದೆ. ಕೆಂಪುಬಟ್ಟೆ, ಹೂ ಮುಡಿಯುವುದು ಈ ಊಹೆಗೆ ಪೂರಕಾಂಶಗಳು. ಇದಕ್ಕೆ ಇನ್ನೂ ಒಂದು ಗಟ್ಟಿಯಾದ ಆಧಾರ ಮನುಸ್ಮೃತಿಯಲ್ಲಿ ಸೂಚಿತವಾಗಿದೆ, ಶಿಲೆ, ಎಲುಬು, ಹೊಟ್ಟು, ಬೂದಿ, ತಲೆಬುರುಡೆ, ಬೆರಣಿ ಸುಟ್ಟ ಇಟಗಿ, ಮಸಿ, ದೊಡ್ಡ ಹರಳು, ಸಣ್ಣ ಮರಳು ಇಂತಹ ಮಣ್ಣಿನಲ್ಲಿ ನಾಶ ಹೊಂದದ ಸಾಮಗ್ರಿಗಳನ್ನು ಮಡಕೆಯಲ್ಲಿ ತುಂಬಿ ನೆಲದೊಳಗೆ ಹೂತು, ಗಡಿ ಗುರುತಿಸಿದ್ದರೆ ಗಡಿ ವಿವಾದವು

ಬರಲಾರದು.[3]

ಊರ ಗಡಿಗಳಲ್ಲಿ ಸತ್ತು ಬಿದ್ದ ಪ್ರಾಣಿಗಳ ಚರ್ಮ ಕುಳವಾಡಿಗೆ ಸೇರುತಿತ್ತು. ಊರು ಸ್ಥಾಪನೆಯಾಗುವಾಗ ನೆಡುತ್ತಿದ್ದ 'ಕರಗಲ್ಲು' ಪೂಜೆಯ ಎಡೆಯನ್ನು ಕುಳವಾಡಿಯೆ ಪಡೆಯುತ್ತಿದ್ದ: "But what I think poroves strongly that the Holiya was the first to take possession of the soil is that the Kulawadi receives and is entitled to receive from the friends of any person who dies in the village. a Certain fee or as my informant forcibly put it, they buy, from him the ground for the dead." ಈಗಲೂ ನೆಲಹಾಗ ಎಂದೂ ಸ್ಮಶಾನ ಭೂಮಿಯನ್ನು ಕುಳವಾಡಿಯಿಂದ ಕೊಳ್ಳಲಾಗುವುದು" ಸ್ಮಶಾನದ ಒಡೆಯರಾದ ಸುಡುಗಾಡು ಸಿದ್ದರಿಗೆ ಕುಳವಾಡಿಯು ಕೆಲವೆಡೆ ವಾರ್ಷಿಕ ವಂತಿಗೆ ಸಲ್ಲಿಸಬೇಕಿತ್ತು. ಕುರುಬ, ಒಕ್ಕಲಿಗ, ನೇಕಾರ, ಬೆಸ್ತ, ಉಪ್ಪಾರ, ಕೊರಮ, ಈಡಿಗ, ಗಾಣಿಗ ಮೊದಲಾದ ಬಲಗೈ ಜಾತಿ ಜನಗಳ ಮದುವೆಯ ಸಂದರ್ಭದಲ್ಲಿ ಕುಳವಾಡಿಯು ಬಸವ, ಲಿಂಗ, ನಾಗಗಳ ಗುರುತು ಇರುವ ಹಿತ್ತಾಳೆಯ ಗುರುತನ್ನು ಹಿಡಿದು ಬರಬೇಕಿತ್ತು.

ಮಲೆನಾಡಿನ ಒಕ್ಕಲಿಗರು ಆಚರಿಸುವ ದೀಪಾವಳಿಯ ಹಬ್ಬದಲ್ಲಿ ದೀಪ ಬೆಳಗುವ ವಿಷಯದಲ್ಲಿ ಸೀಮೆ ಕುಳವಾಡಿಗೆ ವಿಶೇಷ ಸ್ಥಾನವಿದೆ. ಆತ ಗದ್ದೆಗಳಲ್ಲಿ ಎಲ್ಲೆಲ್ಲಿ ದೀಪ ಬೆಳಗಬೇಕೊ ಅಲ್ಲಲ್ಲಿ ಹೂ ಚೆಲ್ಲಿರಬೇಕು. ಹೂ ಚಲ್ಲಿದ್ದರಿಂದ ಪ್ರತಿ ಮನೆಯವರೂ ಅವನಿಗೆ ಒಂದು ತೆಂಗಿನಕಾಯಿ, ಒಂದು ಎಡೆ ಕೊಡುವರು. ವಾಟೆಕಕ್ಕೆ ಲಿಂಗ ಹೂಪಚ್ಚೆ. ಹಿಂಗಾರ ಈ 5ರಲ್ಲಿ ಒಂದನ್ನು ಕಳೆದು ಮಿಕ್ಕ ನಾಲ್ಕು ಬಗೆಯ ಹೂಗಳನ್ನು ಚೆಲ್ಲುತ್ತ ಹೋಗುವನು. ಯಾವ ಹೂ ಬಿಡಬೇಕೆಂಬುದನ್ನು ಸೀಮೆ ಜೋಯಿಸನನ್ನು ಕೇಳಿ ತಿಳಿದಿರುತ್ತಾನೆ. ಕುಳವಾಡಿ ಹಾಕಿ ಹೋದ ಗುರ್ತಿನ ಮೇಲೆ ದೀಪದ ಕೋಲುಗಳನ್ನು ನೆಟ್ಟು 'ದೀಪ್ ದೀಪ್ ದೀಪ್ಪೋಳ್ಗೆ' ಎಂದು ಒಕ್ಕೊರಲಲ್ಲಿ ಕೂಗಿ ದೀಪ ಬೆಳಗುವರು. ಕತ್ತಲೆ ಸಮೀಪಿಸಿದ ಹೊತ್ತಲ್ಲಿ ಗದ್ದೆ, ತೋಟ, ಹಿತ್ತಲು, ಕಣ, ಗೊಬ್ಬರಗುಂಡಿ, ಕೊಟ್ಟಿಗೆ ದೈವದ ಬನ, ಮನೆ ಎಲ್ಲೆಲ್ಲಿಯೂ ದೀಪಗಳು ಬೆಳಗುತ್ತಿರುತ್ತವೆ.[4]

ಹೊಲೆಯರಲ್ಲಿ ಆನೆ, ಮಾಲೆ. ಹುತ್ತ, ಜೇನು, ಮಲ್ಲಿಗೆ ಮೊದಲಾದ ಬೆಡಗುಗಳಿವೆ. ಗಂಗಡಿಕಾರ ಒಕ್ಕಲಿಗರಲ್ಲಿ 'ಹಳೇ ಮಕ್ಕಳ' ಎಂದು ಹೊಲೆಯರನ್ನು ಕರೆಯುವ ರೂಢಿ ಇದೆ. ಹೊಲೆಯ ಮತ್ತು ಒಕ್ಕಲಿಗರ ಬೆಡಗು ಒಂದೇ ಆಗಿರುವವರಲ್ಲಿ ಹೊಲೆಯನ್ನು ಈ ಒಕ್ಕಲಿಗರ ಹೆಣಗಳ ಮುಂದೆ ಬೆಂಕಿಯನ್ನು ಒಯ್ಯುವ ಮಹತ್ವದ ಕೆಲಸ ಮಾಡುವನು. ಹೊಲೆಯರ 50 ಬಳಿಗಳು ಮಹಿಳಾ ಪೂರ್ವಜರಿಂದ ಬಂದುವು ಎಂದು, 1901ರ ಗಣತಿಯ ವರದಿ ಹೇಳುತ್ತದೆ. ಬಾಕುಡ ಹೊಲೆಯರಲ್ಲಿ ಆಳಿಯ ಸಂತಾನ ಪದ್ಧತಿ ಇತ್ತು.

ಆದಿ ದ್ರಾವಿಡ, ಆದಿ ಕರ್ನಾಟಕ ಎಂಬ ಹೆಸರುಗಳು ಹೊಲೆಯರಿಗಿದ್ದು ಹೆಸರೇ ಹೇಳುವಂತೆ, ಈ ಜನ ನಾಡಿಗೆ ಮೊದಲನೆಯವರು ಎಂದಾಗುತ್ತದೆ. ಇಡೀ ದ್ರಾವಿಡ ನಾಡಿನ ಹೊಲೆ-ಮಾದಿಗರ ಬದುಕು ಒಂದೇ ವಿಧವಾಗಿದ್ದು, ಇವರು ಈ ನಾಡಿನ ಮೂಲ ಜನಾಂಗವೆಂಬುದನ್ನು ಹೆಜ್ಜೆ ಹೆಜ್ಜೆಗೂ ಸಾಬೀತುಪಡಿಸುತ್ತಿದೆ. ದ್ರಾವಿಡ ಜಾತಿ ಜನಾಂಗಗಳ

ಆಳವಾದ ಅಧ್ಯಯನ ಮಾಡಿದ ಥರ್‌ಸ್ಟನ್‌ರಂತೂ ಅನುಮಾನವಿಲ್ಲದಂತೆ ಈ ವಿಚಾರವನ್ನು ಸ್ಪಷ್ಟ ಮಾಡುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಲು ಹೊಯ್ಯುವುದು ಎಂಬ ವಿಧಿಯಾಚರಣೆಯಲ್ಲಿ ನಾಗನಕಲ್ಲು ಇರುವ ಬನದ ಪಕ್ಕದ ಪ್ರತಿಯೊಂದು ಗದ್ದೆಯಲ್ಲೂ ಪೂಕರೆ ಮಾಡುತ್ತಾರೆ. ದೊಡ್ಡ ತೆಂಗಿನ ಗಿಡವನ್ನು ಸುತ್ತ ಚಚ್ಚೌಕ ಹಾಕಿ ಪೂಜೆ ಮಾಡುತ್ತರೆ. ಇಂತಹ ಪೂಕರೆ ಗದ್ದೆಯಲ್ಲಿ ಗದ್ದೆ ಗೋರಿ ದಿನ ಮೂರು ಭೂತಗಳ ನೇಮ ನಡೆಸುವರು. ಒಂದನೆ ಗದ್ದೆ ಗೋರಿ ನಡೆಯುತ್ತಿರುವಾಗ ನರ್ತಿಸುವುದು, ಎರಡನೆ ಭೂತ ನರ್ತಿಸುವಾಗ ಒಂದು ಜೊತೆ ಎತ್ತು ಮಾತ್ರ ಗದ್ದೆಯಲ್ಲಿರಬೇಕು, ಇದನ್ನು ಹೊಲೆಯ ಮಾತ್ರ ಉಳಬೇಕು.[5]

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ರಾಣಿಯವ' ಎಂಬ ಹೊಲೆಯ ಜಾತಿಯವರಿದ್ದು ಇವರು ತಮ್ಮನ್ನು ಮಾರಿ ಹೊಲೆಯ, ಮಂಡಲ ಹೊಲೆಯರಿಗಿಂತ ಶ್ರೇಷ್ಠರೆಂದು ಭಾವಿಸುತ್ತಾರೆ. ಇವರಲ್ಲಿ ಮಾರಿಹಬ್ಬ, ಕೋಣ ಬಲಿಗಳ ವಿಧಿಯಾಚರಣೆಗಳಿವೆ. ಭೂತವನ್ನು ಆರಾಧಿಸುತ್ತಾರೆ.[6] 'ರಾಣಿಯವ'ರೇ ಉತ್ತರ ಕರ್ನಾಟಕದಲ್ಲಿ 'ರಾಣಿಗ್ಯಾ' ರಾಗಿರಬೇಕೆನಿಸುತ್ತದೆ. "ತುಳುನಾಡಿನಲ್ಲಿ ಈಗ ಇರುವ ಜನಾಂಗಗಳ ಪೈಕಿ ಹೊಲೆಯರು ಇಲ್ಲಿನ ಪ್ರಾಚೀನ ಜನಾಂಗದವರು, ಉಳಿದವರೆಲ್ಲಾ ಬೇರೆ ಪ್ರದೇಶಗಳಿಂದ ತುಳುನಾಡಿಗೆ ವಲಸೆ ಬಂದವರು" ಎಂಬ ಅಭಿಪ್ರಾಯ ತುಳುನಾಡಿನ ಇತಿಹಾಸಕಾರರಲ್ಲಿ ಪ್ರಬಲವಾಗಿದೆ.[7] "ಕಾಡುಗಳಲ್ಲಿ ವಾಸ ಮಾಡುತ್ತಿರುವ ಹೊಲೆಯರ ಕೆಲವು ವರ್ಗಗಳಲ್ಲಿ ಪ್ರಾಚೀನ ಸಂಸ್ಕೃತಿಯ ಪಳೆಯುಳಿಕೆಗಳನ್ನು ಈಗಲೂ ಕಾಣಬಹುದು".[8] ಹೊಲೆಯರನ್ನು ರೂಢಿಯಲ್ಲಿ "ಮೂಲೊಡಕಳು" (ಮೂಲದವರು) ಎನ್ನುವಲ್ಲಿ ಮೂಲ ನಿವಾಸಿಗಳು ಎನ್ನುವ ಧ್ವನಿಯೂ ಇದೆ (ಅದೇ).

ಜಾತಿ ವ್ಯವಸ್ಥೆಯ ಅತ್ಯಂತ ಶ್ರೇಷ್ಟವಾದ ಮತ್ತು ಮೇಲ್ತುದಿಯ ಸ್ಥಾನದಲ್ಲಿರುವ ಬ್ರಾಹ್ಮಣರಿಗಿಂತ ಅತ್ಯಂತ ಕೆಳಗಿರುವ ದಲಿತರೇ ಶ್ರೇಷ್ಠರು ಎಂಬ ವಾದ ಪರಂಪರೆಯಿಂದ ಬಂದುದಾಗಿದೆ; ಇಲ್ಲಿ ಒಂದೆರಡು ನಿದರ್ಶಗಳನ್ನೂ ಕೊಡಬಹುದು.

"ಹೊಲೆಯನು ಚಿತೆಗೆ ಹಾಕಿದ ಮಾಂಸವನ್ನು ಬ್ರಾಹ್ಮಣನು ಯಾವುದೇ ಯೋಚನೆ ಇಲ್ಲದೆ ತೆಗೆದುಕೊಳ್ಳಬಹುದೆಂದೂ ಹಾಗೆ ತೆಗೆದು ಕೊಂಡದ್ದರಿಂದ ಬರಬಹುದಾದ ದೋಷ ನಿವಾರಣೆಗೆ ಮಾಂಸವನ್ನು ಕತ್ತರಿಸಿದ ಹೊಲೆಯನ ಖಡ್ಗಕ್ಕೆ ತನ್ನ ನೊಸಲನ್ನು ಮುಟ್ಟಿಸಿದರೆ ಸಾಕು ಎಂದು ಬ್ರಾಹ್ಮಣರು ಹೇಳುತ್ತಿದ್ದರು.[9]

ಒಂದು ಕಾಲಕ್ಕೆ ಬಹಳ ದೊಡ್ಡ ದೇವತೆಯಾಗಿದ್ದ ಬಳರಿ (ಬಳ್ಳಾರಿ) ಹೊಲೆಯರ ದೇವತೆ, ಮಾರಿ ಮಸಣವಾಸಿಣಿಯರೂ ಹೊಲೆಯರ ದೈವಗಳೇ. ಮಾರಬ್ಬೆ, ಮಸಣವಾಸಿಣಿ, ಬೀರ, ಮೈಲಾರ ದೈವಗಳ ನೋಂಪಿಗಳನ್ನು ತೊಟ್ಟಿರುವ ಬ್ರಾಹ್ಮಣರನ್ನು ಹೊಲೆಯರು ಮುಟ್ಟಿದರೆ ಮೈಲಿಗೆಯಾಗುವುದೆಂದು ಬ್ರಾಹ್ಮಣರೇ ಹೇಳುತ್ತಿದ್ದರು ಎನ್ನುತ್ತಾನೆ ಬ್ರಹ್ಮಶಿವ.[10]

ಶಂಕರಾಚಾರ್ಯರಿಗೆ ಅದ್ವೈತ ವೇದಾಂತವನ್ನು ಬೋಧಿಸಿದವನು ಒಬ್ಬ

ಚಾಂಡಾಲ. ರಾಮಾನುಜಾಚಾರ್ಯರ ಗುರುಗಳು ಒಬ್ಬ ಚಾಂಡಾಲ. ಹರಿಶ್ಚಂದ್ರ ಚಕ್ರವರ್ತಿಯನ್ನು ಕೊಳ್ಳಲು ಮುಂದೆ ಬಂದ ಭೂಪ ಒಬ್ಬ ಚಾಂಡಾಲ. ಭಾರತದ ವೇದ ವೇದಾಂಗ ಪುರಾಣೇತಿಹಾಸಗಳ ಮೂಲ ಪುರುಷ ಒಬ್ಬ ಚಾಂಡಾಲ; ಆಧುನಿಕ ಭಾರತದ ರಾಜ್ಯಾಂಗ ನಿರ್ಮಾಪಕ ಒಬ್ಬ ಚಾಂಡಾಲ. ಚಾಂಡಾಲ ಎಂದರೆ ಹೊಲೆ-ಮಾದಿಗರು. ಇವರೆಲ್ಲರೂ ಅವತಾರ ಪುರುಷರೇ, ಅಪರ ಶಿವರೇ ಅಲ್ಲವೆ?[11]

1893 ರ ಗ್ಯಾಝೆಟಿಯರು ಹೊಲೆಯರನ್ನು ನೀಚ ಜಾತಿಯಲ್ಲಿ ಸೇರಿಸಿದೆ.[12] ತೆಲುಗು ಮತ್ತು ಕನ್ನಡ ಹೊಲೆಯರಿಗೆ ವಿವಾಹ ಸಂಬಂಧವಾಗುವುದು. ಆದರೆ ಮರಾಠಿ ಹೊಲೆಯರ ಜತೆ ಇಲ್ಲ ಎಂಬ ಮಹತ್ವದ ವಿಷಯ ಇಲ್ಲಿ ಉಲ್ಲೇಖಿತವಾಗಿದೆ.

ಹೊಲೆಯ ಜಾತಿಯಲ್ಲಿ 12 ಉಪಜಾತಿಗಳಿವೆ. 1) ಕನ್ನಡ ಹೊಲೆಯ 2) ಕಪ್ಪೆ ಹೊಲೆಯ 3) ಕೆಂಬಟ್ಟೆ ಹೊಲೆಯ 4) ಕೊಂಗೊಲೆಯ 5) ಕೂಡ ಸಾಲ ಹೊಲೆಯ 6) ಗಟ್ಟಿ ಹೊಲೆಯ 7) ತೆಲುಗು ಹೊಲೆಯ 8) ಚಂಗ ಹೊಲೆಯ 9) ಗಂಗಡಿಕಾರ ಹೊಲೆಯ 10) ಮನ್ನಾ ಹೊಲೆಯ 11) ಸಾಮ ಹೊಲೆಯ 12) ಉರ್ಮೆ ಹೊಲೆಯ.[13]

ಕಪ್ಪೆ ಹೊಲೆಯರ ಅಧ್ಯಯನವನ್ನು ಕೈಕೊಂಡ ಕೇಶವ ಪ್ರಸಾದ್ ಕಪ್ಪೆಯನ್ನೂ ಆಹಾರವನ್ನು ವರಾಡಿಕೊಂಡ ತಮಿಳುನಾಡಿನ ಹೊಲೆಯರನ್ನು ಕಪ್ಪೆ ಹೊಲೆಯರು ಎಂದು ಕರೆಯಲಾಗುತ್ತದೆ ಎಂದು ತಿಳಿಸುತ್ತಾರೆ. ದೇವಲೋಕದಲ್ಲಿ ತ್ರಿಮೂರ್ತಿಗಳು ಯಜ್ಞ ಮಾಡುವಾಗ ಭೂಲೋಕದ ಕಪ್ಪೆಗಳ ಕಿರುಚಾಟ ಜಾಸ್ತಿ ಆಗಿ ಅಡ್ಡಿ ಆದಾಗ ಕಪ್ಪೆ ಹಿಡಿದು ತಿನ್ನಲು ಅವರು ಕಳಿಸಿದ ಸೇವಕನ ವಂಶಜರು ಇವರು ಎಂಬ ಕಥೆಯನ್ನು ಲೇಖಕ ಕೊಟ್ಟಿದ್ದಾರೆ.[14] ಕಪ್ಪೆಗಳನ್ನು ಕುದಿಸಿ ಕೊಟ್ಟ ಹೆಂಡತಿಯ ಮಕ್ಕಳು ಕಪ್ಪೆ ಹೊಲೆಯರಾದರೆ, ಹಾಗೆ ಮಾಡಲಾಗದ ಇನ್ನೊಬ್ಬ ಹೆಂಡತಿಯ ಮಕ್ಕಳೇ ಗಟ್ಟಿ (ಕಚ್ಚಿ ) ಹೊಲೆಯರು: ಅವರೂ ಈ ಜನರ ಪಕ್ಕಕ್ಕೆ ಪ್ರತ್ಯೇಕವಾಗಿ ವಾಸವಾಗಿದ್ದಾರೆ.[15]

"ಊರಿಗೆ ಹೊಲೆಯನಿಲ್ಲದಿದ್ದರೆ ಸಾಗುವುದಿಲ್ಲ", "ಉತ್ತಮ ಕುಲದವರು ತಮ್ಮ ಹೆಣ ಸುಡುವಾಗ, ಹುಗಿವಾಗ ಹೊಲೆಯರಿಗೆ ಭೂಮಿಯ ತೆರಿಗೆ ಕೊಡುತ್ತಾರೆ. ಭೂಮೇರೆಗಳಲ್ಲಿ ಹೊಲೆಯರ ಸಾಕ್ಷಿಗೆ ಬಹಳ ಬೆಲೆ ಇರುತ್ತದೆ. ಹೊಲಗಳಲ್ಲಿ ರಾಶಿ ಆಗುವಾಗ, ರೈತರು ಹೊಲೆಯರನ್ನು ಸಂತೋಷಪಡಿಸಲಿಕ್ಕೆಬೇಕು. ಗ್ರಾಮದೇವತೆ ಹಬ್ಬದಲ್ಲಿ ಹೊಲೆಯನೇ ಮುಖ್ಯ ಮನುಷ್ಯ.. ಊರುತನದ ಕೆಲಸವು ಹೊಲೆಯನಿಲ್ಲದೆ ಸಾಗುವುದಿಲ್ಲ. ಈ ಯಾವತ್ತೂ ಕಾರಣಗಳಿಂದ ಆರಂಭದಲ್ಲಿ ಈ ಸೀಮೆಯಲ್ಲಿ ಭೂಮಿಯ ವೊಡೆಯರು ಹೊಲೆಯರೇ ಇದ್ದರೆಂದು ಕೆಲವರು ಊಹಿಸುತ್ತಾರೆ."[16]

ದಲಿತರಿಂದ ಹಿಡಿದು ಎಲ್ಲ ಜಾತಿಗಳ ಜನ ತಮ್ಮ ತಮ್ಮ ಜಾತಿಗಳ ಬಗ್ಗೆ ಮತ್ತು ಸಮಾಜದಲ್ಲಿ ತಮ್ಮ ಜಾತಿಯ ಪ್ರಾಮುಖ್ಯತೆಯ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುವುದರಲ್ಲಿ ಅರ್ಥವಿದೆ. ಅವರು ಹಲವು ಐತಿಹ್ಯ ಅಥವಾ ಕಥೆಗಳ ಮೂಲಕ, ತಮ್ಮ ಜಾತಿಯ ಕೆಲಸ ಸಮಾಜಕ್ಕೆ ಎಷ್ಟು ಅನಿವಾರ್ಯವಾಗಿದೆ ಎಂಬುದನ್ನು ಹೆಚ್ಚು ಮಾಡಿ ಹೇಳುತ್ತಾರೆ. ಇದು ಸಮಾಜಕ್ಕೆ ಅಗತ್ಯವಿರುವ ವಿಭಿನ್ನ ಕೆಲಸಗಳ ಬಗ್ಗೆ ಗೌರವವನ್ನು ವೃದ್ಧಿಸುತ್ತದೆ. ಸಮಾಜ

ಹುಟ್ಟಿ ಬೆಳೆದಿರುವುದು ಶ್ರಮಿಕರಿಂದ, ಇವರ ವೃತ್ತಿಗಳಿಂದ. ಜಾತಿ-ವರ್ಗ ಸಮಾಜದಲ್ಲಿ ಇವರ ಶ್ರಮದ ಫಲವನ್ನು ಕಸಿದು ಧನವಂತರೆಂದು ಮೆರೆಯುವ ಮೇಲ್ಜಾತಿ ಶೋಷಕರು 'ಶ್ರಮವನ್ನೇ ಕೀಳು' ಎಂದು, ಹಾಗಾಗಿ ಶ್ರಮಿಕ ಜಾತಿಗಳೆಲ್ಲ ಕೀಳು ಎಂದು ಪ್ರತಿ ಪಾದಿಸುತ್ತ; ಹಾಗೆ ಅವರು ಕೀಳಾಗಿರುವ ಸ್ಥಿತಿಯನ್ನೇ ಮುಂದುವರೆಸುತ್ತ ಬಂದರು. ಕೆಲಸಗಳ ಮಧ್ಯೆಯೂ ಮೇಲು ಕೀಳನ್ನು ಸೃಷ್ಟಿಸಿ, ಶ್ರಮಿಕರ ಮಧ್ಯೆ ಹಲವಾರು ಜಾತಿಗಳನ್ನು ಸೃಷ್ಟಿಸಿದ ಕುತಂತ್ರ ಅಗಾಧವಾದುದು.

ನಾನು ಮಾಡಿದ ಕ್ಷೇತ್ರ ಕಾರ್ಯದ ಪ್ರಕಾರ ಮಾದಿಗರು ಹರಳಯ್ಯನ ಮಕ್ಕಳು. ಚಲವಾದಿಗಳು (ಹೊಲೆಯರು) ಚನ್ನಯ್ಯನ ಮಕ್ಕಳು. ಹರಳಯ್ಯ ಶಿವನಿಗಿಂತ 7 ದಿನ ಹಿರಿಯವನು. ಇವನಿಗೆ 7 ಜನ ಮಕ್ಕಳು. ಹಾಲಮುನಿ, ಹೆಪ್ಪಮುನಿ, ಜಾಂಬಮುನಿ, ರಕ್ತಮುನಿ, ಬಿಗಿಮುನಿ ಮೊದಲಾದವರು. ಲಿಂಗಾಯತರು ರುದ್ರಮುನಿ ಮುಖ್ಯನು ಎಂದರೆ, ಮಾದಿಗರು ಹೆಪ್ಪು ಮುನಿ ಮುಖ್ಯ ಎನ್ನುತ್ತಾರೆ. ಹರಳಯ್ಯ ಬಸವಣ್ಣನನ್ನು (ಎತ್ತು) ಆಡಿಸಲು (ಮೇಯಿಸಲು) ಹೋಗಿದ್ದ ಭೂಮಿ ಹರಿದಾಡುತ್ತಿತ್ತು, ಬಸವಣ್ಣ ಅದನ್ನು ಗಟ್ಟಿಗೊಳಿಸುವ ಹಂಚಿಕೆ ಹೂಡಿ ಹರಳಯ್ಯನ ಏಳು ಮಕ್ಕಳನ್ನು ಕೊಯ್ದು ಭೂಮಿಗೆ ಉಗ್ಗಿದ. ಭೂಮಿ ಹೆಪ್ಪು ಗಟ್ಟಿತು. ಹರಳಯ್ಯ ಹಿಂದಿರುಗಿ ಬಂದು ಬಸವಣ್ಣನಿಗೆ ತನ್ನ ಮಕ್ಕಳ ಬಗ್ಗೆ ಕೇಳಿದ. ಬಸವಣ್ಣನಿಗೆ ಬಾಯಿ ಹೋಯಿತು. ಹರಳಯ್ಯನಿಗೆ ಸಿಟ್ಟು ಬಂದು ಬಸವಣ್ಣನನ್ನು ಕೊಯ್ಯುವಾಗ, 'ನನ್ನನ್ನು ಪೂರ್ಣವಾಗಿ ಉಪಯೋಗಿಸು, ಏನೂ ಒಗೆಯಬೇಡ' ಎಂದಿತು ಎತ್ತು. ಹರಳಯ್ಯ ತನ್ನ ಲಿಂಗವನ್ನು ಹೊನ್ನರಿಕೆ ಗಿಡಕ್ಕೆ ಸಿಗಹಾಕಿ ಎತ್ತು ಕೊಯ್ಯುತ್ತಿದ್ದ. ಲಿಂಗಾಯತರು ಹೊನ್ನರಿಕೆ ಗಿಡದ ಲಿಂಗವನ್ನು ಕದ್ದು ಒಯ್ದರು. ಇತ್ತ ಹರಳಯ್ಯ ಒಳ್ಳೆಯದನ್ನೆಲ್ಲ ಒಯ್ದು ಅಡಿಗೆ ಮಾಡಲು ಕೊಟ್ಟ. ಹೊನ್ನ ಪಚ್ಚಿ ಬಿಸಾಡಿದ್ದ. ಅದು ಕಬ್ಬಿಣ ಬೆಳ್ಳಿ ಬಂಗಾರವನ್ನು ನುಂಗುವುದು. ಅದನ್ನು ಕೊಮಟಿಗ ಪಡೆದು ಕೊಂಡ. ಹಾಗಾಗಿ ಅದೆಲ್ಲವೂ ಅವನಲ್ಲಿವೆ. ಪದರ ಪಚ್ಚಿ ಬಿಸಾಕಿದ, ಇದನ್ನು ಬ್ರಾಹ್ಮಣ ಒಯ್ದು ಪುರಾಣ ಮಾಡಿಕೊಂಡ, ಕರುಳು ತೆಗೆದುಕೊಂಡು ಜನಿವಾರ ಮಾಡಿಕೊಂಡ; ಗೂದಿಗೊರಳನ್ನು ಚಲವಾದಿ ಕಾಳಿ ಮಾಡಿಕೊಂಡ. ಇನ್ನೊಂದು ಹೇಳಿಕೆಯಲ್ಲಿ ಹೊರಗಡೆ (ಮಲವಿಸರ್ಜನೆಗೆ) ಹೋಗಿದ್ದ ಬ್ರಾಹ್ಮಣ ಬಂಗಾರವಾಗಿದ್ದ ಹೊನ್ನಪಚ್ಚಿ ಪದರಪಚ್ಚಿ ಕರುಳುಗಳನ್ನು ಶಲ್ಲೆಯಲ್ಲಿ ಕಟ್ಟಿಕೊಂಡು ಬಂದ. ಹೀಗಾಗಿ ಹರಳಯ್ಯ ಒಡವನಾದ. ಹೀಗೆ ಹರಳಯ್ಯನ ಮಕ್ಕಳಿಂದ ಭೂಮಿ ಹುಟ್ಟಿತು.

ಈ ಐತಿಹ್ಯದಲ್ಲಿ ಹರಳಯ್ಯ, ಚನ್ನಯ್ಯ ಬಸವಣ್ಣರು 12ನೇ ಶತಮಾನದ ಶರಣರ ಪ್ರಭಾವದಿಂದ ಪ್ರವೇಶ ಪಡೆದವರೆಂಬುದು ನಿಶ್ಚಿತ. ಆದರೆ ಶರಣ ಚಳುವಳಿಯ ಹಿಂದೆ ಹೊಲೆ-ಮಾದಿಗರಲ್ಲಿ ಪರಂಪರಾಗತವಾಗಿ ಹರಳಯ್ಯ, ಚನ್ನಯ್ಯ ಎಂಬ ಹೆಸರುಗಳಿರುವ ಸಾಧ್ಯತೆ ಇದೆ. ಅಂಥ ಪ್ರಸಿದ್ಧ ಹೆಸರುಗಳನ್ನೆ ಶರಣರಿಬ್ಬರಿಗೂ ಇಟ್ಟಿರಬಹುದು.

ಮೂಲ ಕೃಷಿಕರಲ್ಲಿ ನರಬಲಿಯಿದ್ದುದನ್ನು ಈ ಐತಿಹ್ಯ ಸ್ಪಷ್ಟಪಡಿಸುವುದು. ಭೂಮಿಯನ್ನು ಕೃಷಿ ಯೋಗ್ಯ ವಸ್ತುವನ್ನಾಗಿ ಪರಿವರ್ತಿಸಿದ್ದು ಮಾದಿಗರ ರಕ್ತ ಮತ್ತು ಶ್ರಮ ಎಂಬುದು ಇಲ್ಲಿಯ ಮುಖ್ಯ ಆಶಯ. ಹರಳಯ್ಯನ ಮಕ್ಕಳ ಹೆಸರುಗಳೂ 'ಮುನಿಗಳು'.

ಅಂದರೆ ಇವರು ತಾಂತ್ರಿಕ ಪಂಥೀಯರು. ಆದರೆ ಒಂದು ಗಂಭೀರವಾದ ಕೊರತೆ ಎಂದರೆ ಸ್ತ್ರೀ ಪ್ರಾಧಾನ್ಯತೆಯನ್ನು ಈ ಐತಿಹ್ಯ ಎಲ್ಲಿಯೂ ಸೂಚಿಸದೆ ಇರುವುದು; ಎತ್ತಿನ ಸೂಚನೆ ವಲಸೆಗಾರ ಪಶುಪಾಲಕ ದ್ರಾವಿಡರದ್ದಾಗಿರಬಹುದು. ದಲಿತರ ಬೆವರು- ರಕ್ತಗಳನ್ನು ಶೋಷಿಸಿ ಇದ್ದುಳ್ಳವರು ಶ್ರೀಮಂತರಾದರು ಎಂಬುದನ್ನು ಕಥೆ ಸೂಚಿಸುತ್ತಿದೆ.

ಇಂಥದೆ ಕಥೆ ಮಧ್ಯ ಕರ್ನಾಟಕದ ಕುರುಬರಲ್ಲಿಯೂ ಪ್ರಚಲಿತವಿದೆ. ಕುರುಬರು "ತಮ್ಮಲ್ಲಿದ್ದ 'ಕುರುಬರ ರಟ್ಟು' ಎಂಬ ಪ್ರಾಚೀನ ಹೊತ್ತಗೆಯನ್ನು ಬ್ರಾಹ್ಮಣರು ಕಿತ್ತುಕೊಂಡು ಓದಿ ಜ್ಞಾನಿಗಳಾದರು, ಲಿಂಗವನ್ನು ಕಿತ್ತುಕೊಂಡು ಲಿಂಗಾಯತರು ಸಮಾಜದಲ್ಲಿ ಮನ್ನಣೆ ಗಳಿಸಿದರು. ಜೊತೆಗೆ ಕುರುಬರ ಮನೆ ಹುಡುಕಿಯೇ ಬರುತ್ತಿದ್ದ ಲಕ್ಷ್ಮಿಯನ್ನು ಹಾದಿ ತಪ್ಪಿಸಿದ ಶೆಟ್ಟರು ತಮ್ಮಲ್ಲಿಯೇ ಈಕೆಯನ್ನು ಉಳಿಸಿಕೊಂಡರು."[17]

ದ್ರಾವಿಡರಲ್ಲಿ ತಮ್ಮ ಮಕ್ಕಳನ್ನೆ ಬಲಿಗೊಟ್ಟು ತಮ್ಮ ವೃತ್ತಿಗಳನ್ನು ರಕ್ಷಿಸಿಕೊಂಡ, ಇನ್ನೂ ಹಲವು ಜಾತಿ ಕಥೆಗಳಿರುವುದು ಸ್ವಾರಸ್ಯಕರವಾಗಿದೆ, ಉದಾ:

ಅಗಸರಲ್ಲಿ ಒಂದು ಕಥೆಯ ಪ್ರಕಾರ ಸರಸ್ವತಿ, ಲಕ್ಷ್ಮೀ, ಪಾರ್ವತಿ, ಶಚಿ ಛಾಯಾ ಇವರ ಮುಟ್ಟಿನ ಬಟ್ಟೆಗಳನ್ನು ಒಗೆಯಲು ಒಬ್ಬಳನ್ನು ನೇಮಿಸಲಾಗಿತ್ತು. ಆಕೆ ಬಟ್ಟೆಗಳನ್ನು ಮಡಿ ಮಾಡಲು ಸಮುದ್ರಕ್ಕೆ ತಂದಳು. ಅಲ್ಲಿ ಕಲ್ಲಿರಲಿಲ್ಲ. ತನ್ನ ಮಗನನ್ನೆ ಕೊಂದು ಅವನ ರಕ್ತವನ್ನು ಬಣ್ಣವನ್ನಾಗಿ, ಕಣ್ಣನ್ನು ನೀಲಿ (indigo) ಯನ್ನಾಗಿ, ಮಾಂಸವನ್ನು ಸವುಳು ಮಣ್ಣಾಗಿ (ಸೋಪಿನಂತೆ ಉಪಯೋಗಿಸುವರು), ಬೆನ್ನನ್ನು ಕಲ್ಲಾಗಿ, 'ಕಾಲನ್ನು ಕಟ್ಟಿಗೆಯನ್ನಾಗಿ, ಹೊಟ್ಟೆಯನ್ನು ಪಾತ್ರೆಯನ್ನಾಗಿ ಮಾಡಿದಳು. ಈಕೆಗೆ ಮೆಚ್ಚಿ ದೇವಿಯರು ಆಕೆಯ ಮಗನನ್ನು ಬದುಕಿಸಿದರು. ಇವನ ಮಕ್ಕಳೇ ಅಗಸರು.

ಬಳ್ಳಾರಿ ಕಡೆ ಚಲವಾದಿ (ಹೊಲೆಯರು)ಗಳಿಗೆ ಒಕ್ಕಲು ಮನೆಗಳಿರುವುದಿಲ್ಲ; ಮಾದಿಗರಿಗೆ ಅನುವಂಶಿಕವಾಗಿ ಒಕ್ಕಲು ಮನೆಗಳ ಹಂಚಿಕೆ ಇರುತ್ತದೆ. ಆದರೆ ಬೆಳಗಾವಿ ಜಿಲ್ಲೆಯಲ್ಲಿ ಹೊಲೆಯರು 'ಮನೆ ಮಕ್ಕಳಾಗಿರುವುದು' ಕಂಡು ಬರುತ್ತದೆ. ಹೊಲೆಯರಿಗೂ-ಮಾದಿಗರಿಗೂ ಸಂಬಂಧ, ಸಂಪರ್ಕಗಳು ಇಲ್ಲ. ಚಲವಾದಿಗಳು ವಾದ್ಯ, ಮೇಳ, ಡಂಗುರ (ಸಾರಹಾಕುವುದು,) ಮೊದಲಾದ ವೃತ್ತಿಗಳನ್ನು ಮಾಡುತ್ತಾರೆ. ಮಾದಿಗರು ಒಕ್ಕಲುಗಳ ಸತ್ತ ಪ್ರಾಣಿಗಳನ್ನು ತಂದು ಚರ್ಮ ಹದಮಾಡಿ ರೈತರಿಗೆ ಬೇಕಾದ ವಸ್ತುಗಳನ್ನು ತಯಾರಿಸುವರು. ಮದುವೆ, ಹಬ್ಬ, ಸುಗ್ಗಿಗಳಲ್ಲಿ ಯಜಮಾನ ಇವರಿಗೆ ಅನ್ನ ಬಟ್ಟೆ ಕಾಳು ಕಡಿ ಕೊಡುತ್ತಾನೆ. ಒಂದು ವಿಶೇಷ ಸಂಗತಿ ಎಂದರೆ ಒಡೆಯರು ಬದಲಾದರೂ ಭೂಮಿಗೆ ಆನುವಂಶಿಕವಾಗಿ ಅಂಟಿಕೊಂಡಿರುವ ಇವರು ಬದಲಾಗುವಂತಿಲ್ಲ. ಬ್ರಾಹ್ಮಣರನ್ನು ಇವರು ಕೇರಿಯೊಳಗೆ ಬಿಟ್ಟುಕೊಳ್ಳುವುದಿಲ್ಲ.

ಮೇಲೆ ಹೇಳಲಾದ ಐತಿಹ್ಯ ಸಾಕಷ್ಟು ಪ್ರಾಚೀನವಾದುದು ಎಂಬುದಕ್ಕೆ ಉರಿಲಿಂಗ ಪೆದ್ದಿಗಳ ಒಂದು ವಚನದಲ್ಲಿ ಆಧಾರವಿದೆ. ("ಉರಿಲಿಂಗ ಪೆದ್ದಿಗಳ ವಚನಗಳು"-ಸಂ: ಡಾ|| ಎಚ್. ಪಿ. ಮಲ್ಲೇದೇವರು. ಕ. ವಿ. ವಿ. ಪುಟ 117) ವಿಷ್ಣು ಪುರಾಣದ ಸೂಕ್ತವನ್ನು ಉದ್ಧರಿಸಿದ ನಂತರ ಉರಿಲಿಂಗ ಪೆದ್ದಿ "ರೇಣುಕಾ ದೇವಿಯ ಮಗನೇ ಬ್ರಾಹ್ಮಣನು |

ಮಾತಂಗಿಯ ಮಗನೇ ಹೊಲೆಯನು | ಇವರಿಬ್ಬರೂ ಜಮದಗ್ನಿಗೆ ಹುಟ್ಟಿದರಾಗಿ"[18] ಎಂದು ತಿಳಿಸಿ, ಗೋದಾನ ಪಡೆದವ ಬ್ರಾಹ್ಮಣನಾದ, ಕೊಂಬು ಕೊಳಗುವ 'ಚಿನ್ನವಾಗಿ' ವಿಪ್ರರು ಎತ್ತಿಕೊಂಡರು ಎಂದು, ಕಥೆಯ ಸೂಚನೆ ನೀಡುತ್ತಾನೆ.

ಮಾದಿಗರಲ್ಲಿಯ "ಲೇಸಿಯರು" (ವೇಶ್ಯೆಯರು) ದೇವರ ಪೂಜೆ ಮಾಡುವ ಹಕ್ಕುಳ್ಳವರಾಗಿದ್ದಾರೆ. ಆದರೆ ಗಂಡುಳ್ಳವರು ಈ ಕೆಲಸ ಮಾಡುವಂತಿಲ್ಲ. ಹೆಣ್ಣು ದೇವರು ಮನೆ ದೇವರಾಗಿದ್ದಲ್ಲಿ ಹೆಂಗಸರಿಗೆ ಮದುವೆಯಾಗುವ ಪೂರ್ವದಲ್ಲಿ "ಗರತಿ ಮುತ್ತು" ಕಟ್ಟುವ ಪದ್ಧತಿ ಇದೆ. ಗಂಡಸರಿಗೆ ಮುದ್ರೆ ಒತ್ತುವುದು ಒಂದು ವಿಧದ ದೀಕ್ಷೆಯಾಗಿದೆ. ದೇವರ ಹೊರೆ-ಹೊತ್ತವಳಿಗೆ 'ಲೇಸಿ' ಎನ್ನುತ್ತಾರೆ. ಈ ಅಂಶಗಳು ದಲಿತರಲ್ಲಿ ಹೆಂಗಸರ ಪ್ರಾಮುಖ್ಯತೆಯನ್ನು ಸೂಚಿಸುತ್ತವೆ. ಮಾದಿಗರಿಗೆ ಕೈ ವೃತ್ತಿ ಇರುವುದರಿಂದ ಒಕ್ಕಲು ಮನೆಗಳ ಸಂಬಂಧವಿದೆ. ಚಲವಾದಿಗಳಿಗೆ ಕೈ ವೃತ್ತಿ ಇಲ್ಲವಾಗಿ ಒಕ್ಕಲುಗಳಿಗಿಲ್ಲ. ಹೊಲೆ-ಮಾದಿಗರಲ್ಲಿ ಕಟ್ಟಿ ಕಸಬಿ ಎಂದು ಪಂಚಾಯತಿ ಪದ್ಧತಿ ಇದೆ. ಕರಿಬಾನಿ ನೀರು ಪವಿತ್ರ, ಕುರಿಗಳಿಗೆ ರೋಗ ಬಂದರೆ ಕುರುಬರು ಕರಿಬಾನಿ ನೀರು ಒಯ್ದು ಉಗ್ಗುವರು. ಈ ನೀರು ಮಾತಂಗಿಯದು, ದೇವಾನುದೇವತೆಗಳೆಲ್ಲ ಇದರಲ್ಲಿದ್ದಾರೆ.[19] ಅಂದರೆ, ಮೈಲಮ್ಮ , ಗೊಬ್ಬರದಮ್ಮ , ಸಿಡಬಮ್ಮ , ದಡಾರಮ್ಮ , ಎಲ್ಲಮ್ಮ , ಮರಿಯಮ್ಮ ಮೊದಲಾದವರು.

ತೊಗಲಿನ ಸಂಬಂಧ ಇರುವುದರಿಂದ, ಭೌತವಾದಿಗಳಾದ ಹೊಲೆ-ಮಾದಿಗರಲ್ಲಿ ಕರಿಬಾನಿಯ ನೀರು ಪವಿತ್ರವಾದ ಹಾಗಿದೆ.

"ಹೊಲ್ಯಾ ಹದಿನೆಂಟು ಜಾತಿ" ಎಂಬುದು ಉತ್ತರ ಕರ್ನಾಟಕದಲ್ಲಿ ಸಾಮಾನ್ಯವಾದ ಹೇಳಿಕೆ. ಹದಿನೆಂಟು ಜಾತಿ, ಬಲಗೈಗೆ ಸಂಬಂಧಿಸಿದ್ದು. ಇವರಲ್ಲಿ ಹೊಲೆಯರೇ ಮುಖ್ಯ ಎಂಬುದಾಗಿ ಇದರಿಂದ ಅರ್ಥವಾಗುತ್ತದೆ. ಎಡಗೈ, 9 ಪಣಗಳ, 9 ಜಾತಿಗಳ ಒಂದು ಗುಂಪು ಎಂಬುದೂ ಪ್ರಚಲಿತವಿದೆ.

ಪಶ್ಚಿಮ ಕರಾವಳಿಯಲ್ಲಿ ಬ್ರಾಹ್ಮಣರು ಹೇಗೆ ನೆಲೆಯೂರಿದರು ಎಂಬ ಕಥೆಗಳಲ್ಲಿ ಒಂದು. ಹಬಾಸಿಕ ಎಂಬ ಹೊಲೆಯ (ಕೊರಗ) ಅರಸ ಮಯೂರವರ್ಮನನ್ನು ಓಡಿಸಿದ ಎನ್ನುತ್ತದೆ. ಮಯೂರವರ್ಮನ ಅಳಿಯ ಲೋಕಾದಿತ್ಯನು ಅವರನ್ನು ಸೋಲಿಸಿ 32 ಹಳ್ಳಿಗಳಲ್ಲಿ ಆಹಿಛತ್ರದ ಬ್ರಾಹ್ಮಣರನ್ನು ನೆಲೆಗೊಳಿಸಿದನು. ಇನ್ನೊಂದು ಕಥೆಯ ಪ್ರಕಾರ ಹೊಲೆಯರ ವಶದಲ್ಲಿದ್ದ ಪ್ರದೇಶವನ್ನು ಮಯೂರವರ್ಮ ಗೆದ್ದುಕೊಂಡ. ಇವನೇ ಆಹಿಚಿತ್ರದ ಬ್ರಾಹ್ಮಣರನ್ನು ತಂದು ನೆಲೆಗೊಳಿಸಿದವನು. ಇವರನ್ನು ನಂದ ಎಂಬ ಹೊಲೆಯ ಮುಖಂಡ ಓಡಿಸಿದ. ಆದರೆ ದೇಗುಲ ನರ್ತಕಿಯಾದ ತನ್ನ ತಾಯಿಯ ಮಾತು ಕೇಳಿ ನಂದನ ಮಗ ಚಂದ್ರಸಾಯಣ ಬ್ರಾಹ್ಮಣರಿಗೆ ಗೌರವಕೊಟ್ಟು ತನ್ನ ಜನರನ್ನು ಗುಲಾಮರನ್ನಾಗಿ ಮಾಡಿದ. ಇನ್ನೊಂದು ಕಥೆಯ ಪ್ರಕಾರ ಚಂದ್ರಸಾಯಣ ಮಯರ ವಂಶಜ ಮತ್ತು ಹೊಲೆಯ ಅರಸನನ್ನು ಸೋಲಿಸಿದ.[20]

ಈ ಎಲ್ಲ ಕಥೆಗಳ ಪ್ರಕಾರ ಹೊಲೆಯರಿಗೂ ಬ್ರಾಹ್ಮಣರಿಗೂ ಘರ್ಷಣೆಗಳು ನಡೆಯುತ್ತಿದ್ದವು. ಆದರೆ ಬ್ರಾಹ್ಮಣರಿಂದ ಸೋಲಿಸಲ್ಪಟ್ಟರು. ಇಂಥ ಕಥೆಗಳು ಕೇರಳ

ತಮಿಳುನಾಡಿನ ದಲಿತರ ಸಂದರ್ಭದಲ್ಲೂ ಕಂಡು ಬಂದಿವೆ. ಮಹಾರಾಷ್ಟ್ರದಲ್ಲಿ ಚಮ್ಮಾರರು ರಾಜರಾಗಿದ್ದ ಬಗ್ಗೆ ಉಲ್ಲೇಖಗಳಿವೆ. Gunther D. S. ಬರೆಯುತ್ತಾರೆ "The Cambhars whose history is obscure. lived not for from Javali on a hill where the foundation walls of their settlement can still be seen today, their leader is still respectfully referred to as king (Raja) by other castes."[21] ದಕ್ಷಿಣ ಕನ್ನಡ ಜಿಲ್ಲೆಯ ನಲ್ಕೆ , ಪೊಂಬದ, ಪರವ ಮೊದಲಾದ ವಿಭಿನ್ನ ಹೊಲೆಯ ಜಾತಿಯ ಜನ ಭೂತಾರಾಧನೆಯಲ್ಲಿ ಪ್ರಧಾನ ಪಾತ್ರವನ್ನು ನಿರ್ವಹಿಸುತ್ತಾರೆ. ಶಿವನ ಪರಿವಾರವಾದ ಭೂತಗಳಲ್ಲಿ ಬ್ರಾಹ್ಮಣರಿಂದ ಹಿಡಿದು ಎಲ್ಲ ಜಾತಿಯವರೂ ನಂಬಿಕೆಯಿಟ್ಟಿದ್ದು , ಮೂಲದಲ್ಲಿ ಇದು ಹೊಲೆಯರ ಭೌತಿಕ ಸಾಮರ್ಥದ ಮತ್ತು ಪ್ರಾಬಲ್ಯರ ಅಧಾರದಲ್ಲಿ ಸೃಷ್ಟಿಯಾದುದನ್ನು ಸೂಚಿಸುವುದು. ಈಗ ಅದು ಬರಿಯ ಸಾಂಸ್ಕೃತಿಕ ಕ್ಷೇತ್ರದಲ್ಲಿ ತನ್ನ ಅದ್ಭುತ ಸಾಮರ್ಥ್ಯವನ್ನು ತೋರಿಸಿಕೊಳ್ಳುತ್ತಿದೆ. `ಭೂತ' ದೇವರಾಗಿ ಈ ಹೊಲೆಯರು ಎಲ್ಲ ಜಾತಿಜನರನ್ನು ಆಳುತ್ತಿರುವುದು ವಿಶೇಷ ಪಳೆಯುಳಿಕೆಯಾಗಿದೆ. ಇಲ್ಲಿಯ ಉಲ್ಲೇಖನೀಯ ಅಂಶವೆಂದರೆ ಭೂತಗಳಲ್ಲೂ ಮೇಲು ಕೀಳುಗಳನ್ನು ಸೃಷ್ಟಿಸಿ, ಅವುಗಳಿಗೆ ಅನುಗುಣವಾಗಿ ಹೊಲೆಯರಲ್ಲಿ ಮೇಲು ಕೀಳು ಭಾಗಗಳನ್ನು ಕಲ್ಪಿಸಿದ್ದು. ಜುಮಡಿ ಕೋಲದ ಸಂದರ್ಭದಲ್ಲಿ ಜುಮಡಿ ಭೂತವನ್ನು ಪ್ರತಿನಿಧಿಸುವ ಪೊಂಬದ ಹೊಲೆಯನು ತೇರಿನಲ್ಲಿ ಕೂತಿದ್ದು ಅದನ್ನು ಮೆರವಣಿಗೆಯಲ್ಲಿ ಎಳೆಯಲಾಗುತ್ತದೆ. ಇವರು ನಲ್ಕೆಯವರಿಗಿಂತ ಉತ್ತಮ ಭೂತಗಳ ವೇಷ ಹಾಕುವವರು. ಅಳಿಯ ಸಂತಾನ ಪದ್ಧತಿ ಇವರಲ್ಲಿದೆ. ಇವರಲ್ಲಿರುವ ಬಯಲು ಪೊಂಬದರು ಕೃಷಿಕರು, ಪದರ್ತಿಗಳು ಭೂತ ನರ್ತಕರು. ಅನೇಕ ಭೂತಗಳಿಗೆ ಬಲಿ, ಹೆಂಡಗಳ ಮೂಲಕ ಆರಾಧನೆ ಇದೆ.

"ತುಳುನಾಡಿನ ಜಾನಪದ ಅಧ್ಯಯನದಲ್ಲಿ ಭೂತಾರಾಧನೆಗೆ ವಿಶೇಷ ಮಹತ್ವವಿದೆ. ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ , ನರ್ತನಗಳಂತಹ ಕಲೆಗಳನ್ನು ಮೈಗೂಡಿಸಿಕೊಂಡು ಕೂಡಾ, ಒಂದು ಧಾರ್ಮಿಕ ಆಚರಣೆಯ ಚೌಕಟ್ಟಿನಲ್ಲಿ ಮುಂದುವರಿದುಕೊಂಡು ಬಂದಿರುವುದು ಇದರ ವೈಶಿಷ್ಟ್ಯ.

ಇದನ್ನು ವಿವರಣಾತ್ಮಕವಾಗಿ ವಿಶ್ಲೇಷಣಾತ್ಮಕವಾಗಿ ಭಿನ್ನ ದೃಷ್ಟಿಗಳಿಂದ ಅಧ್ಯಯನ ಮಾಡಲು ಅವಕಾಶವಿದೆ. ಇದರ ಪೂರಕ ಸಾಹಿತ್ಯವಾದ, ಕೆಲವೊಮ್ಮೆ ಸಮರ್ಥನ ಸಾಹಿತ್ಯವಾದ ಪಾಡ್ದನಗಳಂತೂ ತುಳುನಾಡಿನ ಇತಿಹಾಸದ ಕತ್ತಲೆಯ ಮುಖಗಳನ್ನು ಅನಾವರಣ ಮಾಡುವುದರ ಮೂಲಕ ವಾಸ್ತವಿಕ ನೆಲೆಯಲ್ಲಿ ಈ ಪ್ರದೇಶದ ಇತಿಹಾಸವನ್ನು ಪುನರ್ರಚಿಸಲು ಅಮೂಲ್ಯ ಆಕರಗಳಾಗಿವೆ. ಸಮಾಜದ ತೀರಾ ಕೆಳಗಿನ ಸ್ತರದ ಮಂದಿ-ಪರವ, ಪಂಬದ, ನಲಿಕೆಯವರು-ಭೂತಗಳನ್ನು ಆವಾಹನೆ ಮಾಡುವ ಮಾಧ್ಯಮಗಳಾಗಿ ವರ್ತಿಸುವುದು, ಕೊರಗ, ತನಿಯ, ಕೋಡ್ದಬ್ಬು , ಕಲ್ಕುಡನಂತಹ ದಲಿತರು, ಶ್ರಮಜೀವಿಗಳು ಸಾಮಾಜಿಕ ಕ್ರೌರ್ಯಕ್ಕೆ ಬಲಿಯಾಗಿ ಭೂತಗಳಾಗುವುದು, ಸಮಾಜದ ವಿಭಿನ್ನ ಸ್ತರಗಳ ಜನರು ಭೂತಾರಾಧನೆಯಲ್ಲಿ ಭಿನ್ನ ನಿರ್ವಹಣೆಗಳನ್ನು ಮಾಡುವುದು-ಇಂತಹ ಅನೇಕ ಆಶ್ಚರ್ಯಗಳು, ವಿಸಂಗತಿಗಳು, ಭೂತಾರಾಧನೆಯ ಅಧ್ಯಯನಕ್ಕೆ ಮಾನವ ವಿಜ್ಞಾನ, ಹಾಗೂ ಸಮಾಜ ವಿಜ್ಞಾನಗಳ ದೃಷ್ಟಿಯ ಆಯಾಮಗಳನ್ನು ಒದಗಿಸುತ್ತದೆ."[22]

ಭೂತಾರಾಧನೆಯ ಬಗ್ಗೆ ಸಾಕಷ್ಟು ಅಧ್ಯಯನ ನಡೆದಿದ್ದು ಹಲವಾರು ಗ್ರಂಥಗಳು ಪ್ರಕಟವಾಗಿವೆ. ನಮಗಿಲ್ಲಿ ಮುಖ್ಯವಾಗಿ ಕಾಣುವುದು ಭೂತಗಳ ಪರಂಪರೆಯ ಮೂಲಕ ದಲಿತರು ತಮ್ಮ ಆದಿಮ ಕಾಲದ ಶ್ರೇಷ್ಠವಾದ ಮತ್ತು ಪ್ರಪ್ರಥಮದ ಸ್ಥಾನ-ಮಾನವನ್ನು ಸಾಂಕೇತಿಕವಾಗಿ ಉಳಿಸಿಕೊಂಡು ಬಂದಿರುವದು. ಅಳಿಯ ಸಂತಾನ ಪದ್ಧತಿಯು ಮಾತೃ ಅಧಿಕಾರದ, ಕಾಲದ ಪಳೆಯುಳಿಕೆಯಾಗಿದ್ದು, ಒಟ್ಟಾರೆ ಭೌಗೋಳಿಕ ಪ್ರಾಕೃತಿಕ ಕಾರಣಗಳಿಂದಾಗಿ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಮೂಲದ ಆಶಯಗಳನ್ನು ಹೆಚ್ಚು ಸಮರ್ಥವಾಗಿ ಆದಿಮ ರೂಪಾಕೃತಿಗಳಲ್ಲಿ ಹಿಡಿದಿಟ್ಟುಕೊಂಡು ಬಂದಿರುವ ಹಿನ್ನೆಲೆಯಲ್ಲಿ ಹೊಲೆಯರ ಸಾಮಾಜಿಕ ಮತ್ತು ಐತಿಹಾಸಿಕ, ಸ್ಥಾನ-ಮಾನವನ್ನು ಅಂದಾಜಿಸಲು ಅವಕಾಶವಾಗುತ್ತದೆ. ದೇವರುಗಳ ಪರಿಕಲ್ಪನೆಯ ಪೂರ್ವದಲ್ಲಿ ಬುಡಕಟ್ಟು ಕಾಲದಲ್ಲಿದ್ದ ಮತೀಯ ರೂಪಗಳು ಇಲ್ಲಿ ಹೆಚ್ಚು ಪರಿಷ್ಕಾರಕ್ಕೊಳಗಾಗದೆ ಉಳಿದು ಬಂದಿವೆ. ನಮ್ಮ ಸಾಮಾಜಿಕ ಚರಿತ್ರೆಯಲ್ಲಿ ಹೊಲೆ-ಮಾದಿಗರ ಸರ್ವಶ್ರೇಷ್ಠವಾದ ಮತ್ತು ಪ್ರತಿಷ್ಠಿತವಾದ ಸ್ಥಿತಿಯನ್ನು ಇಷ್ಟು ಸಮರ್ಥವಾಗಿ ಯಾವ ಪ್ರದೇಶ ಮತ್ತು ಪದ್ಧತಿಯಲ್ಲಿ ಉಳಿಸಿಕೊಂಡು ಬಂದಿಲ್ಲ. ಆದರೆ ಜಾತಿ-ವ್ಯವಸ್ಥೆಯು ತನ್ನೆಲ್ಲ ಕ್ರೂರ ಶೋಷಣೆಯ ಮುಖಗಳನ್ನು ಈ ಪದ್ಧತಿಯಲ್ಲೂ ತೂರಿಸಿ, ತನ್ನ ಶ್ರೇಷ್ಠತ್ವವನ್ನು ಹೇಗೆ ಸ್ಥಾಪಿಸಿತು, ಎಂಬ ವಿಷಯದ ಕುರಿತೂ ಹಲವಾರು ವಿದ್ವಾಂಸರು ಚರ್ಚಿಸಿದ್ದಾರೆ. ಕರ್ನಾಟಕದ ಬಯಲು ಸೀಮೆಗಳಲ್ಲಿ ಊರಮ್ಮನ ಜಾತ್ರೆಯ ಮೂಲಕ ಹೊಲೆ-ಮಾದಿಗರ ಸಾಮಾಜಿಕ ಮಹತ್ವವನ್ನು ತಿಳಿಯಲವಕಾಶವಾದರೆ, ಘಟ್ಟದ ಕೆಳಗೆ ಭೂತಾರಾಧನೆಯ ಮೂಲಕ ಅದು ಸಾಧ್ಯವಾಗುತ್ತದೆ. ಆರಾಧನೆಗೆ ಒಳಗಾಗುವ 'ಭೂತ'ದ ವೇಷ ಹಾಕಿ ಸ್ವತಃ ಭೂತರಾಗುವ ಹೊಲೆಯನನ್ನು ಆರಾಧಿಸುವ ಪೂಜಾರಿಯ ಕೆಲಸ ಮಾಡುವವರು ಅಳಿಯ ಸಂತಾನ ಪದ್ಧತಿಯನ್ನು ಅನುಸರಿಸುತ್ತಿದ್ದ ಹೆಂಡ ಇಳಿಸುವ ವೃತ್ತಿಯ ಬಿಲ್ಲವರು. ಜಾತಿವ್ಯವಸ್ಥೆಯಲ್ಲಿ ದಲಿತರಿಗಿಂತ ಮೇಲಿರುವವರು, ಭೂತಗಳಲ್ಲೇ ಬ್ರಮ್ಮೇರು ಭೂತವನ್ನು ಪ್ರಧಾನವೆಂದೂ ಉಳಿದುವು ಆಧೀನವೆಂದೂ ಹೇಳುವಲ್ಲಿ ಬ್ರಾಹ್ಮಣರ ಕುತಂತ್ರವೆ ಅಡಗಿದೆ. ಏಕೆಂದರೆ ಬ್ರಹ್ಮೇರು 'ಬ್ರಹ್ಮ'.

ಇನ್ನೊಂದು ವಿಶೇಷ ಅಂಶವನ್ನು ಇಲ್ಲಿ ಉಲ್ಲೇಖಿಸುವುದು ಅಗತ್ಯ. ಅದು ಮಾಟ-ವೈದ್ಯಕೀಯ ಭೂತ ದಲಿತರುಗಳಿಗಿರುವ ಸಂಬಂಧ. ಬುಡಕಟ್ಟು ಮಾತೃ ಪ್ರಧಾನ ಸಮಾಜದಲ್ಲಿದ್ದ ಆದಿಮ ವಿಜ್ಞಾನ, ಮಾಟ-ಮಾಂತ್ರಿಕತೆಯನ್ನು ಆಧರಿಸಿತ್ತು. ಅದರ ಅತ್ಯಂತ ಸ್ಪಷ್ಟವಾದ ಉಳಿಕೆ ಈ ಭೂತಾರಾಧನೆಯಲ್ಲಿ ಕಾಣಬರುತ್ತಿರುವುದು.

ಭೂತಾರಾಧನೆ ದಕ್ಷಿಣ ಕನ್ನಡ, ಕೇರಳದ ಭಾಗಗಳಲ್ಲಿ ಸ್ಪಷ್ಟವಾಗಿ ಉಳಿದಿರುವುದು ನಿಜ; ಆದರೆ ಈ ಪದ್ಧತಿ ನಾಡಿನ ಎಲ್ಲೆಡೆ ಪ್ರಚಲಿತವಾಗಿತ್ತು ಎನ್ನುವುದಕ್ಕೆ ಆಧಾರಗಳು ಸಿಗುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿ ಹುಚ್ಚಯ್ಯನ ತೇರು ಎಳೆಯುವಾಗ ಭೂತಪ್ಪನನ್ನು ಆಡಿಸುವ ಪದ್ಧತಿ ಇದೆ. ಉಪ್ಪಾರರೆ ಮೊದಲಾದ ಹಲವು 'ಕಪ್ಪುವಳಿ' ಜನಾಂಗದಲ್ಲಿ 'ಭೂತಪ್ಪಳು' ಎಂಬ ಮನೆ ಹೆಸರುಗಳಿವೆ. ಬೀದರ ಜಿಲ್ಲೆಯಲ್ಲಿ ಜನಪದ ಗುರು ಸಂಪ್ರದಾಯಕರಲ್ಲಿ 'ಭೂತೇರು' ಬರುತ್ತಾರೆ.

ದ್ರಾವಿಡರು, ನಾಗರು, ಒಂದೇ ಜನಾಂಗ[23] ಎಂದು ಸಾಧಾರವಾಗಿ ಡಾ. ಅಂಬೇಡ್ಕರ್

ವಿವರಿಸುತ್ತಾರೆ.[24] "ದಕ್ಷಿಣ ಭಾರತದ ಚೇರು, ಸೇರ ಮತ್ತು ಕೇರಳ ಈ ಎಲ್ಲರೂ ಒಂದೇ ನಾಗಾರಾಧಕ ಜನಾಂಗದ ವಿವಿಧ ಶಾಖೆಗಳು[25]. ಮಹಾರಾಷ್ಟ್ರದ (ಮಾದಿಗ) ಮಾಂಗ ಗಾರುಡಿಗನು ಹಾವುಗಳನ್ನು ಆಡಿಸುವ ವೃತ್ತಿಯವರು.[26] ಇವರ ಹೆಂಗಸರ ತೋಳು, ಬಲಗೈ ಬೆರಳುಗಳ ಮೇಲೆ ಹಾವಿನ ಹಚ್ಚೆ ಚುಚ್ಚುವುದು ಸಾಮಾನ್ಯ.[27]

ದ್ರಾವಿಡರಲ್ಲಿ ನಾಗರು ಯಾರು? ಹೊಲೆ ಮಾದಿಗ ಮೂಲ ಕೃಷಿಕರೇ, ಅಥವಾ ವಲಸೆಗಾರ ಪಶುಪಾಲಕ ದ್ರಾವಿಡರೆ? ನಮ್ಮ ಅಧ್ಯಯನದ ಅಂದಾಜಿನಂತೆ ಹೊಲೆ-ಮಾದಿಗೆ ಕೃಷಿಕರೆ ದ್ರಾವಿಡ ನಾಗರು. ಇದಕ್ಕೆ ಆಧಾರವಾಗಿ ದಕ್ಷಿಣ ಜಿಲ್ಲೆಯ 'ಕಾಡ್ಯನಾಟ'ವನ್ನು ಉದಾಹರಿಸಬಹುದಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಹೊಲೆಯರಲ್ಲಿ ಮೇರರೂ ಒಂದು ಪಂಗಡ. "ಕಾಡುಗಳಲ್ಲಿ ವಾಸಿಸುತ್ತಿದ್ದ ಮೇರರು ಕಾಡಿನ ದೇವತೆಯಾಗಿ ಈ ಕಾಡಿಗನನ್ನು (ಕಾಳಿಂಗ) ಆರಾಧಿಸುತ್ತಿದ್ದಿರಬಹುದು.[28] ಕಾಡಿನೊಳಗೆ ಕಾಡ್ಯನ ಮನೆಗಳಿರುತ್ತಿದ್ದವು. ಕಾಡ್ಯನಾಟದಲ್ಲಿ ವಿಶೇಷವಾಗಿ ಬಳಸುವ ಕಪ್ಪು ಕಲಶದಲ್ಲಿ ಸರ್ಪವನ್ನು ಹಾಕಿಡುತ್ತಿದ್ದರು. ಮೇರರ ಮೂಲ ಹೆಣ್ಣು ಹೊನ್ನಿ. ಆಕೆಯ ಕಾಡ್ಯನ ಹುಟ್ಟಿಗೆ ಕಾರಣಳು. ಆಕೆ ಕೊಟ್ಟ ಚಿನ್ನ, ತಾಮ್ರ, ಮಣ್ಣಿನ ಕಲಶಗಳು ಸಮಾಜದ ಮೂರು ಸ್ತರದ-ಬ್ರಾಹ್ಮಣ, ನಾಡವ, ಮೇರ ಜನಗಳ ಸರ್ಪಾರಾಧನೆಗೆ ಮೂಲವಾದವು. ಕಾಡ್ಯ ಸಂತಾನವನ್ನು ವೃದ್ಧಿಸುವ ದೇವತೆ. "ಮೇರರು ಹಾಡುವ ಹಾಡುಗಳಲ್ಲಿ ಕೊರಗರು ಮಾನವ ಕುಲದ ಮೂಲ ಪುರುಷರು" ಎಂದು ಬರುತ್ತದೆ.[29] ಕೊರಗ, ಕೊರತಿಯರಿಂದ 101 ಕುಲಗಳು ಹುಟ್ಟಿದವು.[30] 'ನಾಗಮಂಡಲ' ಎಂಬ ಕಾಳಿಂಗ ಸರ್ಪ ಪೂಜೆ ಕಾಡ್ಯನಾಟ. ಇದು "ಬುಡ ಕಟ್ಟು ಜೀವನ ಕ್ರಮದಿಂದ ಕೃಷಿಕ ಮಂಡಲಕ್ಕೆ ಪ್ರವೇಶ ಮಾಡಿರುವ ಮೇರ ಜನಾಂಗದ ಸಾಮೂಹಿಕ ಆರಾಧನಾ ಪ್ರಕ್ರಿಯೆ".[31] ಕರಾವಳಿ ಪ್ರದೇಶ ಸರ್ಪಾರಾಧಕ ನಾಗರಿಂದ ತುಂಬಿದ್ದರಿಂದ ಇದಕ್ಕೆ 'ನಾಗರ ಖಂಡ' ಎಂಬ ಹೆಸರಿತ್ತು. ಗೋಕರ್ಣ-ಅಹಿಕ್ಷೇತ್ರ; ಬ್ರಾಹ್ಮಣರು ಬಂದು ನೆಲೆಗೊಂಡ ನಂತರ ನಾಗನನ್ನು ಒಳಗು ಮಾಡಿಕೊಂಡುದರ ಫಲವೇ 'ನಾಗಬ್ರಹ್ಮ'. ನಾಗ, ಯಕ್ಷಿಯರು ಫಲೋತ್ಪತ್ತಿ ಮತ್ತು ಮಳೆಯ ದೇವತೆಯರು.[32] ನಾಗಮಂಡಲದಲ್ಲಿ ಯಕ್ಷಪಾಸನೆಯ ಬೀಜಗಳಿವೆ.[33] ಇವೆಲ್ಲ ತಾಂತ್ರಿಕ ಮೂಲದ ಆಚರಣೆಗಳು.[34] ಡಕ್ಕೆ ಬಲಿ ಬಹುಶಃ ಪ್ರಾಣಿಬಲಿ. ಡಕ್ಕೆ ಬಲಿಯಲ್ಲಿಯ ತ್ರಿಕೋಣ ಶ್ರೀ ಚಕ್ರ (ಯೋನಿ)ದ ಸಂಕೇತ. ನಾಗಮಂಡಲದ ಆರ್ಯ-ದ್ರಾವಿಡ ಸಂಸ್ಕೃತಿಗಳ ಸಮ್ಮಿಳನವಾಗಿದೆ (ಅದೇ). ನಾಗನನ್ನು ಶಕ್ತಿ ರೂಪದಲ್ಲಿ (ಭಗವತಿ) ಪೂಜುವರು. ಕೆಲಕಡೆ ಹುತ್ತಗಳ ಪೂಜೆ ಇದೆ. ಮಂಡಲವನ್ನು ಬರೆದು ಕಲಶಗಳನ್ನು ಪೂಜುವುದು ಅಮ್ಮನ ಕಥೆಯ. ಪೂಜುವ 'ವೈದ್ಯ'- ಸ್ತ್ರೀಯಾಗುವುದು ಇಲ್ಲಿಯೂ ಕಂಡು ಬರುತ್ತದೆ. ಮಂಡಲ ರಚನೆ 15 ಕಲಶಗಳ ಪೂಜೆ, ಗಂಗೆ ಸ್ನಾನ, ಪಾತ್ರಿಗೆ ಮೈ ದುಂಬುವುದು, ಕಂಬ ಇಕ್ಕುವುದು, ಕೋಲಗಳು, ಸಾಮೂಹಿಕ ಭೋಜನ, ಅನ್ಯ ಜಾತಿಯವರನ್ನು ನಕಲಿ ಮಾಡುವುದು ಇತ್ಯಾದಿ ವಿಧಿಯಾಚರಣೆಗಳಲ್ಲಿ ಕಂಬವು ಪುರುಷ ಶಕ್ತಿಯ ಸಂಕೇತ. ಕೊಡಗಳು ಸ್ತ್ರೀ ಗರ್ಭದ ಸಂಕೇತಗಳೆಂದು ಗುರುತಿಸಲಾಗಿದೆ.[35] ಇಲ್ಲಿ ಹೇಳಲಾದ ಹಾಡುಗಳಲ್ಲಿ ಬರುವ ಕಥೆಯೊಂದರಿಂದ ಆರ್ಯ ಬ್ರಾಹ್ಮಣರ ಆಗಮನ, ಅವರಿಂದ ಅನಾಗರಿಕರಾಗಿದ್ದ ದ್ರಾವಿಡರು ನಾಗರಿಕರಾದದ್ದು, ಕುಟುಂಬ ವ್ಯವಸ್ಥೆಯಲ್ಲಿ ನೀತಿ

ಅನೀತಿಗಳ ಕಲ್ಪನೆ ದ್ರಾವಿಡರಿಗೆ ಉಂಟಾದದ್ದು , ಕೃಷಿ ಪ್ರಗತಿ ಆದದ್ದು ಧ್ವನಿತವಾಗುತ್ತದೆ.

ನಾಡಿನ ತುಂಬ 'ನಾಗ' ಹೆಸರಿನ ಅನೇಕ ಊರುಗಳು, ನಾಗನನ್ನು ಕೆತ್ತಿದ ಕಲ್ಲುಗಳು, ಹುತ್ತ, ನಾಗರ ಪಂಚಮಿಯ ಹಬ್ಬ , ಪೂಜೆ, ಇದೆಲ್ಲ ನಾಗರ ವ್ಯಾಪಕ ಅಸ್ತಿತ್ವವನ್ನು ಸಾಬೀತುಪಡಿಸುವವು. ಈ ಎಲ್ಲ ಸಂಪ್ರದಾಯದಲ್ಲಿ ಹೊಲೆ-ಮಾದಿಗರೇ ಕೇಂದ್ರವಾಗುವುದಾದರೆ ಅವರನ್ನು ನಾಗರು ಎನ್ನಲು ಸಾಧವಾಗುತ್ತದೆ. ಈ ಬಗ್ಗೆ ಹೆಚ್ಚಿನ ಅಭ್ಯಾಸವಾಗುವುದರ ಅಗತ್ಯವಿದೆ. ಜಾತಿ ಭೇದವಿಲ್ಲದಂತೆ, ಎಲ್ಲ ಹೆಂಗಸರು ಶ್ರಾವಣ ಮಾಸದಲ್ಲಿ ಬರುವ ನಾಗಪಂಚಮಿ ಹಬ್ಬದಲ್ಲಿ ಹುತ್ತ ಪೂಜೆ ಮಾಡುವುದು, ತಂಬಿಟ್ಟಿನಾರತಿ ಮಾಡುವುದು, ಹುತ್ತಕ್ಕೆ ಅಥವಾ ಮಣ್ಣಿನ ನಾಗ ಪ್ರತಿಮೆಗೆ ಹಾಲೆರೆಯುವುದು, ಜೋಕಾಲಿಯಾಡುವುದು ಮಾಡುತ್ತಾರೆ. ನಾಗಪ್ಪ , ಹುತ್ತಪ್ಪ ಎಂಬ ಪದ ಬಳಕೆಯಲ್ಲಿವೆ.

"ನಾಗ ಪ್ರತಿಮ ವಿಚಾರದಲ್ಲಿ ಶಂ. ಬಾ. ಜೋಷಿಯವರು ನಾಗಾರಾಧನೆಯ ವಿಶ್ವವ್ಯಾಪಕತೆಯನ್ನು ವಿವರವಾಗಿ ವಿಶ್ಲೇಶಿಸುತ್ತಾರೆ. "ನಾಗರ ಸಂಸ್ಕೃತಿಯ ವೈಶಿಷ್ಟ್ಯ ಐಹಿಕ ಭೋಗ ವಿಲಾಸಗಳ ಕಡೆಗಿನ ವಿಶೇಷ ಪ್ರವೃತ್ತಿ."[36]

"ನಮ್ಮ ದೇಶದಲ್ಲಿ ಅದರಲ್ಲಿಯೂ ದಕ್ಷಿಣ ದೇಶದಲ್ಲಿ ನಾಗಪೂಜೆ ಹರಡಿರುವ ಹಾಗೆ ಬೇರೆಲ್ಲಿಯೂ ಕಾಣಸಿಗದು"[37] ಎಂದು ಅವರ ಅಭಿಪ್ರಾಯ. ನಾಗಬಂಧ, ನಾಗಮಂಡಲ, ನಾಗಬನ, ನಾಗಪೂಜೆ, ನಾಗಬೆತ್ತ, ಸರ್ಪವಿದ್ಯೆ, ನಾಗಕಲ್ಲು ಮೊದಲಾದ ವಿಶೇಷ ಪ್ರಪಂಚವೇ 'ನಾಗ'ನ ಸುತ್ತ ಹರಡಿದೆ. "ನಾಗರ ಸಾಂಸ್ಕೃತಿಕ ಕೇಂದ್ರಗಳು "ನಗರ'ಗಳಾದವು ಎಂಬ ಊಹೆಯುಂಟು."[38] ನಾಗರು ಇಂದ್ರ ವಿರೋಧಿಗಳು.[39]

ನದುಗಿಲ್ಲಿ ಬಹಳ ಮುಖ್ಯವಾಗುವ ಅಂಶ-ಯೋಗದಲ್ಲಿ ಕುಂಡಲಿನಿ ಶಕ್ತಿಯನ್ನು 'ನಾಗ'ಕ್ಕೆ ಸಂಕೇತಿಸಿರುವುದು. ಅವನ್ನು ಸಹಸ್ರ ದಳ ಕಮಲಕ್ಕೆ ತಲುಪಿಸುವುದೇ ಯೋಗ ಸಾಧನೆ. ಇಲ್ಲಿ 'ನಾಗ'ಕ್ಕೆ ಸ್ತ್ರೀತ್ವದ ಅರ್ಥವಿದೆ. ನಾಗರು ಹೊಲೆ-ಮಾದಿಗರೇ ಎಂದು ನಿರ್ಧಾರವಾಗುವುದಾದರೆ, 'ನಾಗ', 'ಪ್ರತಿಮೆ' 'ಹೊಲತಿ' ಎಂದಾಗುತ್ತದೆ. ನಾಗಗಳಿರುವ ಲೋಕಕ್ಕೆ 'ಭೋಗವತಿ' ಎಂಬ ಹೆಸರಿರುವುದು 'ಭೌತಿಕವಾದ'ಕ್ಕೆ ಅಂದರೆ ತಾಂತ್ರಿಕ ವಾದಕ್ಕೆ 'ನಾಗ' ಪ್ರಪಂಚದ ಸಂಬಂಧ ಏರ್ಪಡುತ್ತದೆ. ವೇದಕಾಲದ 'ನಾಗ'ರು ಚಾಳುಕ್ಯ ಸೀಮೆಯ ನಾಗರು ತುಳು ದೇಶದ ಆಳುವರೆಂಬ ನಾಗರು[40] ನಾಗ ಜನಾಂಗಕ್ಕೆ ಆಧಾರಗಳು.

ನಾಗಪೂಜೆಗೂ ದಲಿತರಿಗೂ, ತಾಂತ್ರಿಕ ಪಂಥಕ್ಕೂ ಮಾತೃ ದೇವತೆಗೂ ನಿಕಟ ಸಂಬಂಧವಿರುವುದನ್ನು ದಕ್ಷಿಣ ಕನ್ನಡದ ನಾಗಮಂಡಲ ಮತ್ತು ಡಕ್ಕೆಬಲಿ ಹಬ್ಬಗಳಲ್ಲಿ ಕಾಣಬಹುದಾಗಿದೆ. ವೈದ್ಯರು ಕೆಲವು ಬಗೆಯ ಬಣ್ಣಗಳಿಂದ ನಾಗನ ಚಿತ್ರವನ್ನು ಬಿಡಿಸಿ, 'ಪವಿತ್ರ ಗಂಟು'ಗಳನ್ನು ಹಾಕುವ ಲೆಕ್ಕಾಚಾರದ ಮೇಲೆ (ನಾಗಮಂಡಲ) ಅರ್ಧವೊ, ಮುಕ್ಕಾಲೊ, ಸಂಪೂರ್ಣವೊ ಎಂದು ನಿರ್ಧರಿಸುತ್ತಾರೆ. ಅರ್ಧನಾರೀಶ್ವರ ವೇಷದ ವೈದ್ಯರು ಢಕ್ಕೆ ಬಾರಿಸುತ್ತ ನರ್ತಿಸುತ್ತಾರೆ. ಸಂತಾನ ಪ್ರಾಪ್ತಿಯಿಲ್ಲದವರಿಗೆ ನಾಗದೋಷವಿರುತ್ತದೆಂಬ ನಂಬಿಕೆ ಇದೆ.[41] 'ಪವಿತ್ರ ಗಂಟಿ'ಗೂ ಪುರುಷ ಸ್ತ್ರೀ ಸಂಯೋಗಕ್ಕೂ ಸಂಬಂಧವಿರುವದನ್ನೂ ನಾಗಪೂಜೆಗೂ ಸಂತಾನ ಪ್ರಾಪ್ತಿಗೂ ಇರುವ ಸಂಬಂಧದಿಂದ ಸಮರ್ಥಿಸುವುದಕ್ಕೆ

ಸಾಧ್ಯವಿದೆ. "ತುಳುನಾಡು ನಾಗರ ಕುಲದ ನೆಲೆಮನೆಯಾಗಿತ್ತೆಂಬ ಹೇಳಿಕೆಯನ್ನು ಪರಿಭಾವಿಸಿದರೆ ಈ ನಾಗಾರಾಧನೆಯ ಜನಾಂಗಿಕ ಸಂಬಂಧ ಹಾಗೂ ಪ್ರಾದೇಶಿಕ ಇತಿಹಾಸ ಗಮನಾರ್ಹ ಅಂಶವಾಗಿದೆ."[42]

ಮಲೆನಾಡ ಒಕ್ಕಲಿಗರು ಮಾಸ್ತಿ ಎಂಬ ಮನೆ ದೇವರನ್ನು ಪೂಜುವರು. ಈಕೆಯ ಮಕ್ಕಳು 'ನಾಗಗಳು'. ಕೆಂಡಕೊಂಡವಾದ ಮಹಾಸತಿಯನ್ನು ಗಂಡನ ಚಿತೆಯಲ್ಲಿಟ್ಟು ಸುಡುವುದಕ್ಕೆ ತಾರಿ ಎಂಬ ಮಾದಿಗ ಕೊಳ್ಳಿ ತರುವನು. ಹಾಗಾಗಿ ತಾರಿಗೂ ಪೂಜೆ ಇದೆ.[43] ಶಿವನ ಆಭರಣ, ಆಯುಧವಾಗಿ ನಾಗ ಸಂಬಂಧ ವಿವಿಧ ದ್ರಾವಿಡ ಬುಡಕಟ್ಟಗಳ ಸಮೀಕರಣಕ್ಕೆ ಸಾಕ್ಷಿಯಾಗುವುದು.

ಭಾದ್ರಪದ ಮಾಸದಲ್ಲಿ ಬರುವ ಜೋಕುಮಾರನ ಹುಣ್ಣಿವೆಗೆ ಹೊಲೆಯನ ಹುಣ್ಣಿವೆ ಎನ್ನುತ್ತಾರೆ.[44] ಯೋಗಕುವರಾರ ಮಳೆಯ ದೇವತೆ. ಅವನ ಅತಿ ಕಾಮುಕತೆ, ಅಗಸರು ಗಂಗಾಮತಸ್ಥರು, ಹೊಲೆಯರ ನಡುವಿನ ಅವನ ಸಂಬಂಧ, ವಿವಿಧ ಆಶಯಗಳು ಕೃಷಿ ತಾಂತ್ರಿಕತೆಗೆ ಸಂಬಂಧಿಸಿದ್ದರಿಂದ 'ಹೊಲೆಯನ ಹುಣ್ಣಿವೆ' ಎಂದು ಕರೆದಿರುವುದು ಸಮರ್ಥನೀಯವೇ, ಈತನಿಗೂ ಬೆತ್ತಲೆ ಗೌರಿಗೂ ಸಂಬಂಧವಿರುವಂತಿದೆ. ಜೇಷ್ಠಾದೇವಿಯ ಮಗ ಜೋಕುಮಾರ. ಈಕೆ ಗೌರಿ. ಬತ್ತಲೆ ಗೌರಿ ಶಾಕ್ತ ಪಂಥದ ಪಳೆಯುಳಿಕೆಯಾಗಿ, ಈಗಲೂ ನಾಡಿನ ಹಲವೆಡೆ ಶಿಲ್ಪಾಕೃತಿಗಳಲ್ಲಿ ಕಾಣುವಳು. ಜೋಕುಮಾರನೆಂಬ 'ಗಂಡು ಬಲಿ'ಯನ್ನು ಕೊಡುವವರು ದಲಿತ ಹೆಂಗಸರು ಎಂಬುದು ಹೊಲೆಯರ ಹುಣ್ಣಿಮೆಯ ಗಮನಾರ್ಹ ಅಂಶ.

ತಮಿಳು ನಾಡಿನಲ್ಲಿ ವಿಶೇಷವಾಗಿ ಪೂಜೆಗೊಳ್ಳುವ ಸ್ಕಂದ, ಸುಬ್ರಹ್ಮಣ್ಯ ದೇವರು ನಾಗನೇ. ಅನೇಕ ತಲೆಗಳ ಹಾವಿನ ಶಿಲ್ಪಕೃತಿಗಳು ಪೂಜೆಗೊಳ್ಳುವವು.[45]

ಸಿಡುಬು, ಕಾಲರಾ, ಪ್ಲೇಗುಗಳೆಂಬ ಮಾರಿ ರೋಗಗಳನ್ನು ನಿವಾರಿಸಲು ತುಳುನಾಡಿನ ನಲ್ಕೆ ಎಂಬ ಹೊಲೆಯರು "ಆಟಿ ಕಳಂಜ" ವಿಧಿಯನ್ನು ಆಚರಿಸುವರು. ಇದು ಸಾರ್ವಜನಿಕ ಹಿತರಕ್ಷಣೆಯ ಹಿನ್ನೆಲೆಯದು. ಗಂಡಸು ಹೆಂಗಸರಿಬ್ಬರೂ ಸೇರಿ ಮಾಡುವ ಈ ವಿಧಿ 'ಮಾಂತ್ರಿಕ ಜನಪದ ಕಲೆ'.[46] ಡಾ. ವಿವೇಕ ರೈ ಅವರ ಪ್ರಕಾರ "ಆಟಿಕಳಂಜ ಸಂಪ್ರದಾಯದಲ್ಲಿ ಮಾನುಷ ಮತ್ತು ಅತಿಮಾನುಷ ಸ್ಥಿತಿಗಳ ನಡುವಿನ ರೂಪವಾದ 'ಮಂತ್ರವಾದಿ'ಯು ರಾಚನಿಕವಾಗಿ ಮುಖ್ಯವಾಗುತ್ತಾನೆ."[47] ಮೈಯಲ್ಲಿ ಪ್ರೇತ ಮೊದಲಾದುವನ್ನು ಕಳೆಯುವುದು 'ಕಳೆಪುನಿ', ಮಾಂತ್ರಿಕಾಚಾರಣೆಯನ್ನು ನಲಿಕೆ ಹೊಲೆಯರು ಮಾಡುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಹೊಲೆಯರು ಹಾಕುವ ಭೂತ ವೇಷಗಳು, ಮಾಡುವ ವಿಧಿಯಾಚರಣೆಗಳು ಕೃಷಿಗೆ ಸಂಬಂಧಿಸಿದ್ದು ಕೃಷಿಗೂ ಮೂಲ ಮಾಟಕ್ಕೂ ದಲಿತ ಹೆಂಗಸರಿಗೂ ಇದ್ದ ಸಂಬಂಧಕ್ಕೆ ಸ್ಪಷ್ಟ ಸಾಕ್ಷಿಗಳಾಗಿವೆ. ಸುಗ್ಗಿಯ ಹುಣ್ಣಿವೆಯಿಂದ 7-8 ದಿನಗಳವರೆಗೆ ಸೂಳ್ಯ ಪರಿಸರದ ಮೇರರ 'ಚೆನ್ನುಲಿಕೆ' ಎಂಬ ವಿಧಿಯಾಚರಣೆಯಲ್ಲೂ ಇದೇ ಆಶಯವಿದೆ. ಚೆನ್ನು ಹೆಣ್ಣು ದೈವ. ಮೇರ ಗಂಡಸು ಹೆಂಗಸಿನ ವೇಷ ಹಾಕಿ ಭೂತ

ಸಂಪಿಗೆ ಹೂ ಮುಡಿದು ರಾತ್ರಿ ಕುಣಿಯುವುದು. ಕೊರಗನ ವೇಷ ಹಾಕಿ ಪಾಡ್ದನ ಹೇಳಿ ಕುಣಿಯುವುದು ಇಲ್ಲಿಯ ಸನ್ನಿವೇಶಗಳು. ಒಂದು ವಿಶೇಷವೆಂದರೆ ಇದೇ ಕಾಲದಲ್ಲಿ, ಗೌಡರು ಹಾಕುವ ಸಿದ್ದ ವೇಷ ಚೆನ್ನು ವೇಷಕ್ಕೆ ಎದುರಾಗಬಾರದು ಎಂಬುದು. ಎದುರು ಕಂಡರೆ ಸಿದ್ಧವೇಷವನ್ನು ಚೆನ್ನು ಮಾಯ ಮಾಡಿ ಬಿಡುತ್ತಾಳೆಂಬ ನಂಬಿಕೆ ಇದೆ.[48]

ಇಲ್ಲಿ ಗೌಡರ ಸಿದ್ಧವೇಶಕ್ಕಿಂತ ಪ್ರಬಲವಾದುದು ಹೊಲೆಯರ ಚೆನ್ನುನಲಿಕೆ ಎಂಬ ಸಂಗತಿ ಗಮನಾರ್ಹವಾಗಿದೆ. ವಲಸೆಗಾರರಾಗಿ ನಂತರ ಬಂದ ಗೌಡರು ಮೂಲಿಗರಿಂದ ಸೋಲಿಸಲ್ಪಡುತ್ತಾರೆ ಎಂಬುದು ಇಲ್ಲಿರುವ ಒಳಗಿನ ಅರ್ಥ.

ಕೊನೆಯ ದಿನ ಚೆನ್ನುವಿಗೆ ನಡೆಯುವ ಪೂಜೆಯಲ್ಲಿ ಮಾಂಸ, ಶರಾಬು, ಕಳ್ಳು ಅತ್ಯಗತ್ಯ. ಮೇರನೇ ಇಲ್ಲಿ ಪೂಜಾರಿ.[49]

ಭೂಮಿಯನ್ನು ಉಳುವಾಗ ಹೇಳುವ ಹಾಡುಗಳಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಉರಲ್' (ಕೆಲಸದ ಹಾಡುಗಳು) ಎನ್ನುವುದಿದ್ದು ಇವನ್ನು ಹೊಲೆಯರೇ ಹೆಚ್ಚಾಗಿ ಹೇಳುತ್ತಾರೆ. ತೆಂಗು ಅಡಿಕೆ ತರಕಾರಿ ಮೊದಲಾದ ಗಿಡಗಳಿಗೆ ಭೂತದ ಹೆಸರಿನಲ್ಲಿ ಕೊಡಿ ಕಟ್ಟುವ ವಿಧಾನ ತುಳುನಾಡಿನ ಹಳ್ಳಿಗಳಲ್ಲಿದೆ.[50] ಕೊಡಿ ಕಟ್ಟುವುದೆಂದರೆ ಭೂತದ ಹೆಸರಿನಲ್ಲಿ ಮಂತ್ರಿಸುವುದು. ಆ ಗಿಡಗಳ ಫಲಗಳನ್ನು ಕದ್ದವರಿಗೆ ಭೂತ ಕೆಡುಕುಂಟು ಮಾಡುವುದು ಎಂಬ ನಂಬಿಕೆ ಇದೆ.

ದಕ್ಷಿಣ ಕನ್ನಡದಲ್ಲಿ ಭೂತಗಳ ವೇಷ ಹಾಕುವವರು ಮತ್ತು ಪಾಡ್ದನಗಳನ್ನು ಹೇಳುವವರು ಹೆಚ್ಚಾಗಿ ಹೊಲೆಯರೇ. ಭೂತ ವೇಷ ಹಾಕುವುದು ಹೊಲೆಯರ 'ಏಕಸ್ವಾಮ್ಯ'. ಭೂತದ ವೇಷ ಹಾಕುವಾಗ, ವೇಷ ಹಾಕುವವ ಮತ್ತು ಅವನ ಮನೆಯ ಹೆಂಗಸು ತೆಂಬರೆ ಬಾರಿಸುತ್ತ ಒಬ್ಬರಾದ ಮೇಲೊಬ್ಬರಂತೆ ಪಾಡ್ದನಗಳನ್ನು ಹೇಳುವದು ಪದ್ಧತಿ. ಪಾಡ್ದನಗಳನ್ನು ಹೊಲಗಳಲ್ಲಿ ಕೆಲಸ ಮಾಡುವಾಗಲೂ (ನೇಜಿ ತೆಗೆಯುವಾಗ) ಹರಿಜನ ಹೆಂಗಸರು ಹೇಳುತ್ತಿರುತ್ತಾರೆ.[51] ಈ ಹರಿಜನರ ಹೆಸರುಗಳು, ಜನಪದ ಗುರು ವರ್ಗದವರೆಂಬುದನ್ನು ಸೂಚಿಸುತ್ತದೆ. ಪಣ್-ಪದ=ಪಂಬದ-ಹಾಡು ಹೇಳುವವ; ಪರವ = ಹಳೆಯವನು; ಪಾಣಾರ-ಹಾಡುವವರು; ನಲ್ಕೆ= ಕುಣಿಯುವರು.

ಭೂತದ ಆವೇಶವನ್ನು ತಳೆಯುವ ವ್ಯಕ್ತಿ 'ಪಾತ್ರಿ'. ಇವರು ಹೆಚ್ಚಾಗಿ ದಲಿತರೇ. "ಯಾರೆಂದರೆ ಅವರು ಪಾತ್ರಿಯಾಗುವ ಹಾಗಿಲ್ಲ. ಭೂತ ಅವರನ್ನು ಒಪ್ಪಿಕೊಂಡಿದೆಯೆಂದು ಸೂಚಿಸಲು ಕೆಲವು ಲಕ್ಷಣಗಳಿರುತ್ತವೆ. ಅವರ ಬದುಕಿನಲ್ಲಿ ವಿಧಿ ನಿಷೇಧಗಳು ಹೆಚ್ಚು. ಪಾತ್ರಿಯಾಗುವವನು ಗೃಹಸ್ಥನಾಗಿರಬೇಕು. ಕೂದಲನ್ನು ಕತ್ತರಿಸದೆ ಬಿಟ್ಟು ಹಿಂದುಗಡೆ ಗಂಟು ಹಾಕಿಕೊಳ್ಳುತ್ತಾನೆ; ಗಡ್ಡ ಮೀಸೆಯನ್ನು ಬಿಡುವುದಿಲ್ಲ."[52]

ಭೂತಾರಾಧನೆ ಆದಿಮ ಮಾತೃ ಪ್ರಧಾನ ಸಮಾಜದ ದಲಿತ ಹೆಂಗಸರ ಸೃಷ್ಟಿ ಎಂಬುದು ಅನುಮಾನವಿಲ್ಲದೆ ಹೇಳಬಹುದಾದ ಸಂಗತಿ. 'ಭೂತ'ವಾಗುವ ದಲಿತ ಗಂಡಸು ಹೆಂಗಸಾಗಬೇಕಾಗುತ್ತೆನ್ನುವುದು (ಗಡ್ಡ ಮೀಸೆ ಇಲ್ಲ, ತಲೆಗೂದಲು ಹೆಂಗಸಂತೆ ಉದ್ದ) ಸಂಗತಿಗೆ ಗಟ್ಟಿ ಆಧಾರ.

ಉತ್ತರ ಮತ್ತು ದಕ್ಷಿಣ ಕರ್ನಾಟಕದ ಹಲವಾರು ಕಡೆ ಭೂತಪ್ಪಗಳ ಗುಡಿಗಳಿದ್ದು ಪೂಜೆ ಸಲ್ಲುತ್ತದೆ. ಮಲೆನಾಡಿನಲ್ಲಿ ಗ್ರಾಮದೇವತೆಯ ಬನದಲ್ಲಿರುವ ಭೂತಪ್ಪ ಕಳ್ಳರನ್ನು ಕದಿಯದಂತೆ ನೋಡಿಕೊಳ್ಳುವನು. ಮನೆಗೊಂದು ಕೋಳಿ, ಊರಿಗೊಂದು ಕುರಿಗಳ ಬಲಿ ಇವನಿಗಿದೆ.[53]

ಸುಮಾರು 274 ಭೂತಗಳ ಹೆಸರುಗಳನ್ನು ವಿವೇಕ ರೈ ಸಂಗ್ರಹಿಸಿದ್ದಾರೆ.[54] ಅವುಗಳಲ್ಲಿ ಹೆಚ್ಚಿನವು ಹೆಣ್ಣು ದೇವತೆಗಳ ಹೆಸರಾಗಿರುವುದನ್ನು ಅವಶ್ಯಕವಾಗಿ ಗಮನಿಸಬೇಕು. ಈ ಹೆಸರುಗಳಲ್ಲಿ ಮಾಸ್ತಿ, ಮಾರಿಯಮ್ಮ, ಮಾಂಕಾಳಿ, ನಾಗೇಶ್ವರಿ, ಕನ್ಯಾಕುಮಾರಿ, ಕಾಳಭೈರವಿ, ಚಾಮುಂಡಿ, ಗಾಂಧಾರಿ, ಭಗವತಿ ಮೊದಲಾದವರು ಸೇರಿರುತ್ತಾರೆ. ದ್ರಾವಿಡರಲ್ಲಿ ದೇವರ ಕಲ್ಪನೆ ಹೇಗಿದೆ ಎನ್ನುವುದಕ್ಕೆ ಭೂತಾರಾಧನೆ ಒಂದು ಒಳ್ಳೆಯ ಆಕರವಾಗಿದೆ. ವಿಶೇಷ ವ್ಯಕ್ತಿಗಳು ಅಕಾಲ ಮರಣ ದುರ್ಮರಣ ಹೊಂದಿಯೊ, ಕೆಲವು ಬಲಿಷ್ಟ ಪ್ರಾಣಿಗಳು ಸತ್ತೊ ಭೂತಗಳಾಗುವವೆಂಬ ನಂಬಿಕೆ ಇಲ್ಲಿದೆ. ಈ ಭೂತಗಳು ದೇವರಾಗಿ ಪೂಜಲ್ಪಡುತ್ತವೆ. ಈಗ ಶಿಷ್ಟ ದೇವರಾಗಿ ಪೂಜಲ್ಪಡುತ್ತಿರುವ ಎಷ್ಟೋ ದ್ರಾವಿಡ ದೇವರುಗಳು ಮೂಲದಲ್ಲಿ ಭೂತಗಳಾಗಿದ್ದವು. ಮಾನವ-ಭೂತ- ದೇವರು-ಶಿಷ್ಟ ದೇವರು ಈ ಕ್ರಮದಲ್ಲಿ ದ್ರಾವಿಡ ಪರಿಕಲ್ಪನೆ ಬೆಳೆದಿದೆ. ಬಯಲು ಪ್ರದೇಶಗಳಲ್ಲಿ ಭೂತಗಳ ಆಕಾರಗಳು ಮಾಯವಾಗಿ ಅಲ್ಲಲ್ಲಿ ಪಳೆಯುಳಿಕೆಗಳು ಉಳಿದವು. ಬಾಹ್ಯ ಸಂಸ್ಕೃತಿಯ ಪ್ರಭಾವ ಅಷ್ಟಾಗಿ ಮೇಲಿಂದ ಮೇಲೆ ಆಗಲು ಶಕ್ಯವಿರದಿದ್ದ ಘಟ್ಟದ ಕೆಳಗಿನ ಭಾಗದಲ್ಲಿ ಈ ಪ್ರಾಚ್ಯ ಆಕೃತಿಗಳು ಸ್ಪಷ್ಟವಾಗಿ ಉಳಿದು ಬಂದವು. ದ್ರಾವಿಡರ ದೇವಲೋಕ-ಭೂತಲೋಕ. ಭೂತಗಳಿಗೆ ನಾಥ 'ಶಿವ'ನೂ ಮೊದಲು ಭೂತನೇ. ಭೂತ ಪ್ರಪಂಚವೇ ಕಾಲ ಸಂದಂತೆ ಮಾರ್ಪಡುತ್ತ ದೇವ ಪ್ರಪಂಚವಾಗಿತ್ತು. ದ್ರಾವಿಡ ಸಂಸ್ಕೃತಿಯ ಈ ಲಕ್ಷಣ ವೈದಿಕರಿಗಿಂತ ಪೂರ್ಣ ಭಿನ್ನವಾಗಿದೆ. ಆಷ್ಟೇ ಏಕೆ ವಲಸೆಗಾರ ದ್ರಾವಿಡರ-ದೈವೀ ಕಲ್ಪನೆಗಳಿಗಿಂತಲೂ ಮೂಲದ ದಲಿತರ ಪರಿಕಲ್ಪನೆಗಳು ಭಿನ್ನವಾಗಿದೆ. ವಲಸೆಗಾರ ಪಶುಪಾಲಕ ದ್ರಾವಿಡರಲ್ಲಿ ಭೂತಗಳ ಪ್ರದೇಶ ಮೂಲಿಗ ದಲಿತರ ಸಂಸ್ಕೃತಿಯಿಂದಾಗಿದೆ. ಭೂತಗಳ ಪರಿಕಲ್ಪನೆ ಮೂಲಿಗ ದ್ರಾವಿಡರದ್ದು. ಇವು ಚಾಮ, ಸೋಮ ಎಂಬ ಹೆಸರುಗಳಿಂದ ಬಯಲು ಸೀಮೆಗಳಲ್ಲಿ ಉಳಿದವು. ಅವು ಅಮ್ಮನ ಮಕ್ಕಳಾದವು. ಬಹುಶಃ ಪೋತರಾಜನೂ ಈ ಗುಂಪಿನವನೇ.

ಭೂತಾರಾಧನೆ ಆದಿಮ ಸಮಾಜ ಸ್ಥಿತಿಯ ಪ್ರಾಚ್ಯ ಪದ್ಧತಿಯಾಗಿತ್ತು, ಅದು ಮಾತೃ ಪ್ರಧಾನ ಸಮಾಜವಾಗಿತ್ತು. ಹಾಗಾಗಿ ಹೆಣ್ಣು ಭೂತಗಳೆ ಹೆಚ್ಚು ಸೃಷ್ಟಿಯಾದವು. ಭೂತರೂಪಿ ಅಮ್ಮ ಮೊದಲ ರೂಪ, 'ಊರಮ್ಮ' ವಲಸೆಗಾರ ಪಶುಪಾಲಕ ದ್ರಾವಿಡರ ಆಗಮನದ ನಂತರದ ರೂಪ. ಪ್ರಾಣಿಗಳು ಭೂತವಾದ ಕಥೆ ಪಾಡ್ದನಗಳೂ ಸಹ, ಆದಿ ಮಾನವನ ಬದುಕನ್ನೆ ವಿವರಿಸುತ್ತವೆ. ಉದಾಹರಣೆಗೆ ಪ್ರಖ್ಯಾತ ಪಂಜುರ್ಲಿ (ಹಂದಿಯ ಮರಿ) ಭೂತದ ಕಥೆ ಆದಿಮ ಕುಟಂಬ ವ್ಯವಸ್ಥೆಯ ಮೇಲೆ ಬೆಳಕು ಬೀರುವುದು. ಅಲ್ಲಿ ಸೋದರ ಸೋದರಿಯರ ಮಧ್ಯೆ ನಡೆಯುತ್ತಿದ್ದ ಮದುವೆಯ ಪ್ರಸ್ತಾಪ ಬರುವುದರಿಂದ, [ಪಂಜುರ್ಲಿ ಪಾಡ್ದನದ ಒಂದು ಪಾಠಾಂತರದಲ್ಲಿ ಮಾದು, ಪಾರ್ವತಿ, ಗೌರಿ, ಗಂಗಮ್ಮರು ಶಿವನ ಸೋದರಿಯರಾಗಿದ್ದಾರೆ.[55] (ಇಲ್ಲಿ ಮಾದು, ಮಾದಿಗರ ಮೂಲ ಅಮ್ಮನಾಗಿರಬೇಕು)]

ಏಂಗೆಲ್ಸರು ಹೇಳುವ ಅತ್ಯಂತ ಆರಂಭಿಕ ಘಟ್ಟದ “ರಕ್ತ ಸಂಬಂಧಿ” ಕುಟುಂಬದ ಕಾಲಕ್ಕೆ ಈ ಸ್ಥಿತಿ ಹೊಂದುತ್ತದೆ. ಇದರ ಮುಂದಿನ ಹಂತದೇ ‘ಪ್ರಲಾನುಆನ್’ ಕುಟುಂಬ ಪದ್ಧತಿ.[56] ಅಳಿಯ ಸಂತಾನ ಕಟ್ಟು ಮತ್ತು ಸೋದರ ಮಾವನ ಮಗ ಅಥವಾ ಮಗಳನ್ನು ಮದುವೆಯಾಗುವ ಈಗಿನವರೆಗೂ ಉಳಿದು ಬಂದಿರು ದ್ರಾವಿಡ ಮದುವೆ ಪದ್ಧತಿ.

**ಎಡಗೈ-ಬಲಗೈ:**

“... god is a woman and it ought to be the aim of all to become a woman” ಭಂಡಾರಕರ.

ಈಗ ಹೊಲೆ-ಮಾದಿಗರ ಮಧ್ಯದಲ್ಲಿರುವ ವ್ಯತ್ಯಾಸದ ವಿಚಾರ. ಇದು ಬಲಗೈ ಎಡಗೈ ಎಂದು ಪ್ರಖ್ಯಾತವಾಗಿದ್ದು, ಇಡೀ ದಕ್ಷಿಣ ಭಾರತದ ಜಾತಿ ವ್ಯವಸ್ಥೆಯನ್ನು ಎರಡು ಹೋಳುಗಳನ್ನಾಗಿ ಮಾಡಲು ಯತ್ನಿಸಿದ ತಂತ್ರವಾಗಿದೆ. ಈಗಾಗಲೇ ಹಲವು ಸಲ ಪ್ರಸ್ತಾಪಿಸಿರುವಂತೆ ಮಾದಿಗರು ಎಡಗೈ ಪಂಥದವರು; ಹೊಲೆಯರು ಬಲಗೈ ಪಂಥದವರು. ಹೊಲೆ ಮಾದಿಗರು ಮೂಲದಲ್ಲಿ ಒಂದೇ ಬುಡಕಟ್ಟಿನ ಜನವಾಗಿದ್ದು, ಜಾತಿಯಾಧಾರಿತ ಶೋಷಕ ಸಮಾಜ ಹುಟ್ಟುವ ಸ್ವಲ್ಪ ಮೊದಲು ಇವರು ಎಡಗೈ-ಬಲಗೈ ಎಂದು ವಿಭಜಿತರಾಗಿರುವಂತಿದೆ. ಜಾತಿ-ವರ್ಗ ಸಮಾಜ ಇಬ್ಬರನ್ನೂ ಪ್ರತ್ಯೇಕ ವೃತ್ತಿಗಳಿಗೆ ಪರಿವರ್ತಿಸಿಕೊಂಡಿತು. ತೆಲುಗು ಮಾಲರು, ಕನ್ನಡದ ಚಲವಾದಿ-ಹೊಲೆಯರು, ತಮಿಳುನಾಡಿನ ಪರೈಯನ್‌ರು ಮೂಲದಲ್ಲಿ ಪೂಜಾರಿಗಳಾಗಿದ್ದವರು ಈಗ ವಾದ್ಯಗಾರರಾಗಿ, ಮೇಳ ಮಾಡುವವರಾಗಿ, ಬಲಗೈ ಜಾತಿಗಳ ಬಿರುದುಗಳನ್ನು; ದೇವರುಗಳನ್ನು ರಕ್ಷಿಸುವವರಾಗಿ ಒಟ್ಟಾರೆ ಭೂಮಿ ಸಂಬಂಧವನ್ನು ದೂರ ಮಾಡುವ ವೃತ್ತಿಗಳಿಗೆ ಅಂಟಿಸಲ್ಪಟ್ಟರೆ; ಎಡಗೈ ಮಾದಿಗರು, ಭೂಮಿಗಳಿಗೆ ಅಂಟಿಕೊಂಡು, ಹುಟ್ಟಾಳು, ಮೂಲದ ಆಳು, ಆನುವಂಶಿಕ ಆಳು ಎಂಬ ಹೆಸರುಗಳಿಂದ ಜೀತಗಾರರಂತೆ ಉಳಿದರು ಮತ್ತು ಕೃಷಿಗೆ ಅನಿವಾರ್ಯವಾಗುವ ಚರ್ಮದ ವಸ್ತುಗಳನ್ನು ಮಾಡಿಕೊಡುವ ವೃತ್ತಿಯವರಾದರು. ಹೇಗೋ ಒಟ್ಟಾರೆ ಭೂಮಿಗೆ ಅಂಟಿ ಕೊಂಡಿದ್ದ ಇವರು ಎಡಗೈ ತಾಂತ್ರಿಕತೆ, ಕೌಳ, ವಾಮಾಚಾರಿ ಪದ್ಧತಿಗಳನ್ನು; ಅಮ್ಮನಾರಾಧನೆಯಲ್ಲಿ ಮುಖ್ಯ ಪಾತ್ರವನ್ನು ಉಳಿಸಿಕೊಂಡರು. ಜಾತಿವ್ಯವಸ್ಥೆಯ ಹೀನಸ್ಥಿತಿಗೆ ಬಲಗೈ ಹೊಲೆಯವರು ಸ್ವಲ್ಪ ಮಟ್ಟಿಗೆ ಹೊಂದಾಣಿಕೆ ಮಾಡಿಕೊಳ್ಳುವ ಲಕ್ಷಣವನ್ನು ತೋರ್ಪಡಿಸಿದರೆ, ಎಡಗೈ ಮಾದಿಗರು ತಮ್ಮ ಮೂಲದ ಲಕ್ಷಣಗಳಿಗೆ ಹೆಚ್ಚು ಅಂಟಿಕೊಂಡಿರಲು ಸಾಧ್ಯವಾಯಿತು.

ಕನ್ನಡ ಜಾನಪದ ವಿಶ್ವಕೋಶದಲ್ಲಿ[57] ‘ತಂತ್ರಗಳು’ ಎಂಬ ಶೀರ್ಷಿಕೆಯಡಿ ಬಲಗೈ ಪಂಥದವರು ದಕ್ಷಿಣಾಚಾರಿಗಳು, ಇವರು ವೇದವಿಹಿತ ಆಚರಣೆಗಳನ್ನು ಪಾಲಿಸುವವರು; ಎಡಗೈ ಪಂಥದವರು ವಾಮಾಚಾರಿಗಳು, ಶಕ್ತಿ ಶಾಕ್ತ ಯೋಗಿನಿ, ವಟುಕ ಎಂಬ ಸ್ತ್ರೀ ದೇವತೆಗಳ ಪರಂಪರೆಯೊಂದಿಗೆ ತಮ್ಮನ್ನು ಸಮೀಕರಿಸಿಕೊಳ್ಳಲು ಸಾಧನೆ ಮಾಡುವವರು ಎಂದು ವಿವರಿಸಲಾಗಿದೆ.

“ಶಾಕ್ತ ಸಂಪ್ರದಾಯ ಕೇವಲ ದೇವಿಯರ ಲೋಕಕಕ್ಕಷ್ಟೇ ಸೀಮಿತವಾಗದೇ

ಪೂಜಾಚರಣೆಯಲ್ಲಿ 'ತಂತ್ರಾಚಾರ'ದಿಂದ ವಿಶಿಷ್ಟವಾಗಿದೆ. ಶಾಕ್ತ ದೇವಿಯರ ಪೂಜೆಯಲ್ಲಿ 'ತಂತ್ರ' ಒಂದು ಅವಿಭಾಜ್ಯ ಅಂಗವಾಗಿದ್ದು ಶಾಕ್ತದೇವಿಯರ ಜತೆಗೇ ತಂತ್ರವೂ ಇತರ ಶಾಸ್ತ್ರೀಯ ಸಂಪ್ರದಾಯಗಳನ್ನು ಪ್ರವೇಶಿಸುತ್ತದೆ. ಶಾಕ್ತ ಆಗಮಗಳನ್ನು ಪೂರ್ಣವಾಗಿ 'ತಾಂತ್ರಿಕ' ಹಾಗೂ 'ಅವೈದಿಕ' ಎಂದು ವೈದಿಕ ಸಂಪ್ರದಾಯ ಪರಿಗಣಿಸುತ್ತದೆ. ಇಷ್ಟಾದರೂ ಮಧ್ಯಕಾಲದಲ್ಲಿ ಎಲ್ಲ ಶಾಸ್ತ್ರೀಯ ಸಂಪ್ರದಾಯಗಳಲ್ಲಿ 'ಶಕ್ತಿ' ಉಪಾಸನೆ ಪ್ರಧಾನವಾಗಿ ತಾಂತ್ರಿಕ ಶಾಸ್ತ್ರೀಯ ಸಂಪ್ರದಾಯ ಬೆಳೆಯಿತು. ಹೀಗೆ ಶಾಕ್ತ ಆಚರಣೆಯಲ್ಲಿ ಹಲವು ವಿಭಾಗಗಳು ಹುಟ್ಟುತ್ತವೆ. ಆಗಮಗಳ ಪ್ರಕಾರ ಶಾಕ್ತ ಆಚರಣೆ ಏಳು ಆಚರಣೆಗಳನ್ನು ಒಳಗೊಂಡಿದೆ. ಅವೆಂದರೆ ವೇದಾಚಾರ, ವೈಷ್ಣವಾಚಾರ, ದಕ್ಷಿಣಾಚಾರ, ವಾಮಾಚಾರ, ಸಿದ್ಧಾಂತಾಚಾರ, ಶೈವಾಚಾರ ಹಾಗೂ ಕಾಲಾಚಾರ. ಇವುಗಳಲ್ಲೆಲ್ಲ ಕಾಲಾಚಾರ ಸರ್ವಶ್ರೇಷ್ಠ ಎಂಬುದು ಶಾಕ್ತಾಗಮಗಳ ಅಭಿಪ್ರಾಯ."[58]

Emile Durkheim ಎಂಬ ಸಮಾಜಶಾಸ್ತ್ರಜ್ಞ, "It is thus even up to the distinction between right and left which. Far from being inherent in the nature of man in general, is very probably, the product of representations which are religious and therefore collective"[59] ಎಂದು ಹೇಳುತ್ತಾನೆ.

ವೇದಗಳಿಗಿಂತ ಮೊದಲಿದ್ದ ತಂತ್ರಶಾಸ್ತ್ರದ ಇನ್ನೊಂದು ಹೆಸರು 'ಮಂತ್ರ ಶಾಸ್ತ್ರ'. ಮಂತ್ರದ ನಿರ್ದಿಷ್ಟ ಅದಿದೇವತೆಯನ್ನು ಉಪಾಸಿಸಿ ಸಾಧಕ ನಿರ್ದಿಷ್ಟ ವಸ್ತುವನ್ನು ನಿಯಂತ್ರಿಸಬಲ್ಲ ಎಂಬ ಅಭಿಪ್ರಾಯಗಳಿವೆ.[60] ತಂತ್ರದ ವಿಶಿಷ್ಟ ಲಕ್ಷಣಗಳಲ್ಲಿ ಜಾತಿ, ಲಿಂಗ ಭೇದವಿಲ್ಲದಿರುವ, ಪುರುಷ ಗುರುವಿಗಿಂತ ಮಹಿಳಾ ಗುರುವಿಗೆ ಹೆಚ್ಚಿನ ಸ್ಥಾನಮಾನಗಳಿರುವ ಅಂಶಗಳು ಉಲ್ಲೇಖಾರ್ಹವಾಗಿವೆ.[61] ತಂತ್ರ ಮನುಷ್ಯನಲ್ಲಿ ಸತ್ತ್ವ , ರಜಸ್, ತಮೋ ಗುಣಗಳಿವೆ ಎಂದು ಹೇಳಿ, ಇವಕ್ಕನುಗುಣವಾಗಿ ಪಶುಭಾವ, ವೀರಭಾವ, ದಿವ್ಯಭಾವಗಳಿರುತ್ತವೆ: ಈ ಪ್ರಯತ್ನದಿಂದ ವ್ಯಕ್ತಿ ಉನ್ನತಮಟ್ಟಕ್ಕೆ ತಲುಪುವ ಸಾಧ್ಯತೆಗಳಿರುತ್ತವೆ ಎನ್ನುತ್ತದೆ.[62] ಜಾತಿಯ ಮೇಲು ಕೀಳಿನ ಶಾಶ್ವತವಾದ ವ್ಯವಸ್ಥೆಯ ವಿರುದ್ಧ ಈ ವಿಚಾರಗಳು ಕ್ರಾಂತಿಕಾರಕವಾಗಬಲ್ಲವು. ತಂತ್ರ ವಿಚಾರಕ್ಕಲ್ಲ, ಆಚಾರಕ್ಕೆ ಅನುಭವಕ್ಕೆ ಮಹತ್ವ ನೀಡುತ್ತದೆ.[63] ಸನ್ಯಾಸ ಜೀವನವನ್ನು ವೈರಾಗ್ಯವನ್ನು ಜೀವನದ ಶ್ರೇಷ್ಠ ಹಂತವೆಂದು ಉಪದೇಶಿಸುವ ವೈದಿಕ-ಉಪನಿಷತ್ ಪರಂಪರೆಗೆ ಪ್ರತಿಯಾಗಿ ತಾಂತ್ರಿಕ ಪಂಥವು ಶಕ್ತಿಯಂತೆ ಜಗತ್ತು ಕೂಡ ಸತ್ಯವೆಂದು, ಮಾನವ ಜನ್ಮದ ಗುರಿ ಈ ಜಗತ್ತಿನ ಸತ್ಯವನ್ನು ಸಂಪೂರ್ಣವಾಗಿ ಅರಿಯುವುದೆಂದು, ಭೂಮಿ ಆನಂದಮಯಿಯಾದ ಶಕ್ತಿಯ ಲೀಲಾಕ್ಷೇತ್ರವೆಂದು ಸಾಧಿಸುತ್ತದೆ. ನಿಸರ್ಗದ ನಿಗೂಢಗಳನ್ನು ಅರಿಯುವ ಶೋಧಕನಾಗಿ ತಾಂತ್ರಿಕನೊಬ್ಬ ಭೂತವಿದ್ಯೆ, ಪವಾಡ ವಿದ್ಯೆ, ರಸಾಯನ ವಿದ್ಯೆ, ಸಸ್ಯ ಜ್ಞಾನ, ಧಾತು ವಿದ್ಯೆ, ವೈದ್ಯ ಶಾಸ್ತ್ರ, ಆಕಾಶ ವಿದ್ಯೆ, ಖಗೋಲ ಶಾಸ್ತ್ರಗಳನ್ನು ಬಲ್ಲವನಾಗಬಲ್ಲ. ತಂತ್ರ 'ವಿಶ್ವಕೋಶಾತ್ಮಕ ವಿಜ್ಞಾನ'ವಾಗಿದೆ.[64]

ಜಾತಿ ವ್ಯವಸ್ಥೆ ದ್ರಾವಿಡ ನಾಡುಗಳಲ್ಲಿ ಸ್ಥಿರಗೊಂಡುದರ ಲಕ್ಷಣವಾಗಿದೆ ಎಡಗೈ, ಬಲಗೈ ವಿಭಾಗ. ಊಳಿಗಮಾನ್ಯ ಕಾಲದಲ್ಲಿ ಜಾತಿ ವ್ಯವಸ್ಥೆಯ ದಕ್ಷಿಣದ ಕ್ರೋಡೀಕರಣಕ್ಕೆ

ಇದು ಸಂಬಂಧಿಸಿತು. ಆದರೆ ಇದು ಮೂಲ ಹೊಲೆ-ಮಾದಿಗರ ತಾತ್ತ್ವಿಕ ಮತ್ತು ಸಾಂಸ್ಕೃತಿಕ ಭೇದವನ್ನು ಸೂಚಿಸುವುದಕ್ಕಿದ್ದ ಪರಿಭಾಷೆಯನ್ನೇ ಆಧರಿಸಿತ್ತು ಎಂಬುದು ಹೊಲೆ ಮಾದಿಗರ ಶ್ರೇಷ್ಠತೆಗೆ ಮತ್ತು ಪ್ರಾಬಲ್ಯಕ್ಕೆ ಸಾಕ್ಷಿಯಾಗುತ್ತದೆ. ಇತರೆಲ್ಲ ಜಾತಿಗಳಿಗಿಂತ ಪ್ರಮುಖವಾಗಿ; ದಲಿತರಲ್ಲೇ ಈ ಭೇದ ಖಚಿತವಾಗಿರುವುದರಿಂದ ಎಡಗೈ-ಬಲಗೈ ವಿಭಾಗ ಸ್ಪಷ್ಟವಾಗಿ ಹೊಲೆ-ಮಾದಿಗರಲ್ಲಿಯೆ ಹುಟ್ಟಿ ಬೆಳೆದ, ತಾತ್ವಿಕ ಭೇದಗಳಾಗಿವೆ.

ಎಡಗೈ ಬಲಗೈ ವಿಭಜನೆಗೆ ಕಾರಣ ಕಂಚಿಯ ಕಾಳಿಕಾದೇವಿಯ ಎಡಗೈ; ಬಲಗೈಗಳೆಂದು ಒಂದು ನಂಬಿಕೆ ಇದೆ. ಕಂಚಿಯ ಕಾಮಾಕ್ಷಿ ಈಗ ಸೌಮ್ಯ ಸ್ವರೂಪದ ದೇವಿಯಾಗಿದ್ದರೂ ಮೂಲದಲ್ಲಿ ಹೊಲೆ-ಮಾದಿಗ ಶಾಕ್ತರ ಕಾಳಿಯಾಗಿದ್ದಳೆಂಬುದರಲ್ಲಿ ವಿದ್ವಾಂಸರು ಅನುಮಾನಿಸುವುದಿಲ್ಲ. ಎಡಗೈ, ಬಲಗೈ ವಿಭಜನೆಯ ಹಕ್ಕು ಬಾಧ್ಯತೆಗಳ ತಾಮ್ರಶಾಸನವೂ ಕಂಚಿಯಲ್ಲಿ ಇದೆ ಎಂಬ ನಂಬುಗೆಯೂ ಇದೆ. ಕಾಳಮ್ಮ ಎಂಬ ದೇವತೆಯ ಮೂಲಸ್ಥಾನ ಕಂಚಿಯ ಇರಬೇಕು. ಕಾಳು + ಅಮ್ಮ = ಕಾಳಮ್ಮ ಎಂದಿದ್ದರೆ ಕೃಷಿ ದೇವತೆಯಾಗುತ್ತಾಳೆ ಈಕೆ. ಬಂಗಾಲದಲ್ಲಿ ಈಕೆ ಕಾಲಿ-ದುರ್ಗೆಯಾದಳು. ನಮ್ಮ ನಾಡಿನಾದ್ಯಂತ ಪೂಜೆಗೊಳ್ಳುವ ಕಾಳವ್ವನನ್ನು ಪಂಚಾಳರು ಪೂಜುತ್ತಾರೆ. ಬಲಗೈಗೆ ವಿರುದ್ಧವಿರುವ ಎಡಗೈ ವಿಭಾಗದವರ ನೇತಾರರೂ ಪಂಚಾಳರೇ ಸಾಮಾಜಿಕವಾಗಿ ಊರ ಹೊರಗಿನ ಪ್ರತ್ಯೇಕ ಕೇರಿಗಳಲ್ಲಿ ಮಾತ್ರ ನೆಲೆಸಲು ನಿರ್ಬಂಧವಿದ್ದ ಪಂಚಾಳರು, ರಾಜಕೀಯ ಆರ್ಥಿಕ ಕಾರಣಗಳಿಂದ ಮೇಲ್ವರ್ಗದ ಸಾಮಾಜಿಕ ಸ್ಥಾನಮಾನಗಳಿಗೆ ಬ್ರಾಹ್ಮಣರ ವಿರುದ್ಧ ಪೈಪೋಟಿಗಿಳಿದರು ಎಂದು ಕೆ. ರಾಮಯ್ಯ ಊಹಿಸುತ್ತಾರೆ.[65] ಇದೇ ಪಣವ್ಯಾಜ್ಯಕ್ಕೆ (ಎಡಗೈ-ಬಲಗೈ) ಕಾರಣವಾಯಿತು. ಇದು 10ನೇ ಶತಮಾನದಲ್ಲಿ ಪ್ರಾರಂಭವಾಯಿತು.[66] "ಈ ಎಡಗೈ-ಬಲಗೈ ವಿಭಜನೆ ಬ್ರಾಹ್ಮಣ ಮೂಲದ ವರ್ಣಾಧಾರಿತ ಜಾತಿ ಪದ್ಧತಿಗೆ ಸವಾಲಿನಂತೆ ಮೇಲು ನೋಟಕ್ಕೆ ಕಂಡು ಬಂದರೂ ಅಸ್ಪೃಶ್ಯ ಸಮುದಾಯಕ್ಕೆ ಮಾತ್ರ ವಿಪತ್ಕಾರೀ ಸಂಕಟವನ್ನೇ ತಂದೊಡ್ಡಿತು ಎಂದು ತೀರ್ಮಾನಿಸಬಹುದು. ಒಂದು ಕಡೆ ಪಂಚಾಳನನ್ನು ಮೇಲೆತ್ತಲು ತನ್ನೆಲ್ಲಾ ಸೃಜನ ಶೀಲತೆಯನ್ನು ಧಾರೆಯೆರೆದ ಮಾದಿಗರು, ಇನ್ನೊಂದು ಕಡೆ ಬ್ರಾಹ್ಮಣರನ್ನು ಬೆಂಬಲಿಸಿ ನಿಂತ ಹೊಲೆಯರು; ಹೀಗೆ ಪರಸ್ಪರರನ್ನು ಬೇರೆ ಮಾಡಿ" ದಾಯಾದಿ ಕಿಚ್ಚು ಹಚ್ಚಿತು.[67] ಇದು ಮಧ್ಯಯುಗದ ಕಥೆ ನಿಜ. ಆದರೆ ಪಂಚಾಳರು ಯಾರು? ದ್ರಾವಿಡ ಮೂಲದವರೇ ಆಗಿದ್ದರೆ ಅವರೂ ಹೊಲೆ-ಮಾದಿಗರೇ ಇರುತ್ತಾರೆ. ವೈದಿಕ ಮೂಲದವರೆಂದು ಸಾಧಿಸಲು ಆಧಾರಗಳು ಕಡಿಮೆ. ತಮಿಳುನಾಡಿನ ಪಂಚಾಳರ ಕಥೆಗಳು ಪರ್ರೈಯನ್‌ರ ವಿಷಯಗಳು, ಪಂಚಾಳರೂ ಹೊಲೆ-ಮಾದಿಗರೇ ಇರುವ ಸಾಧ್ಯತೆಯನ್ನೂ ಅಲ್ಲಗಳೆಯಲಾರವು. ಹಾಗಾಗಿ ಪಂಚಾಳರು ಮೇಲ್ವರ್ಗ-ಜಾತಿಗಳಿಗೆ ಏರಿಬಂದ ಮಾದಿಗರೇ ಆಗಿರುವ ಶಕ್ಯತೆ ಇದೆ.

ಪಿ. ಥಾಮಸ್[68] ಶಾಕ್ತರ ಕುರಿತು ಪ್ರಸ್ತಾಪಿಸಿದ್ದಾರೆ. ಶಕ್ತಿ (ಶಿವೆ) ಪೂಜಕರು ಶಾಕ್ತರು. ಇಲ್ಲಿ ಸ್ವತಃ ಶಿವನೇ ಶಿವೆಯನ್ನು ಪೂಜುವನು. ಇವರಲ್ಲಿ ದಕ್ಷಿಣ ಮಾರ್ಗಿ ಮತ್ತು ವಾಮಮಾರ್ಗಿ ಎಂಬೆರಡು ಭಾಗಗಳಿವೆ. ದಕ್ಷಿಣ ಮಾರ್ಗಿಯರಿಗೆ ಬಲಗೈ ಪೂಜಕರು ಅಥವಾ ಬಹಿರಂಗ ಪೂಜಕರು ಎಂದೂ ವಾಮ ಮಾರ್ಗಿಗಳಿಗೆ ಎಡಗೈ ಪೂಜಕರು ಅಥವಾ ಗುಪ್ತ ಪೂಜಕರು ಎಂದೂ ಕರೆಯುತ್ತಾರೆ. ಇವರಲ್ಲಿ ಚಕ್ರಪೂಜೆ, ಪಂಚ'ಮ'ಕಾರದ ಅನುಸರಣೆ ಇವೆ. ಇವರು

ಬತ್ತಲೆ ಹೆಣ್ಣನ್ನು (ಲಜ್ಜಾಗೌರಿ-ಬತ್ತಲೆಗೌರಿ) ಪೂಜಿಸುವರು. ಈ ಶಾಕ್ತರು ತಮ್ಮನ್ನು ವೀರರೆಂದೂ; ಇತರರನ್ನು ಪಶುಗಳೆಂದೂ ಭಾವಿಸುವರು. ಇವರು ಜಾತಿಯನ್ನು ಮನ್ನಿಸುವುದಿಲ್ಲ.[69]

ಶಾಕ್ತರಲ್ಲಿ ವೀರ, ಪಶು ಎಂಬ ವಿಭಾಗಗಳು ವೀರಶೈವರಲ್ಲಿಯ ಭವಿ, ಭಕ್ತ ಕಲ್ಪನೆಯನ್ನು ಹೋಲುತ್ತವೆ. ವೀರಶೈವ ಈ ಪರಿಕಲ್ಪನೆಯನ್ನು ಶಾಕ್ತರಿಂದ ಪಡೆದಿರುವ ಸಾಧ್ಯತೆ ಇದೆ. 'ವೀರಶೈವ' ಎಂಬ ಪದದಲ್ಲಿಯ 'ವೀರ'ವೂ ಈ ಶಾಕ್ತರೆಂದಲೇ ಸೇರಿರುವುದು ಸಂಭವನೀಯ. ಥಾಮಸ್‌ರನ್ನು ಅನುಸರಿಸಿ ಹೇಳುವುದಾದರೆ ಮಾದಿಗರು ವಾಮಾಚಾರಿಗಳು; ಹೊಲೆಯರು ದಕ್ಷಿಣಾಚಾರಿಗಳಾಗುತ್ತಾರೆ. ಲೋಕಾಯತಕ್ಕೂ , ಮೂಲ ಕೃಷಿಕರಿಗೂ, ತಾಂತ್ರಿಕ ಪಂಥಕ್ಕೂ , ಮಾತೃ ಆರಾಧನೆಗೂ, ದಲಿತರಿಗೂ ಆಂತರಿಕ ಸಂಬಂಧವಿರುವುದರಿಂದ ಹೀಗೆ ಹೇಳುವುದರಲ್ಲಿ ಖಂಡಿತ ತಪ್ಪಿಲ್ಲ. ಇದು ನಿಜವೆನ್ನುವುದಾದರೆ ಮಾದಿಗರಲ್ಲಿರುವ ವಿಧಿಯಾಚರಣೆಗಳನ್ನು ವಾಮಾಚಾರದ ಹಿನ್ನೆಲೆಯಲ್ಲೂ, ಹೊಲೆಯರ ಸಂಸ್ಕೃತಿಯನ್ನು ದಕ್ಷಿಣಾಚಾರದ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಅಗತ್ಯವಾಗುತ್ತದೆ. ಈಗ ಉಳಿದು ಬಂದಿರುವ ಪರಂಪರೆಯಂತೆ, ಹೊಲೆ ಮಾದಿಗರಲ್ಲಿ, ಮಾದಿಗರು ಕೃಷಿ ಕುಟುಂಬಗಳಿಗೆ ಮತ್ತು ಭೂಮಿಗೆ ನೇರವಾಗಿ ಸಂಬಂಧಿಸಿದ್ದು ಹೊಲೆಯರು ಇತರ ವೃತ್ತಿಗಳಿಗೆ ಅಂಟಿದ್ದಾರೆ. ಆದರೆ ಇಡೀ ನಾಡಿನಾದ್ಯಂತ ಇದೇ ಕ್ರಮವಿಲ್ಲ. ಆದರೂ ಸ್ಥೂಲವಾದ ಈ ಪರಿಕಲ್ಪನೆಯ ಹಿನ್ನೆಲೆಯಲ್ಲಿ ನೋಡುವುದಾದರೆ, ಕೃಷಿ ಕ್ರಿಯೆಗಳ ಮತ್ತು ಭೂಮಿಗೆ ಸಂಬಂಧಿಸಿದ ಮಾದಿಗರು ಎಡಗೈ ಪಂಥದ ವಾಮಾಚಾರಿಗಳಾಗಿರುವದು ತರ್ಕಬದ್ಧವೇ ಆಗುತ್ತದೆ. ಭೂಮಿಯ ಸಮೃದ್ಧತೆಗೆ ಸಂಬಂಧಿಸಿ, ವಿವಿಧ ಆಚರಣೆಗಳು ಬರಿ ಪ್ರಾಥಮಿಕ ಸ್ಥಿತಿಯಲ್ಲಿ ಉಳಿಯದೆ, ಉನ್ನತ ಮಟ್ಟದ ತಾತ್ವಿಕ ಸಿದ್ಧಾಂತವಾಗಿ ಮಾದಿಗರಲ್ಲಿ ಬೆಳೆದಿದ್ದವು ಎನ್ನಲು ಯೋಗ ಶಾಕ್ತ ದರ್ಶನಗಳೆ ಸಾಕ್ಷಿಗಳಾಗಿವೆ. ಕನ್ನಡ ವಿಶ್ವಕೋಶ ಹೇಳುವ ಹಾಗೆ ದಕ್ಷಿಣಾಚಾರಿಗಳು ವೇದ ಮಾರ್ಗದಲ್ಲಿ ನಡೆದವರಲ್ಲ. ಇದು ನಂತರದ ತಂತ್ರದಲ್ಲಿ ವೈದಿಕಾಂಶಗಳ ಸೇರ್ಪಡೆಯ ಕಾರಣದಿಂದ ಹುಟ್ಟಿದ ವಿಚಾರವಾಗಿದೆ. ದೇವಿ ಪ್ರಸಾದ ಛಟ್ಟೋಪಾಧ್ಯಾಯರ ಪ್ರಕಾರ ವಾಮಾಚಾರಕ್ಕೆ 'ಎಡಗೈ ಮಾರ್ಗ' ಎಂದು ಹೇಳುವುದು ಸರಿಯಲ್ಲ. ವಾಮ ಎಂದರೆ ಮಹಿಳೆ ಅಥವಾ ಕಾಮ, ಆಚಾರವೆಂದರೆ ವಿಧಿಯಾಚರಣೆ; ಹಾಗಾಗಿ ವಾಮಾಚಾರವೆಂದರೆ ಕಾಮಕ್ಕೆ ಮತ್ತು ಮಹಿಳೆಗೆ ಸಂಬಂಧಿಸಿದ ಆಚರಣೆ. ಇವರ ಪ್ರಕಾರ ದಕ್ಷಿಣಾಚಾರ ನಂತರದಲ್ಲಿ ತಡವಾಗಿ ಕಂಡು ಹಿಡಿಯಲಾದ ಸಿದ್ಧಾಂತ. ಅದು ಕೃತಕವಾದ ಮತ್ತು ಹೊಂದಾಣಿಕೆಗೆ ಯತ್ನಿಸುವ ಸ್ವಭಾವದಿಂದ ಕೂಡಿದ್ದು[70] ಹುಟ್ಟುತ್ತಲೆ ದಕ್ಷಿಣಾಚಾರಿ, ಆದರೆ ದೀಕ್ಷೆ ಪಡೆದ ನಂತರದ ವಾಮಾಚಾರಿ ಎಂಬ ತತ್ತ್ವದ ಹಿನ್ನೆಲೆಯಲ್ಲಿ ನಿಜವಾದ ತಾಂತ್ರಿಕ ಪಂಥ ದೀಕ್ಷೆ ಪಡೆದ ನಂತರದ ವಾಮಾಚಾರವೇ ಆಗುತ್ತದೆ. ಏಕೆಂದರೆ ದೀಕ್ಷೆಯಿಲ್ಲದೆ ತಾಂತ್ರಿಕ ಪಂಥವೇ ಇಲ್ಲ. ಮಹಿಳೆಯರೇ ಕೃಷಿಯನ್ನು ಶೋಧಿಸಿದವರು; ಹಾಗಾಗಿ ಮಹಿಳೆಯರಿಂದ ಕಂಡು ಹಿಡಿಯಲ್ಪಟ್ಟ ಕೃಷಿ ಮಾಟದಿಂದ ಪ್ರಾಚೀನ ಧರ್ಮ ಉಗಮವಾಯಿತು. ನಂತರ ಪಿತೃ ಪ್ರಧಾನ ಪರಿಸ್ಥಿತಿಗೆ ಧರ್ಮವನ್ನು ಹೊಂದಿಸಬೇಕಾದಾಗ ಸ್ತ್ರೀ ಕ್ರಿಯೆಗಳು ಪುರುಷರಿಗೆ ವರ್ಗಾಯಿಸಲ್ಪಟ್ಟವು. ಆದರೆ ಪುರುಷ ಸ್ತ್ರೀಯಾದಾಗ ಮಾತ್ರ

ಪುರೋಹಿತಿಕೆ ಗಂಡಸರಿಗೆ ಸಾಧ್ಯವಾಯಿತು[71] ಎಂಬ ವಿಚಾರಕ್ಕೆ ಆಧಾರಗಳನ್ನು ನೀಡುತ್ತಾರೆ. ದೇ.ಪ್ರ.ಛ. ನಾವೀಗಾಗಲೇ ಅಮ್ಮನ ಪೂಜಾರಿ ಹೆಂಗಸು ವೇಷ ಧರಿಸುವ ಅಗತ್ಯದ ಸಂದರ್ಭಗಳನ್ನು ಸಾಕಷ್ಟು ನೋಡಿದ್ದೇವೆ. ಈ ವಿಷಯದಲ್ಲಿ ದಕ್ಷಿಣ ಭಾರತದಲ್ಲಿರುವಷ್ಟು ವ್ಯಾಪಕತೆ ಮತ್ತು ಸಾರ್ವತ್ರಿಕತೆ, ವೈವಿಧ್ಯತೆ ಉತ್ತರ ಭಾರತದಲ್ಲಿರಲಿಕ್ಕಿಲ್ಲ.

ತಂತ್ರಗಳ ಪ್ರಕಾರ ಹುಲಿಯ ರಕ್ತ ದೇವತೆಯನ್ನು 100 ವರ್ಷ, ಮಾನವನ ರಕ್ತ 1000 ವರ್ಷ ತೃಪ್ತಿಯಲ್ಲಿಡುವುದು. ದೇವತೆ ನೀರಡಿಸಿದರೆ ಭೂಮಿಗೆ ರೋಗಗಳನ್ನು ಕಳಿಸುವಳು. ಇದನ್ನರಿತು ಭಕ್ತರು ಆಕೆಗೆ ರಕ್ತದಿಂದ ದಾಹ ಹಿಂಗಿಸಲು ಯತ್ನಿಸುವರು. ಈ ಎಲ್ಲ ಮಾತುಗಳು ಊರಮ್ಮನ ಹಬ್ಬದ ಬಲಿಯ ಹಿನ್ನೆಲೆಯನ್ನು ಸಮರ್ಥಿಸುವಂತಿವೆ. “One should be a Kaula internally, a Shaiva externally and a Vaishnava while taking at public meetings” ಎಂಬ ಮಾತು ಸಮನ್ವಯವನ್ನು ಹೇಳುವುದಕ್ಕಿಂತ ವ್ಯವಹಾರಿಕ ನಡತೆಯನ್ನು ಸೂಚಿಸುವಂತೆ ತೋರುತ್ತದೆ. ತಂತ್ರ ಸಾಮಾನ್ಯವಾದ ತತ್ತ್ವ ಮತ್ತು ಆಚರಣೆಯಾಗಿಲ್ಲ. ಅದರಲ್ಲಿ ವಶೀಕರಣ, ಮಾರಣ, ಸ್ತಂಭನ, ವಿದ್ವೇಷಣ, ಮೋಹನ ವಿದ್ಯೆಗಳು ಸೇರಿವೆ. ತಂತ್ರದ ಪ್ರಭಾವ ದೇಗುಲ ಸ್ಥಾಪನೆ, ಪೂಜಾವಿಧಿ, ಮೊದಲಾದವುಗಳಲ್ಲಷ್ಟೆ ಅಲ್ಲ ಮದುವೆ, ಮುಂಜಿ ಊಟ, ಉಪಚಾರ, ಮನೆಯ ಮದ್ದು ನಂಬಿಕೆಗಳು, ಯಂತ್ರ, ಮಂತ್ರ, ಬೇಸಾಯವೆ ಮೊದಲಾದ ವೃತ್ತಿ ಕುಶಲಕರ್ಮಗಳಲ್ಲಿಯೂ ವ್ಯಾಪಿಸಿದೆ.[72]

ಋಗ್ವೇದದಲ್ಲಿ ತಂತ್ರದ ಅರ್ಥ, ಬೇಸಾಯಗಾರರು ನೇಗಿಲಿನಿಂದ ಭೂಮಿಯನ್ನು ಉತ್ತು ಬೆಳೆಯನ್ನು ತೆಗೆಯುವುದು, ನೇಕಾರರು ಮಗ್ಗದಿಂದ ಬಟ್ಟೆಯನ್ನು ಮಾಡುವುದು ಒಂದೆಡೆ ಇದ್ದುದನ್ನು ಹರಡುವುದು, ವಿವರಗಳನ್ನು ಒಟ್ಟುಗೂಡಿಸಿ, ಉಪಕರಣವೊಂದನ್ನು ಮಾಡಿಕೊಳ್ಳುವುದು, ಇನ್ನೂ ಇರದುದನ್ನು ಅಗ ಮಾಡಿಕೊಳ್ಳುವುದು, ಬದುಕಿಗೆ ನೆರವನ್ನು ಪಡೆದುಕೊಳ್ಳುವುದು[73] ಮೊದಲಾಗಿದೆ.

ಈ ವಿವರಗಳು ಅಮೂಲ್ಯವಾಗಿವೆ. ತಂತ್ರ ಎಂಬ ಸಿದ್ಧಾಂತ ಭೌತಿಕವಾಗಿತ್ತು. ಮತ್ತು ಜೀವನೋಪಯೋಗಿಯಾದ ಪ್ರತಿಯೊಂದು ಕರ್ಮವನ್ನು ಆದು ಒಳಗೊಂಡು ತಾತ್ವೀಕರಿಸಲ್ಪಟ್ಟಿತ್ತು. ತಮಿಳುನಾಡಿನ ಪರೈಯನ್‌ರಲ್ಲಿ ಅಷ್ಟೆ ಏಕೆ ದಕ್ಷಿಣ ಭಾರತದ ಎಲ್ಲ ಹೊಲೆ ಮಾದಿಗರೂ ಕೃಷಿ ಮತ್ತು ನೇಕಾರಿಕೆ ಮೊದಲಾದ ಕೆಲಸಗಳನ್ನು ಮಾಡುತ್ತಿದ್ದವರು ಎಂದು ಈ ಹಿಂದೆ ನೋಡಿದ್ದೇವೆ. ಋಗ್ವೇದ ಹೇಳುವ ಜನಾಂಗ ಇವರೇ ಎಂದು ಊಹಿಸಬಹುದು. ಈ ಪರಂಪ ರಯ ಪರಿಷ್ಕೃತ ವಾದವೇ 12 ಶತಮಾನದ ಶರಣರಲ್ಲಿ 'ಕಾಯಕವೆ ಕೈಲಾಸ' ಎಂದಾಯಿತು.

'ಪೂಜೆ' ಎಂಬುದು ದ್ರಾವಿಡ ಪದವೆಂದು ವಿದ್ವಾಂಸರ ವಾದವಷ್ಟೆ. ಹೂವನ್ನು ಅಥವಾ ಹೂವಿಂದ ಮಾಡುವುದು ಎಂದರೇನು? ಹೆಣ್ಣಿನ ಗುಪ್ತಾಂಗಕ್ಕೆ 'ಹೂ' ಎಂದು ಕಲ್ಪಿಸಿದ್ದು ತಂತ್ರ. ಹೂವಿನ ಸೃಷ್ಟಿ ಕ್ರಿಯೆಯ ಕೆಲಸವನ್ನೆ ಯೋನಿಯೂ ಮಾಡುತ್ತದೆ. ಈ ಅರ್ಥದಲ್ಲಿ ಪೂಜೆ ಎಂದರೆ ಯೋನಿಯನ್ನು ಮಾಡುವುದು. ಇದನ್ನು ಮಾಡುವವರು ತಾಂತ್ರಿಕರಾದ ಹೊಲೆ-ಮಾದಿಗರು; ತಾಂತ್ರಿಕ ಪಂಥದಿಂದ ಪೂಜೆ ವೈದಿಕಾದಿ ಪಂಥಗಳನ್ನು ಪ್ರವೇಶಿಸಿತು.

ಭೌತಿಕ ಜೀವನದ ತಾಂತ್ರಿಕ ಪರಿಕ್ರಮಗಳೂ, ತಾತ್ವಿಕ ಮತ್ತು ಮತೀಯವಾಗಿ ಮಾರ್ಪಟ್ಟು ಹುಟ್ಟಿಸಿದ ಭೌತಿಕ ಜೀವನ ಬದಲಾದರೂ ಹೆಚ್ಚು ಕಾಲ ಬಾಳುತ್ತದೆ.

"ತಂತ್ರವೆಂದರೆ ಜನರಲ್ಲಿ ಹರಡಿಕೊಂಡದ್ದು; ಆದರೆ, ವೇದ ಋಷಿಗಳ ಕಾಣಿಕೆ."[74] ದ್ರಾವಿಡರಲ್ಲಿ ತಾತ್ವಿಕ ಮತ್ತು ಪ್ರಾಯೋಗಿಕ ಪರಂಪರೆ ಜನ ಮುಖಿಯಾಗಿ ಜನರ ಮಧ್ಯೆ ವ್ಯಾಪಕವಾದ ಪ್ರಮಾಣದಲ್ಲಿ ಹುಟ್ಟಿ ಬೆಳೆಯಿತು ಎಂದೂ, ವೇದಗಳು ವೈದಿಕರಲ್ಲಿ ಒಂದು ನಿರ್ದಿಷ್ಟ ವರ್ಗವಾದ ಋಷಿ ಕಾಣ್ಕೆ ಎಂದೂ ಅರ್ಥವಾಗುತ್ತದೆ. ತಂತ್ರದಲ್ಲಿ ಕ್ರಿಯಾ ತಂತ್ರ, ಯೋಗ ತಂತ್ರ ಎಂಬೆರಡು ಭಾಗಮಾಡಿ ಕ್ರಿಯಾ ತಂತ್ರದಲ್ಲಿ ಷಟ್ಕರ್ಮ (ವಶೀಕರಣಾದಿ) ದೂತೀಕರಣ (ಪಂಚ'ಮ'ಕಾರ ಸಾಧನೆ) ಶವಸಾಧನ (ನಡುರಾತ್ರಿ, ಸುಡುಗಾಡಲ್ಲಿ ಹೆಣದ ಮೇಲೆ ಕೂತು ಮಾಡುವ ಸಾಧನೆ) ಕುಮಾರೀ ಪೂಜೆ (ಹರೆಯದ ಹೆಣ್ಣನ್ನು ಬತ್ತಲೆ ಪೂಜುವುದು) ಚಕ್ರ ಪೂಜೆ (ಹೆಣ್ಣು ಗಂಡು ಕತ್ತಲಲ್ಲಿ ಕೂಡುವ ವಿಧಿ) ಶ್ಯೇನಯಾಗ (ಅಭಿಚಾರ) ಸೇರಿವೆ. ಇದೆಲ್ಲ ವಾಮಭಾಗ.

ಯೋಗ ತಂತ್ರಗಳಲ್ಲಿ ಕುಂಡಲಿನಿ ವಿದ್ಯೆ ದೀಕ್ಷೆ, ಗುರುಚರ್ಯ ಮೊದಲಾದವು ಸೇರಿದ್ದು ವೈದಿಕರ ಮೇಲೆ ಪ್ರಭಾವ ಬೀರಿದವು.[75]

ಹೊಲೆ ಮಾದಿಗರಿಗೆ ಸಂಬಂಧಿಸಿ ಸಾಮಾನ್ಯವಾಗಿ ಬಳಸಲಾಗುವ ಎಡಗೈ-ಬಲಗೈ ವಿಭಾಗಗಳು, ಆನೇಕ ಜಾತಿಗಳಿಗೂ ಸಂಬಂಧಿಸಿದ್ದು, ಊಳಿಗಮಾನ್ಯ ಕಾಲದಲ್ಲಿ ಬಲಯುತವಾದ ನ್ಯಾಯಿಕ ಸಂಸ್ಥೆಗಳ ರೂಪದಲ್ಲಿದ್ದವು. ಶೋಷಕ ವ್ಯವಸ್ಥೆ ಎಡಗೈ, ಬಲಗೈ ವಿಜಾತಿ ವಿಭಾಗಗಳನ್ನು ತನ್ನ ಸ್ವಾರ್ಥ ಸುಲಿಗೆಗೆ ಬಹಳ ಚನ್ನಾಗಿ ಬಳಸಿಕೊಂಡಿತು. ಅದು ಜಾತಿಗಳನ್ನು ಈ ಎರಡು ಗುಂಪುಗಳಲ್ಲಿ ಕ್ರೋಡಿಕರಿಸಿ ಒಂದು ನಿರ್ದಿಷ್ಟ ಮಧ್ಯಮ ಜಾತಿಯನ್ನು ನೇತಾರನನ್ನಾಗಿ ಮಾಡಿತು. ಈ ವಿಭಾಗಗಳು ಹೇಗೆ ಹುಟ್ಟಿದುವೆಂಬುದಕ್ಕೆ ಜನಪದರು ಹೇಳುವ ಕಥೆಗಳನ್ನು ಥರ್‌ಸ್ಟನ್ ಸಂಗ್ರಹಿಸಿದ್ದಾರೆ. ಇದೂ ಸಹ ಎಡಗೈ-ಬಲಗೈಗಳಿಗೆ ದಲಿತರೇ ಮೂಲ ಎಂಬುದನ್ನು ಸಾಬೀತುಪಡಿಸುತ್ತದೆ. ಆದಿಕಾಲದಲ್ಲಿ ಶಿವನು ಜಾಂಬವ ಋಷಿಗೆ ಆಸ್ಥಾನಕ್ಕೆ ತಡವಾಗಿ ಬಂದ ಕಾರಣ ಕೇಳುವನು. ಮಕ್ಕಳ ಕಾಟದಿಂದ ತಡವಾಯಿತೆಂದು ಹೇಳಿದ ಋಷಿಗೆ ಶಿವ ಕರುಣಿಸಿ ಕಾಮಧೇನುವನ್ನು ಕೊಡುವನು. ಜಾಂಬವ ಇಲ್ಲದಾಗ ಸಾಂಖ್ಯನೆಂಬ ಋಷಿ ಜಾಂಬವನ ಮನೆಗೆ ಬರುವನು. ಜಾಂಬವನ ಮಗ ಯುಗಮುನಿ ಸಾಂಖ್ಯನನ್ನು ಗೌರವಿಸುವನು. ಕಾಮಧೇನುವಿನ ಹಾಲು ರುಚಿ ನೋಡಿದ ಸಾಂಖ್ಯ ಯುಗಮುನಿಗೆ ಅದರ ಮಾಂಸವನ್ನು ಅಡಿಗೆ ಮಾಡಲು ಕೇಳುವನು. ಯುಗಮುನಿ ನಿರಾಕರಿಸಿದಾಗ ಸಾಂಖ್ಯನೆ ಕಾಮಧೇನುವನ್ನು ಕೊಂದು ಮಾಂಸದಡಿಗೆ ಮಾಡುವನು. ಜಾಂಬವ ತನ್ನ ಮನೆಗೆ ತಿರುಗಿ ಬಂದಾಗ ಮಾಂಸದ ಊಟ ಮಾಡುತ್ತಿರುವುದನ್ನು ನೋಡಿ, ಸಾಂಖ್ಯ, ಯುಗಮುನಿಗಳನ್ನು ಶಿವನ ಆಸ್ಥಾನಕ್ಕೆ ನ್ಯಾಯ ನಿರ್ಣಯಕ್ಕೆ ಕರೆತರುವನು. ಬಾಗಿಲ ಹತ್ತಿರವೆ ಎಡಗಡೆ ಯುಗಮುನಿ, ಬಲಗಡೆ ಸಾಂಖ್ಯ ಋಷಿ ನಿಲ್ಲುವರು. ಈಶ್ವರ ಇವರಿಗೆ ಚಾಂಡಾಲರಾಗಿರೆಂದು ಶಪಿಸುತ್ತಾನೆ. ಹಾಗಾಗಿ ಬಲಗಡೆಯ ಸಾಂಖ್ಯನಿಂದ ಹೊಲೆಯರು; ಯುಗಮುನಿ ಮತ್ತು ಅವನ ಹೆಂಡತಿ ಮಾತಂಗಿಯಿಂದ ಎಡಗೈ ಮಾದಿಗರು ಜನಿಸಿದರು. ಎಡಗೈನವರು ಜನಕ್ಕೆ ಚರ್ಮದ

ಪಾದರಕ್ಷೆ ಮಾಡಿಕೊಡುವ ಮೂಲಕ ತಮ್ಮ ಶಾಪ ವಿಮೋಚನೆಗೆ ಯತ್ನಿಸಿದರು.

ಬಹಳ ಮಹತ್ವದ್ದೆಂದು ಕಾಣುವ ಈ ಕಥೆಯಲ್ಲಿ ಸಾಂಖ್ಯಯೋಗ (ಯುಗ ಮುನಿ) ಗಳನ್ನು ವ್ಯಕ್ತಿಗಳೆಂದು ಪರಿಭಾವಿಸಲಾಗಿದೆ. ವಚನ ಸಾಹಿತ್ಯವೂ 'ಸಾಂಖ್ಯ'ನನ್ನು ವ್ಯಕ್ತಿಯನ್ನಾಗಿ ಪರಿಭಾವಿಸುತ್ತದೆ. ಮಾದಾರ ಚನ್ನಯ್ಯನ ಒಂದು ವಚನ 'ಸಾಂಖ್ಯ ಸ್ವಪಚ' ಎನ್ನುತ್ತದೆ.[76] ಕರ್ನಾಟಕದಲ್ಲಿ ದಲಿತರಿಗೆ 'ಜಾಂಬವ ಕುಲ'ದವರೆಂಬ ಹೇಳಿಕೆಯಿರುವುದನ್ನು ಹಿಂದೆಯೇ ನೋಡಿದ್ದೇವೆ. ಕಥೆ ದ್ರಾವಿಡರ ಶಿವನಿಂದಲೇ ಸಾಂಖ್ಯ ಮತ್ತು ಯುಗಮುನಿಗಳಿಗೆ ಶಾಪ ಕೊಡಿಸುತ್ತದೆ. ದ್ರೌಪದಿ ಪಂಥದಲ್ಲಿ ಪ್ರಧಾನ ಪಾತ್ರ ವಹಿಸುವ ತಮಿಳುನಾಡಿನ ವಣ್ಣಿಯರ್ ಕುಲದವರು ಶಂಭು ಎಂಬ ಋಷಿಯ ಯಜ್ಞದ ಅಗ್ನಿಯಲ್ಲಿ ಜನಿಸಿದವರು ಎಂಬ ಕಥೆ ಬರುತ್ತದೆ. ಶಂಭುವಿಗೆ ಚಂಪುವ, ಚಂಪುಹ, ಜಾಂಬವ ಎಂಬ ಹೆಸರುಗಳೂ ಇವೆ.[77] ಇಲ್ಲಿ ಶಿವನಿಗೆ ಜಾಂಬವ ಎಂದು ಕರೆದಿರುವುದು ಸ್ಪಷ್ಟವಿದೆ. ಮೊದಲು ಸಾಂಖ್ಯ, ಯೋಗಗಳಿಗೆ ಸಂಬಂಧಿಸಿ, ದೇ.ಪ್ರ.ಛ. ರ ವಿಚಾರಗಳನ್ನು ನೋಡುವಾ.

ಮಹಾಭಾರತದ ಆಧಾರದಿಂದ ಹೇಳುವುದಾದರೆ ಸಾಂಖ್ಯದ ಮೂಲಕರ್ತೃ 'ಕಪಿಲಾ' ಎಂಬ ಮಹಿಳೆಯಿರಬೇಕು. ಮಹಿಳಾ ಗುರುವರ್ಗದಿಂದ ಸಾಂಖ್ಯ ತತ್ತ್ವಜ್ಞಾನದ ಮೊದಲ ಪ್ರತಿಪಾದಕರು ಜನಿಸಿದರು.[78] ಅಸುರಿದು ಹೆಂಡತಿ ಕಪಿಲಾ, ಈಕೆಯ ಶಿಷ್ಯ ಪಂಚ ಶಿಖಾ. ಇವರೇ ಸಾಂಖ್ಯ ಸಿದ್ಧಾಂತದ ಸೃಷ್ಟಿಕರ್ತರು.[79]

ರಾಸನ್ ಬರೆಯುತ್ತಾರೆ "It is probable that in ancient times the special potency of Tantra was transmitted along a female tine of power-holders by ritual intercourse with them the initiation was diffused." ಇವರ ವ್ರಾತ್ಯ ಹೆಂಗಸರಿರಬೇಕೆಂದು ಹಲವರ ಅಭಿಮತ. ಆದಿಮ ಶಿಲಾಯುಗದ ಜನತೆಯ ಪಂಥವು ಇದಾಗಿರಬೇಕು.[80] ಈಗಲೂ ಇಂಥ ಹೆಂಗಸರು ಕೆಳಜಾತಿಯವರೇ ಆಗಿರಬೇಕಿತ್ತು.[81]

ಲಕ್ಷ್ಮಿಯ ಅಕ್ಕನಾದ ಜೇಷ್ಠಾ ಲಕ್ಷ್ಮಿ (ಅಲಕ್ಷ್ಮಿ) ಅಮೃತಕ್ಕಾಗಿ ದೇವಾಸುರರು ಹಾಲ್ಗಡಲನ್ನು ಕಡೆದಾಗ ಹುಟ್ಟಿದಳು. ಇವಳನ್ನು ಯಾರೂ ಮದುವೆ ಆಗಲು ಒಪ್ಪದಾಗ, ಕಪಿಲನೆಂಬ ಋಷಿ ಕೈಹಿಡಿದ. ಅಮಂಗಳ ಕೃತ್ಯ, ಜಗಳ, ಅವೈದಿಕ ದೇವತಾ ಪೂಜೆ, ಶಿವ, ವಿಷ್ಣು ಭೇದ ಎಣಿಸುವ ಸ್ಥಳದಲ್ಲಿ ಈಕೆ ಇರುತ್ತಾಳೆ.[82] ಕುತ್ಸಿತಳು, ವಿಕಾರರೂಪಿ, ವಿಕೃತಾಂಗಳಾದ ಈಕೆಯನ್ನು ಕಪಿಲ ಏಕೆ ಮದುವೆಯಾದ? ಈ ಅಲಕ್ಷ್ಮಿ ಶ್ರೀಧರಮೂರ್ತಿಯವರ ಪ್ರಕಾರ ಕನ್ನಡದಲ್ಲಿ ದೊಡ್ಡಮ್ಮ ತೆಲುಗಿನಲ್ಲಿ ಪದ್ದಮ್ಮ.[83] ಜೋಕುಮಾರನ ತಾಯಿ ಜೇಷ್ಠಾ ಗೌರಿ ಎಂದು ಬರುತ್ತದೆ. ಇವರೀರ್ವರ ನಡುವಿನ ಹೋಲಿಕೆ ಏನನ್ನು ಸೂಚಿಸುತ್ತದೆ?

ಕರ್ನಾಟಕ, ಮಹಾರಾಷ್ಟ್ರ, ಆಂಧ್ರಗಳಲ್ಲಿ ಪ್ರಖ್ಯಾತವಾಗಿರುವ ವಲಸೆಗಾರ ಪಶುಪಾಲಕ ಕುರುಬರ ಮೈಲಾರ (ಖಂಡೋಬಾ) ಪಂಥದಲ್ಲಿ ಒಡೆಯರ ಸ್ಥಾನ-ಮಾನ ವಿಶೇಷವಾದುದು. ಅವರ ಬಿರುದಾವಳಿಯಲ್ಲಿ ಅವರು "ಶ್ರೀ ಮನ್ಮಹಾಕಪಿಲಮುನಿ ಕಲಿ

ಮೈಲಾರ ಸಿಂಹಾಸನಕ್ಕಧಿಪತಿಗಳು" ಎಂದು ಬರುತ್ತದೆ. ಇವರ ಮೂಲನೆಲೆ ಆಂಧ್ರ, ಕರ್ನಾಟಕದ ಗಡಿಯಲ್ಲಿರುವ ಮೀನುಗೊಂದಿ. "ಮೀನ ಗೊಂದಿಯ ಗವಿಯಲ್ಲಿ ತಪಸ್ಸು ಮಾಡುತ್ತಿದ್ದ ಕಪಿಲ ಮುನಿಗೆ ಶಿವನು ಕನಸಿನಲ್ಲಿ ಬಂದು ತುಂಗಭದ್ರಾ ತೀರದ ಹಿರೇಮೈಲಾರದಲ್ಲಿರುವ ಕರಿಯಾಲದ ಬುಡದಲ್ಲಿ ತಾನು ಲಿಂಗರೂಪದಲ್ಲಿ ಉದ್ಭವಿಸಿರುವಂತೆಯೂ (ಕಪಿಲ) ಮುನಿ ಅಲ್ಲಿಗೆ ಹೋಗಿ ಪೂಜಿಸಿಕೊಂಡಿರಬೇಕೆಂತಲೂ ಅಜ್ಞೆ ಮಾಡಿದನಂತೆ, ಅದೇ ರೀತಿ ಕಪಿಲಮುನಿ ಹಿರೇಮೈಲಾರಕ್ಕೆ ಬಂದು ಆಲದ ಮರದಡಿಯ ಹುತ್ತದಲ್ಲಿ ಅಡಗಿದ್ದ ಶಿವಲಿಂಗವನ್ನು ಹೊರತೆಗೆದು ಪೂಜೆ ಮಾಡಿದನಂತೆ. ಅವನ ತರುವಾಯ ಅವನ ತಮ್ಮ ಗೋಮುನಿ ಮತ್ತು ಅವರ ಸಂತತಿಯವರು ಹಿರೇಮೈಲಾರ ದೇವರಗುಡ್ಡಗಳಲ್ಲಿ ನೆಲೆನಿಂತು ದೇವಾಲಯಗಳಲ್ಲಿ ಪೂಜಾದಿ ವ್ಯವಸ್ಥೆ ಮಾಡುತ್ತ ಬಂದರಂತೆ.

"ಮೀನಗೊಂದಿ ಬೆಟ್ಟದಲ್ಲಿ ಒಂದು ದೇವಾಲಯವಿದ್ದು ಅದರ ಸಮೀಪದ ಬಲ್ಲರಿನಲ್ಲಿ ಈಗಲೂ ಇವರ ವಂಶಸ್ಥರಿದ್ದಾರೆ. ಇವರನ್ನು ಕುರಿತು ಥರ್‌ಸ್ಟನ್ ಮೊದಲಾದ ಸಮಾಜ ಶಾಸ್ತ್ರಜ್ಞರು ಯಾವುದೇ ತಿಳುವಳಿಕೆ ನೀಡುವುದಿಲ್ಲ. ಇವರು ಕರ್ನಾಟಕದಲ್ಲಿ 'ಅರಸು' ಎನ್ನುವ ಜಾತಿಯವರ ಜತೆ ಮತ್ತು ಆಂಧ್ರದ ಗಡಿಯಲ್ಲಿ 'ರಾಜು' ಜಾತಿಯವರ ಜತೆ ರಕ್ತಸಂಬಂಧವನ್ನು ಬೆಳೆಸಿದ್ದಾರೆ.

ತಮ್ಮದು ಸಿದ್ಧರ ಮನೆತನವೆಂದು ಇವರು ಹೇಳಿಕೊಳ್ಳುತ್ತಾರೆ. ಮೊದಮೊದಲು ಇವರು ಹೆಣ್ಣು ತಂದುಕೊಳ್ಳುವಾಗ ಈಗಿನಂತೆ ಜಾತಿ ನಿರ್ಬಂಧವನ್ನು ಅಷ್ಟಾಗಿ ಪಾಲಿಸುತ್ತಿರಲಿಲ್ಲವೆಂದು ತಿಳಿದುಬರುತ್ತದೆ.

"ಕುರುಬ, ಲಿಂಗಾಯತ ಮುಂತಾದ ಜಾತಿ ವರ್ಗಗಳಲ್ಲಿರುವ ಒಡೆಯರಿಗೂ ಇವರಿಗೂ ಹಲವಾರು ರೀತಿಯ ವ್ಯತ್ಯಾಸಗಳಿವೆ."[84] ಇವರು ಕ್ಷತ್ರಿಯರು, ಜನಿವಾರ ಧಾರಿಗಳು. ಹೆಣ ಸುಡುವ ಪದ್ಧತಿ ಅನುಸರಿಸುವವರು. ಭಂಡಾರ, ವಿಭೂತಿ, ರುದ್ರಾಕ್ಷಿ ಬಳಕೆ ಪೇಟಾ ಕೊಡೆ, ಆಪ್ತಾಗಿರಿ, ಚವುರಿ ಸೇವೆ; ನಡೆಮುಡಿ ಕಿಂಚಾವೀರರ ಖಡ್ಗ ಮರ್ಯಾದೆ, ಕಾರ್ಣಿಕೋತ್ಸವದಲ್ಲಿ ಅಶ್ವಾರೋಹಿಯಾಗಿ ಡೆಂಕಣಮರಡಿಗೆ ಹೋಗುವುದು, ಛಟ್ಟಿ ಮೊದಲಾದ ಸಂದರ್ಭಗಳಲ್ಲಿ ಕಪಿಲಮುನಿ ಸಿಂಹಾಸನ ಏರುವುದು. ಹೆಣ್ಣು ಗಂಡು ಭೇದವೆಣಿಸದೆ, ಜಾತಿ ಭೇದವಿಲ್ಲದೆ ಹೊರೆ ಹೊರಿಸುವುದು ಇವರ ಕೆಲಸ.[85] ಆದಿಹೊನ್ನಮ್ಮ ಇವರ ಕುಲದೇವತೆ. ಎಲ್ಲಮ್ಮ ಇವರ ಮನೆತನದವಳು. ಶಾಖಾಹಾರಿಗಳು, ಆಕಳು ಕುದುರೆ ನಾಯಿ ಸಾಕುವರು. ಬೇರೆ ದೇವರುಗಳನ್ನು ಪೂಜದ ಇವರು ಬೇರೆ ಸ್ವಾಮಿಗಳಿಗೂ ಬಾಗರು. ಭಂಡಾರವಿರುವಲ್ಲೆಲ್ಲ ಇವರು ಗುರುಗಳು. ಭಂಡಾರ ಹುಟ್ಟಿದ್ದು ಇವರಿಂದಲೇ ಎಂಬ ನಂಬಿಕೆ ಇದೆ. ಕಪಲಾಪುರ, ಕಪಲಪ್ಪನ ಗವಿ ಬೀಳಗಿ ಹತ್ತಿರ ಇದೆ.[86] ಕಪಿಲೇಶ್ವರ ದೇಗುಲಗಳು ನಮ್ಮಲ್ಲಿವೆ. ಕಪಿಲ ತೀರ್ಥಗಳಿವೆ. ಜೇಷ್ಠಾದೇವಿ ಎಂಬ ಅಲಕ್ಷ್ಮಿ ಕ್ಷೀರಸಾಗರದಲ್ಲಿ ಹುಟ್ಟಿದವಳು ಕಪಿಲಮುನಿಯ ಪತ್ನಿ ಎಂದು ಲಿಂಗ ಪುರಾಣದ ಹೇಳಿಕೆ. ಸಾಂಖ್ಯ ದರ್ಶನಕಾರ ಕಪಿಲ. "ಪ್ರಸ್ತುತ ಕಪಿಲ ಮುನಿಯನ್ನು ಮೇಲೆ ಹೇಳಿದ ಯಾವ ಸಂಪ್ರದಾಯದ ಜತೆಗೆ ಜೋಡಿಸುವುದೂ ಈಗ ಸಾಧ್ಯವಿಲ್ಲ" ಎನ್ನುತ್ತಾರೆ[87] ಡಾ. ಎಂ. ಬಿ.

ನೇಗಿನಹಾಳ. ಆದರೆ ಈ ಅಭಿಪ್ರಾಯ ತಪ್ಪು. ಸಾಂಖ್ಯ ಸಿದ್ಧಾಂತದ ಕರ್ತೃ, ಜಾತಿಯನ್ನು ಒಪ್ಪದ ಸಿದ್ಧ ಪರಂಪರೆಯ ಕುರುಬರ ಒಡೆಯರೇ ಅಂದರೆ ಕಪಿಲರೇ ಆಗಿದ್ದಾರೆ. ವೈದಿಕ ಸಂಸ್ಕೃತಿಯ ಕಲಬೆರಕೆ ಇವರ ಪರಂಪರೆಯಲ್ಲಾಗಿರುವುದು ಸ್ಪಷ್ಟವಿದೆ. ಆದರೆ ದ್ರಾವಿಡ ಪರಂಪರಯಲ್ಲಿ ಇವರು ಪಶುಪಾಲಕ ವಲಸೆಗಾರ ಕುರುಬರೆ ಆಗಿದ್ದಾರೆ. ಮೇಲಿನ ವಿವರಗಳನ್ನು ಗಮನಿಸಿದರೆ ಇವರು ಬೇರೆಯಲ್ಲ ಮೈಲಾರಲಿಂಗ ಬೇರೆಯಲ್ಲ ಎಂಬುದು ಖಚಿತವಾಗುತ್ತದೆ. ಕುರುಬರ ಮಧ್ಯದಿಂದ ಮೇಲೆದ್ದು ಬಂದ ಸಾಂಖ್ಯ ಸಿದ್ಧಾಂತಿಗಳಾದ 'ಒಡೆಯರು' ದ್ರಾವಿಡ ಸಂಸ್ಕೃತಿಯ ಮುಖ್ಯ ಭಾಗವಾಗುತ್ತಾರೆ. ಕನ್ನಡ ನಾಡಿನಲ್ಲಿ ವರ್ಗ ಸಮಾಜದ ಪ್ರಾದುರ್ಭಾವಕ್ಕೆ ಇವರ ಕಾಣಿಕೆ ವಿಶೇಷವಾದುದು. ಬಹುಶಃ ಇವರೇ ಕೋಟೆ, ರಾಜಶಾಹಿಯ ಮೂಲ ಕ್ರಮಗಳನ್ನು ತಂದವರು. ಸ್ಥಳೀಯ 'ಅಸುರ'ರಾಗಿದ್ದ ಹೊಲೆ-ಮಾದಿಗ ಕೃಷಿಕರನ್ನು ಸೋಲಿಸಿ, ಅವರನ್ನು ಭಕ್ತರನ್ನಾಗಿ ಮಾಡಿಕೊಂಡು ಸ್ವತಃ ತಾವೇ ಕೃಷಿಕರಾಗಿ ನೆಲೆಯೂರಿದರು. ಜೋಕುಮಾರನ ತಾಯಿ ಜೇಷ್ಠಾದೇವಿಯಾದರೆ, ಕಪಿಲ ತಂದೆಯಾಗುತ್ತಾನೆ. ಲಿಂಗ ಪುರಾಣದ ಪ್ರಕಾರ ಯೋಗಕುಮಾರ, ಸಾಂಖ್ಯ ಸಿದ್ಧಾಂತದ ಜತೆಗಿರುವ 'ಯೋಗ' ಸಿದ್ಧಾಂತದ ಪುರಸ್ಕರ್ತನಾಗಿರುವ ಸಾಧ್ಯತೆ ಇದೆ.

ಆಂಧ್ರದ ಮತ್ತು ಪೂರ್ವಘಟ್ಟಗಳಲ್ಲಿರುವ ಅರಿಶಿಣವನ್ನು ಪ್ರಧಾನವಾಗಿ ಬೆಳೆಯುವ 'ಗೊಂಡ'ರಿಗೂ ಈ ಕುರುಬರಿಗೂ ಸಂಬಂಧವಿದೆ. ಏಕೆಂದರೆ ಇವರೆಲ್ಲ ಪಶುಪಾಲಕ ವಲಸೆಗಾರ ದ್ರಾವಿಡರೇ.

ಆದರೆ ಥರ್‌ಸ್ಟನ್‌ರು ಉಲ್ಲೇಖಿಸಿದ ಕಥೆಯಲ್ಲಿ ಸಾಂಖ್ಯ ಹೊಲೆಯ ಎಂಬ ಮಾತಿದೆ. ಮೈಲಾರ ಪರಂಪರೆಯಲ್ಲಿರುವ ಕಂಚಾವೀರರಿಗೂ ಈ ಹೊಲೆಯರಿಗೂ ಸಂಬಂಧವಿರಬಹುದೆ? ಹೊಲೆ ಮಾದಿಗರು ಮತ್ತು ಕುರುಬರ ಕೊಡುಕೊಳೆಯ ಸಂಬಂಧದಿಂದಾಗಿ ಇಂಥ ಕತೆ ಹುಟ್ಟಿರುವ ಸಾಧ್ಯತೆ ಹೆಚ್ಚಿದೆ. ದೇವಿಪ್ರಸಾದರು ಹೇಳುವಂತೆ ಸಾಂಖ್ಯ ಲೋಕಾಯತಕ್ಕಿಂತ ಅರ್ವಾಚೀನ ಎಂಬ ಮಾತು ಇದನ್ನು ಸಮರ್ಥಿಸುತ್ತದೆ.

ಸಾಂಖ್ಯ ತತ್ವ ಸಿದ್ಧಾಂತ, ಲೋಕಾಯತಕ್ಕಿಂತ ಅರ್ವಾಚೀನವಾದುದು. ಪುರಾತನ ಭೌತವಾದಿ ಸಿದ್ಧಾಂತವಾದ ತಾಂತ್ರಿಕ ಪಂಥದಿಂದ, ಪ್ರಜ್ಞಾಪೂರ್ವಕ ತತ್ವಶಾಸ್ತ್ರೀಯ ಸಿದ್ಧಾಂತವಾಗಿ ಸಾಂಖ್ಯ ಬೆಳೆಯಿತು. ಇದು ಮೊದಲು ಉಪನಿಷತ್ತಿನ ಆಧ್ಯಾತ್ಮವಾದವನ್ನು ವಿರೋಧಿಸುವ ತಿರುಳುಳ್ಳದ್ದು. ನಂತರ ಸಾಂಖ್ಯವನ್ನು ವೇದಾಂತವಾಗಿ ತಿರುಚಲಾಯಿತು. ಪ್ರಾಚೀನ ಸಾಂಖ್ಯ ವಿಜ್ಞಾನಕ್ಕೆ ಮೂಲಭೂತವಾದ ವಿಚಾರಗಳನ್ನು ದಯಪಾಲಿಸಿತು.[88] ಇದು ಪ್ರಕೃತಿಯೆ ಮೂಲವಸ್ತು, ಅದೇ ಪ್ರಧಾನ, ಅದರಿಂದ ಜಗತ್ತಿನ ಸೃಷ್ಟಿ, ಬ್ರಹ್ಮ ಇದಾವುದಕ್ಕೂ ಕಾರಣನಲ್ಲ ಎಂಬ ಭೌತಿಕವಾದಿ ಸಿದ್ಧಾಂತವಾಗಿದೆ.[89] ಭೌತವಸ್ತುವಿನ ಸಿದ್ಧಾಂತ, ಕಾರಣ ಸಿದ್ಧಾಂತ, ಜ್ಞಾನ ಸಿದ್ಧಾಂತ, ಉತ್ಕ್ರಾಂತಿ ಪ್ರಕ್ರಿಯಾ ಸಿದ್ಧಾಂತಗಳನ್ನು ಇದು ಪ್ರತಿಪಾದಿಸಿತು.[90] ಇತರ ತಾಂತ್ರಿಕ ಪಂಥಗಳಿಗಿಂತ ಸಾಂಖ್ಯತತ್ವ ವೈದಿಕರ ಪರಿಷ್ಕರಣಕ್ಕೆ ಹೆಚ್ಚು ಒಳಗಾಗಿ ವೈದಿಕವೇ ಆಗಿ ಹೋಯಿತು. ಹಾಗಾಗಿ ಇದಕ್ಕೆ 'ದಕ್ಷಿಣ' ಪಂಥವೆಂದು ಇಲ್ಲಿ ಹೇಳಿರುವುದು ಸಹಜವಾಗಿದೆ. ಆದರೆ ಸಾಂಖ್ಯನೇ ಕಾಮಧೇನುವನ್ನು ಕೊಂದವನೆಂದು ಕಥೆ ಹೇಳಿದೆ. ಇಲ್ಲಿ ಕಾಮಧೇನು-ವೈದಿಕ ಸಂಸ್ಕೃತಿಯನ್ನೂ ಪ್ರತಿನಿಧಿಸುತ್ತದೆ. ಆಕಳನ್ನು

ದ್ರಾವಿಡರಿಗಿಂತ ವೈದಿಕರೇ ಅತ್ಯಂತ ಉನ್ನತ ಮಟ್ಟದಲ್ಲಿ ದೈವೀಕರಿಸಿದರಲ್ಲವೆ? ಪ್ರಾಚೀನ ಸಾಂಖ್ಯ ವೈದಿಕ ಸಿದ್ಧಾಂತವನ್ನು ವಿರೋಧಿಸಿದರೂ ನಂತರ ವೈದಿಕರ ಜತೆ ಸೇರಿಹೋಯಿತು. ಈ ಕಥೆ ಯುಗಮುನಿಯ ಪತ್ನಿ ಮಾತಂಗಿ ಎನ್ನುತ್ತದೆ. ಯುಗಮುನಿ ಕಾಲ್ಪನಿಕ ಹೆಸರಿನಂತಿದೆ. ಇದು ಯೋಗಮುನಿ ಎಂದಿದ್ದಿರಬೇಕು. ಯೋಗ ಸಿದ್ಧಾಂತವೂ ಸಾಂಖ್ಯದ ಮೂಲಭೂತ ತತ್ವಗಳ ಆಧಾರದಲ್ಲಿ ದ್ರಾವಿಡರಲ್ಲಿ ಹುಟ್ಟಿದ ಕವಲು. ಆದಿಮ ಮಾಟದ ಆಚರಣೆಗಳಿಂದ ತಪಿಸ್ಸಿನಿಂದ ಇದು ಬೆಳೆಯಿತು.[91] ತಾಂತ್ರಿಕರಲ್ಲಿ ಯೋಗಸಾಧನೆ ಎಂದರೆ ತನ್ನಲ್ಲಿ ಹೆಣ್ತನವನ್ನು ಹುಡುಕುವ ವಿಫಲವಾದ ಯತ್ನ. ಪಟ್ ಚಕ್ರಗಳು, ಕುಂಡಲಿನಿ ಶಕ್ತಿಯ ಚೋದನೆ ಮೊದಲಾದವು ಪುರುಷತನವನ್ನು ಕಳೆದುಕೊಂಡು ಸ್ತ್ರೀತ್ವವನ್ನು ಗಳಿಸುವ ತರಬೇತಿ (3-280). ಕಥೆಯಲ್ಲಿ ಬರುವ ಜಾಂಬವ, ಸಾಂಖ್ಯ, ಯುಗ(ಯೋಗ)ಮುನಿ, ಇವರೆಲ್ಲ ಶಿವನಿಗೆ (ಶವ) ಸಂಬಂಧಿಸಿದ ಶೈವರು ಮತ್ತು ಎಲ್ಲರೂ ಹೊಲೆ-ಮಾದಿಗರು. ಇವರಲ್ಲೇ ಭಾರತದ ತತ್ವಶಾಸ್ತ್ರದ ಅತ್ಯಂತ ಅದ್ಭುತವಾದ ಮತ್ತು ಶ್ರೇಷ್ಠವಾದ ವಿಚಾರಗಳು ಹುಟ್ಟಿದವು. ಕಪಿಲ, ಪತಂಜಲಿ ಮೊದಲಾದವರು ನಂತರ ಸಾಂಖ್ಯ ಯೋಗಾದಿಗಳನ್ನು ಸಂಗ್ರಹಿಸಿದರು. ವೈದಿಕ ಪರಂಪರೆ ಈ ಎಲ್ಲ ಸಿದ್ಧಾಂತಗಳನ್ನು ಬಳಸಿಕೊಂಡು ತಾನು ವಿರಾಟ್‌ರೂಪ ತಾಳಿ ಬೆಳಗುವಂತಾಯಿತು. ಆದರೆ ಉಪಕಾರವನ್ನು ಸ್ಮರಿಸುವ ಕೃತಜ್ಞತೆಯ ಬದಲಾಗಿ ವೈದಿಕ ಪರಂಪರೆ ಜಾತಿ ವ್ಯವಸ್ಥೆಯ ಮೂಲಕ ದಲಿತರನ್ನು ಅಸ್ಪೃಶ್ಯರನ್ನಾಗಿ ಮಾಡಿ ಕೃತಘ್ನತೆಯ ಪರಮಾವಧಿ ತಲುಪಿತು. ಜಗತ್ತಿನ ಚರಿತ್ರೆಯಲ್ಲಿ ಬಹುಶಃ ಕೃತಘ್ನತೆಗೆ ಏಕೈಕ ಮಾದರಿಯಾಯಿತು. ಕೆಳವರ್ಗದ ಜನರ 'ಜನ ಪ್ರಿಯ' ನಂಬಿಕೆ, 'ಶ್ರದ್ಧೆ' ಮತ್ತು ತಾಂತ್ರಿಕರ ಮತಗಳಿಗಿಂತ, ಧರ್ಮಗಳು ಶ್ರೇಷ್ಠವಾದವುಗಳು ಎಂಬ ಅರ್ಥ ಬರುವಂತೆ ವಾದ ಮಾಡುತ್ತ ಬಂದ ಕನ್ನಡ ಪಂಡಿತವರ್;[92] ಜನರ ಸಿದ್ಧಾಂತಗಳ ಆಧಾರದಲ್ಲಿಯೇ ಹೇಗೇ ಮೂಲದಿಂದ, 'ಧರ್ಮ'ಗಳು ಉದ್ಧಾರವಾದುವೆಂಬುದನ್ನು ಆದರೆ ಅವು ಅಷ್ಟೇ ಜನ ವಿರೋಧಿಯೂ ಅದುವೆಂಬುದನ್ನು ಮರೆತು ಬಿಡುತ್ತದೆ.

"ವರ್ಗ ಸಮಾಜದಲ್ಲಿ 'ಹೊಸಭ್ರಮೆ'ಯಾಗಿ ಧರ್ಮ ಹುಟ್ಟುತ್ತದೆ."[93] ಜನರ ಒಳಿತಿಗಾಗಿ, ಜನರ ಮಧ್ಯೆಯೆ ಹುಟ್ಟಿದ ರಹಸ್ಯ ತಾಂತ್ರಿಕ ಪಂಥಗಳು ಜಾತಿವರ್ಗ ಸಮಾಜದಲ್ಲಿ ರಹಸ್ಯವಾಗಿ ಜನರಿಂದ ದೂರವಾಗಿ ಕಣಿವೆ ಕೊಳ್ಳಗಳನ್ನು ಆಶ್ರಯಿಸಿ, ಬದುಕುಳಿಯಬೇಕಾಯಿತು. ಲಿಖಿತ ಪರಂಪರೆಯನ್ನು ಆಧರಿಸಿ, ಡಾ. ಎಂ. ಚಿದಾನಂದ ಮೂರ್ತಿಯವರು, ಕೌಳರ ಬಗ್ಗೆ ಕೆಲವು ವಿಷಯಗಳನ್ನು ಸಂಗ್ರಹಿಸಿದ್ದಾರೆ. ಕವಲು ಪದ 'ಕೌಲು' ಎಂದಾಗಿರಬೇಕು. ಮಾದಿಗರ ಮಲೆಯ ಮಾದೇಶ್ವರರ ಮಹಾಕಾವ್ಯ 7 ಕವಲುಗಳಲ್ಲಿದೆ. ದೇವರಗುಡ್ಡರು ಇದನ್ನು ಹಾಡುತ್ತಾರೆ.[94] ಉತ್ತರ ಮತ್ತು ದಕ್ಷಿಣ ಕೌಲಗಳು ಎಡಗೈ ಬಲಗೈ ಹೊಲೆ ಮಾದಿಗರನ್ನೇ ಸೂಚಿಸುತ್ತಿರುವಂತಿವೆ.

"ಕೌಳರು ಅತಿಮಾರ್ಗಿಕ ತಾಂತ್ರಿಕರಾಗಿದ್ದರು, ಅವರು ಕರ್ನಾಟಕದಲ್ಲಿದ್ದರೆಂಬುದಕ್ಕೆ ಸಮಯ ಪರೀಕ್ಷೆ ಮತ್ತು ಯಶಸ್ತಿಲಕ ಚಂಪೂಗಳಲ್ಲಿ ಬರುವ ಉಕ್ತಿಗಳು ಸಾಕ್ಷಾಧಾರಗಳಾಗಿವೆ. ಬ್ರಹ್ಮಶಿವನಿಗೆ ಈ ಮತದ ಸಾಕ್ಷಾತ್ತಾದ ಪರಿಚಯವಿದ್ದಿತು. ಆ ಕಾರಣ ಅವನು ಅದಕ್ಕೆ ಸಂಬಂಧಿಸಿದ ಅನೇಕ ಸುಗತಿಗಳನ್ನು ಕೊಟ್ಟಿದ್ದಾನೆ. ಕೌಳರು ಚಂಡಿಯ ಭಕ್ತರಾಗಿದ್ದರು. ಅವರ ಪ್ರಕಾರ ಚಂಡಿಯೆ ಪರಮ ದೈವ. ಬ್ರಹ್ಮ, ವಿಷ್ಣು, ಶಿವರೂ ಕೂಡ

ಅವಳ ಆಧೀನದಲ್ಲಿರುವ ದೈವಗಳು; ಕೌಳಾಚಾರ್ಯರು ಮಾಂಸಾಹಾರ ಮದ್ಯಪಾನಗಳೇ ಮೋಕ್ಷವೆಂದು ನಂಬಿದ್ದರೆಂಬ ಬ್ರಹ್ಮಶಿವ ತೀರ ಕಟುವಾಗಿ ಖಂಡಿಸಿದ್ದಾರೆ. ಕೌಳರು ಭೋಜ್ಯ, ಅಭೋಜ್ಯ, ಪೇಯ- ಅಪೇಯವೆಂಬ ಯಾವ ವ್ಯತ್ಯಾಸವನ್ನು ಇಟ್ಟುಕೊಂಡಿರಲಿಲ್ಲವೆಂದೂ ಸೋಮದೇವ ಹೇಳುತ್ತಾನೆ. ಕೌಳರಲ್ಲಿ ಎರಡು ಪಂಗಡಗಳಿದ್ದವು. ಉತ್ತರ ಕೌಳ ಮತ್ತು ಪೂರ್ವ ಕೌಳ (ಇವು ಬಹುಶಃ ಈಚೀನ ಮತ್ತು ಹಿಂದಿನ ಸಂಪ್ರದಾಯಗಳನ್ನು ಸೂಚಿಸುವಂತೆ ಕಾಣುತ್ತದೆ. ಇವೆರಡರಲ್ಲಿ ಪೂರ್ವ ಕೌಳಕ್ಕಿಂತ ಉತ್ತರ ಕೌಳವು ಹೆಚ್ಚು ಬೀಭತ್ಸವಾಗಿದ್ದಿತು. ಪೂರ್ವ ಕೌಳದ ಸಾಧಕರು ಸ್ತ್ರೀಯ ಗುಹ್ಯಾಂಗದ ಚಿತ್ರವನ್ನು ಪೂಜಿಸಿದರೆ ಉತ್ತರ ಕೌಳದ ಸಾಧಕರು ಗಾಹ್ಯಾಂಗವನ್ನೇ ಪೂಜಿಸುತ್ತಿದ್ದರು. ಬ್ರಹ್ಮ ಶಿವನ ಪ್ರಕಾರ ಕರ್ನಾಟಕದಲ್ಲಿದ್ದುದು ಈ ಉತ್ತರ ಕೌಳವೇ. ಶಂಕರದಾಸಿಮಯ್ಯನ ಪುರಾಣದಲ್ಲಿ (ಸು. 15-16ನೇ ಶತಮಾನ) ಈ ಪಂಥದ ವಿಸ್ತೃತ ಚಿತ್ರ ದೊರಕುತ್ತದೆ. ಈ ಕೃತಿಯ ಪ್ರಕಾರ, ಕಾಳರು ತಾವೇ ನಿಜವಾದ ಬ್ರಾಹ್ಮಣರೆಂದು ತಮಗೆ ಮಾತ್ರ ವೇದಗಳ ಅರ್ಥ ತಿಳಿದಿದೆಯೆಂದು ಭಾವಿಸಿದ್ದರು. ತಮ್ಮ ದೈವ ಮಾಕಾಳಿಗೆ (ಸಂ. ಮಹಾಕಾಲೀ) ಪ್ರಾಣಿಗಳನ್ನು ಬಲಿಯಾಗಿ ಕೊಡುತ್ತಿದ್ದರು. ತಮ್ಮ ಸಾಧನೆಯ ಅಂಗವಾಗಿ ಅವರು ಮಾಂಸವನ್ನು ತಿನ್ನುತ್ತಿದ್ದರು. ಮದ್ಯವನ್ನು ಕುಡಿಯುತ್ತಿದ್ದರು. ಸ್ತ್ರೀಯರೊಡನೆ ಕಾಮುಕ ಸಂಬಂಧವನ್ನು ಪಡೆಯುತ್ತಿದ್ದರು. ಅವರ ದೇವತೆ ಮಾಕಾಳಿಗೆ ಕೆಂಪು ಕಣ್ಣುಗಳು; ಉದ್ದನೆಯ ಕೋರೆ ದಾಡೆಗಳು, ಕೊರಳಲ್ಲಿ ತಲೆಬುರುಡೆಗಳ ಹಾರ ಇದ್ದುವು. ಅವಳ ಮೈಬಣ್ಣ ಅಚ್ಚಗಪ್ಪಾದರೂ ಉಟ್ಟ ವಸ್ತ್ರಗಳ ಬಣ್ಣ ಮಾತ್ರ ಕೆಂಪು. ಈ ದೇವತೆಯನ್ನು ಅವಳ ಭಕ್ತರು ಮಂಗಳವಾರ ಮತ್ತು ಶುಕ್ರವಾರಗಳ ರಾತ್ರಿ ಕೆಂಪು ಹೂಗಳಿಂದ ಮಂತ್ರಗಳಿಂದ ಅರ್ಚಿಸುತ್ತಿದ್ದರು. ಅವರು ಕಾಮ ಸುಖವನ್ನು ಪಡೆಯುವಲ್ಲಿ ತಮ್ಮ ತಾಯಿ, ತಂಗಿಯರು ಮತ್ತು ಅನ್ಯ ಸ್ತ್ರೀಯರೆಂಬ ಭೇದವನ್ನಿಟ್ಟುಕೊಂಡಿರಲಿಲ್ಲ. ಕುಡಿದು ಮತ್ತರಾದ ಮತ್ತು ಇತರರು ಜಿಗುಪ್ಸೆ ಪಟ್ಟುಕೊಳ್ಳುವಂತೆ ಬೀದಿಗಳಲ್ಲಿ ಅಲೆಯುತ್ತಿದ್ದರು."[95]

ಕೌಲ ಪಂಥವನ್ನು ವಿರೋಧಿಸುವವರ ಬಾಯಿಂದ ಈ ಮಾತುಗಳನ್ನು ಕೇಳುತ್ತಿದ್ದೇವೆಂಬುದನ್ನು ಮರೆಯಬಾರದು. ಹಾಗಾಗಿ ಕಾಮ ಸುಖಕ್ಕೆ ತಾಯಿ ತಂಗಿ ಎಂಬ ಭೇದವಿರಲಿಲ್ಲ ಎಂಬಂಥ ಅಪಪ್ರಚಾರ ನಡೆಯುತ್ತ ಬಂದಿರುವಂತಿದೆ.

ಕಾಳಿಯನ್ನು ಪೂಜಿಸುವ ಕೌಲರ ಕ್ರಮವನ್ನು ಮಹಾನಿರ್ವಾಣ ತಂತ್ರವು ವಿವರಿಸುತ್ತದೆ. ಅಲ್ಲಿ ಕೌಲರ ಆರಾಧ್ಯ ದೈವವಾದ ಕಾಳಿಯು ಕ್ರೀಂ, ಹ್ರಿಂ, ಶ್ರೀಂ ಮಂತ್ರಗಳಿಂದ ಸಾವಿನ ಭಯವನ್ನು ನಾಶ ಮಾಡುತ್ತಾಳೆಂಬ ವಿಚಾರವಿದೆ. ಕದಂಬ ಅರಣ್ಯದಲ್ಲಿ ತಿರುಗುವ ಈಕೆ ಕದಂಬ ಹೂಗಳಿಂದ ಅಲಂಕೃತಳಾಗಿ, ಕದಂಬ ಹೂಗಳ ಹೆಂಡದಿಂದ ತೃಪ್ತಳಾಗುವಳು. ಮೂಲಧಾರ ಚಕ್ರದಲ್ಲಿ ಆಕೆ ಕುಂಡಲಿನಿ ಶಕ್ತಿಯಾಗಿ ಲೈಂಗಿಕ ಆಶೆಯಾಗುವಳು; ಶಿವನಿಗೆ ಶಕ್ತಿಯನ್ನು ನೀಡುವಳು. ಇತ್ಯಾದಿ.[96] ಈ ವಿವರಗಳು ಕೌಲರ ಮೂಲೋದ್ದೇಶವನ್ನು ಸರಿಯಾಗಿ ನೀಡುತ್ತವೆ. ಕದಂಬರದ್ದು ಕನ್ನಡ ಮೊದಲ ಅರಸು ಮನೆತನಗಳಲ್ಲಿ ಮುಖ್ಯವಾದದ್ದು. ಈ ವಂಶದ ಮೊದಲ ಅರಸ ಶಾಕ್ತರ ಕೇಂದ್ರವಾಗಿದ್ದ ಕಾಳಿಕಾಂಬೆ ಇರುವ ಕಂಚಿಗೆ ವಿದ್ಯಾಭ್ಯಾಸಕ್ಕೆ ಹೋಗುತ್ತಾನೆ. ಈ ಮಯೂರ ವರ್ಮ ನಂತರ ಬ್ರಾಹ್ಮಣರಿಗೆ ಬೆಂಬಲವಾಗಿ ನಿಲ್ಲುತ್ತಾನೆ. ಕಂಚಿ ಹೊಲೆ-ಮಾದಿಗರು, ಎಡಗೈ, ಬಲಗೈ ಪಣವ್ಯಾಜ್ಯದ

ಕೇಂದ್ರ ಸ್ಥಾನವಾಗಿತ್ತು. ಬಹುಶಃ ಹೊಲೆಯನಾಗಿದ್ದ ಮಯೂರವರ್ಮ (ಕದಂಬ) ಬಲಗೈ ಗುಂಪಿಗೆ ಬೆಂಬಲವಾಗಿದ್ದ ಬ್ರಾಹ್ಮಣರಿಗೆ ಒಲಿದಿರುವುದು ಸಹಜವಿದೆ. ಕಂಚಿ ಕಾಳಿಯ ಎಡಗೈ, ಬಲಗೈಗಳಿಂದ ಎಡಗೈ-ಬಲಗೈ ಜಾತಿಗಳು ಹುಟ್ಟಿದವೆಂಬ ನಂಬಿಕೆ, ಹೊಲೆ-ಮಾದಿಗರು ಒಂದೇ ಮೂಲದವರೆಂಬುದಕ್ಕೆ ಸಾಕ್ಷಿ. ಮಾದಿಗರಲ್ಲಿ ಕರಕುಶಲ ಕರ್ಮಿಗಳಾಗಿದ್ದ ಮುಂದೆ ಪಂಚಾಳರೆಂದು ಪ್ರಸಿದ್ಧರಾದವರು ಕಾಳಮ್ಮನನ್ನೂ ಕರ್ನಾಟಕದಾದ್ಯಂತ ನೆಲೆಗೊಳಿಸಿದ್ದಾಗಿ ಕಂಡುಬರುತ್ತದೆ. ಉತ್ತರ ಕರ್ನಾಟಕದ ದ್ಯಾಮವ್ವ , ಮಧ್ಯ ಕರ್ನಾಟಕದ ಊರಮ್ಮ , ಇತರೆಡೆಯ ಗ್ರಾಮ ದೇವತೆಗಳು ಈ ಕಾಳಮ್ಮನೇ ಆಗಿದ್ದವು. ಕಾಳಿನ ಆಮ್ಮನೇ ಕಾಳಮ್ಮನಾಗಿದ್ದು , ವೈದಿಕ ಪ್ರಭಾವದಿಂದ 'ಕಾಳಿ' ಆಗಿರುವಂತಿದೆ. ದುರ್ಗಿಯ ಜತೆ ಈಕೆಯ ಸಮೀಕರಣಗೊಂಡುದು ಇನ್ನೊಂದು ಕಥೆ. ಆದರೆ ಉತ್ತರ ಕರ್ನಾಟಕದ ಎಷ್ಟೋ ಕಡೆ ದ್ಯಾಮವ್ವನ ಜತೆ ದುರಗವ್ವನ ಮೂರ್ತಿಗಳನ್ನು ಇಟ್ಟು ಪೂಜುವ ಪದ್ಧತಿ ಪ್ರಚಲಿತವಿದೆ. ಇಲ್ಲಿ ಇವರಿಬ್ಬರೂ ಸೋದರಿಯರು; ದ್ಯಾಮವ್ವನ ಪಂಥ ಇಲ್ಲದ ದಕ್ಷಿಣ ಕರ್ನಾಟಕ ಭಾಗದಲ್ಲಿ ದುರ್ಗೆ, ದುರ್ಗಾಂಬಿಕೆ, ದುರುಗವ್ವ ಬೇರೆ ಬೇರೆ ರೂಪಗಳಲ್ಲಿ ಅಸ್ತಿತ್ವದಲ್ಲಿದ್ದಾಳೆ. ದುರುಗಿಯರ ಊಟದ ಸಂದರ್ಭವನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ದ್ಯಾಮವ್ವನ ಸ್ಥಾನವನ್ನೂ ಆಕ್ರಮಿಸುವ ಮಾರಮ್ಮ ದಕ್ಷಿಣ ಕರ್ನಾಟಕದ ಗ್ರಾಮ ದೇವಿಯಾಗಿದ್ದು ಪಂಚಾಳರು ಅಲ್ಲಲ್ಲಿ ಈಕೆಯ ಪೂಜಾರಿಗಳಾಗಿದ್ದಾರೆ. ಆದರೆ ದ್ಯಾಮವ್ವನ ಪೂಜಾರಿಕೆಯ ಸ್ವಾಮ್ಯದಷ್ಟು ವ್ಯಾಪಕತೆ ಮಾರಮ್ಮನ ಆರಾಧನೆಯಲ್ಲಿಲ್ಲ. ಒಕ್ಕಲಿಗ, ಬೇಡ, ಉಪ್ಪಾರ, ಬೆಸ್ತ, ಗೊಲ್ಲ ಮೊದಲಾದ ವಲಸೆಗಾರ ಕುಲದವರೇ ಮಾರೆಮ್ಮನ ಪೂಜಾರಿಗಳಾಗಿರುವುದು ಹೆಚ್ಚಾಗಿ ಕಂಡು ಬರುತ್ತದೆ; ಇದರರ್ಥ ಕದಂಬರ ಮಯೂರವರ್ಮನ ಕಾಲದಿಂದೀಚೆ-ಆಚೆ ಬಹುಶಃ ಕಂಚಿಯಿಂದ ಉತ್ತರ ಕರ್ನಾಟಕ ಭಾಗಕ್ಕೆ ಪಂಚಾಳರ ಮೂಲಕ ಕಾಳಮ್ಮ , ದ್ಯಾಮವ್ವ ಪ್ರವೇಶ ಪಡೆದರು. ಕಂಚಿಯ ವೀರರಾಗಿ ಮಾದಿಗರಲ್ಲಿ ಒಂದು ಗುಂಪು ಮೈಲಾರನ ಪಂಥದಲ್ಲೂ ಪ್ರವೇಶ ಪಡೆಯಿತು. ಹೀಗೆ ಉತ್ತರ ಕರ್ನಾಟಕಕ್ಕೆ ಶಾಕ್ತ ಪಂಥಗಳ ಪ್ರಥಮ ಪ್ರವೇಶ ಸಾಧ್ಯವಾಗಿರಬಹುದು. ಆದರೆ ದಕ್ಷಿಣ ಕರ್ನಾಟಕದಲ್ಲಿ ಈ ಪ್ರಭಾವ ಭಿನ್ನ ರೀತಿಯಲ್ಲಾಯಿತು. ಅಲ್ಲಿ ವಲಸೆಗಾರ ಪಶುಪಾಲಕ ದ್ರಾವಿಡರ ಮಾರೆಮ್ಮನ ಪ್ರಭಾವ ಪ್ರಾಬಲ್ಯ ಗಟ್ಟಿಯಾಗುಳಿಯಿತು. ಹೊಲೆ-ಮಾದಿಗರ ಗ್ರಾಮ ದೇವಿಯರ ಜತೆ ಅವಳು ಸಮೀಕರಣಗೊಂಡರೂ ಆಕೆಯೆ ಪ್ರಬಲಳಾಗಿ ಊರಮ್ಮನಾಗುವಂತಾಯಿತು.

ಪನಿಸವನ್ ಎಂಬ ತಮಿಳುನಾಡಿನ ಜಾತಿ ಜನ, ಸತ್ತ ಸುದ್ದಿಯನ್ನು ಕೊಂಡೊಯ್ಯುವ ವೃತ್ತಿಯವರು. ಶಿವನನ್ನು ಪೂಜುವ 'ಗುರು' ವರ್ಗ. ಮಾಂಸಾಹಾರ, ಮದ್ಯಪಾನಗಳು ಇವರಿಗೆ ಪ್ರಿಯ. ಇವರಲ್ಲಿ ಎರಡು ವರ್ಗಗಳಿದ್ದು ಒಂದು ವರ್ಗ ಬಲಗೈ ಜಾತಿಗಳಿಗೂ, ಇನ್ನೊಂದು ವರ್ಗ ಎಡಗೈ ಜಾತಿಗಳಿಗೂ ಕೆಲಸ ಮಾಡುವದು. ಆದರೆ ಇಬ್ಬರಲ್ಲೂ ಮದುವೆ, ಊಟೋಪಚಾರಗಳ ಸಂಬಂಧವಿದೆ; ಎಡಗೈ, ಬಲಗೈ ವಿಭಾಗ ಇವರಲ್ಲಿ ಒಡಕು ತಂದಿಲ್ಲ. ಈರಗೂಡಿ, ಬೀರಗೂಡಿಗೆ ಸಂಬಂಧಿಸಿ ಕನ್ನಡ ಜಾನಪದ ವಿಶ್ವ ಕೋಶವು[97] ಕೊಡುವ ವಿಷಯದಲ್ಲಿ ಎಡಗೈ-ಬಲಗೈ ವಿಚಾರಗಳ ಪ್ರಸ್ತಾಪವಿದೆ.

ಕೋಲಾರ ಜಿಲ್ಲೆ ಗೊಲ್ಲರಲ್ಲಿ ನಡೆಯುವ ಮದುವೆಯ ಒಂದು ಶಾಸ್ತ್ರಕ್ಕೆ ಈರಗೂಡಿ ಬೀರುಗೂಡಿ ಎನ್ನಲಾಗುವುದು. ಚಪ್ಪರದ ದಿನ ರಾತ್ರಿ ಊರ ಬಾಗಿಲ ಹತ್ತಿರ, ಈ ಶಾಸ್ತ್ರ

ನಡೆಯುತ್ತದೆ. ಊರ ಬಾಗಿಲ ಮಧ್ಯೆ ಕಳಸವನ್ನು ಇರಿಸಿ ಅದರ ಮುಂದೆ ಮದುವೆ ಹೆಣ್ಣಿನ ಸೀರೆ ಕುಬಸ ಹಾಗೂ ಗಂಡಿನ ಪೇಟ, ಪಂಜೆ ಇಟ್ಟು ಎಡಗಡೆ ಒಂದು, ಬಲಗಡೆ ಒಂದು ಎಡೆ ಹಾಕುವರು. ಹೊಸ ಮಡಿಕೆಯಲ್ಲಿ ಮಾಡಿದ ಅನ್ನವನ್ನು ಹಾಗೂ ಹಾಲು ಬಾಳೆಹಣ್ಣು, ಕೊಬ್ಬರಿ, ಬೆಲ್ಲಗಳನ್ನು ಎಡೆಯಲ್ಲಿ ಬಡಿಸುವರು. ಎಡ ಗಡೆ ಎಡಗೈಯವನನ್ನು (ಮಾದಿಗ); ಬಲಗಡೆ ಬಲಗೈಯವನನ್ನು (ಹೊಲೆಯ) ನಿಲ್ಲಿಸುವರು. ಅವರಲ್ಲಿ ಗಂಡಿನ ಕಡೆಯವನು ಕತ್ತಿಯನ್ನು ಹೆಣ್ಣಿನ ಕಡೆಯವನು ಬಿಲ್ಲು ಬಾಣಗಳನ್ನು ಹಿಡಿದಿರುವರು. ಗೊಲ್ಲರ ಕುಲದ ಮುಖ್ಯಸ್ಥನಾದ 'ಗೆರಿಗೆ ಪೆದ್ದಿ'ಯು ಕಳಸಕ್ಕೆ ಪೂಜೆ ಮಾಡಿ ಮಂಗಳಾರತಿ ಮಾಡಿದ ಮೇಲೆ, ಬಿಲ್ಲು ಬಾಣ ಹಿಡಿದ ಹೆಣ್ಣಿನ ಕಡೆಯವನು, 'ಹಲಲೋ' ಎನ್ನುವನು. ಕತ್ತಿ ಹಿಡಿದ ಗಂಡಿನ ಕಡೆಯವನು 'ಕಿಲಲೋ' ಎನ್ನುವನು. ಇವರು ಹೀಗೆ ಪರಸ್ಪರ ಅರ್ಭಟಿಸುತ್ತ ತಮ್ಮ ಶಸ್ತ್ರಗಳನ್ನು ಬದಲಾಯಿಸಿಕೊಳ್ಳುವರು. ಹೀಗೆ ಮೂರು ಸಾರಿ ಆದ ಮೇಲೆ, ಎಡಗಡೆಯ ಎಡೆಯನ್ನು ಎಡಗೈಯವನು, ಬಲಗಡೆಯ ಎಡೆಯನ್ನು ಬಲಗೈಯವನು ತಿನ್ನುವರು. ಆನಂತರ ಕಳಸ ತೆಗೆದುಕೊಂಡು ಮದುವೆ ಮನೆಗೆ ಬರುವರು.

ಆದಿಮ ಸಮಾಜದ ಎರಡು ಬುಡಕಟ್ಟುಗಳ ನಡುವಿನ ಅಂತರಿಕ ಸಂಘರ್ಷವನ್ನು ಮತ್ತು ಸಮನ್ವಯವನ್ನು ಈ ಪದ್ಧತಿ ವಿಧಿಯಾಚರಣೆಯ ರೂಪದಲ್ಲಿ ಉಳಿಸಿಕೊಂಡು ಬಂದಿರುವಂತಿದೆ. ಹೊಲೆ ಮಾದಿಗರಿಗೂ ಗೊಲ್ಲರಿಗೂ ಪೂರ್ವದಲ್ಲಿದ್ದ ಸಂಬಂಧವನ್ನು ಸಹ ನಿವೇದಿಸುತ್ತದೆ. ಆದರೆ ಇದೆಲ್ಲದರ ಮೂಲ ಆಶಯವೇನೆಂಬುದು ಅಸ್ಪಷ್ಟವಿದೆ. ತೆಲಗು ಹೊಲೆ-ಮಾದಿಗರಲ್ಲಿರುವ ಅಸಾದಿ ಮಾತಂಗಿ ಪರಂಪರೆಗಳು ವಿಶೇಷ ಮಹತ್ವದವಾಗಿದ್ದು, ಬಲಗೈ ಹೊಲೆಯ (ಮಾಲ)ರಲ್ಲಿ ಪುರುಷನಾದ 'ಅಸಾದಿ' ಮುಖ್ಯವಾಗುವುದು. ಎಡಗೈ ಮಾದಿಗರಲ್ಲಿ ಮಹಿಳೆ 'ಮಾತಂಗಿ' ಮುಖ್ಯಳಾಗುವುದ. ತಾಂತ್ರಿಕ ಪಂಥದ ದಕ್ಷಿಣ ಮತ್ತು ಉತ್ತರ ಮಾರ್ಗಗಳಿಗೆ ಅನುಗುಣವಾಗಿಯೆ ಇದೆ ಎಂದು ಹೇಳಬೇಕಾಗುತ್ತದೆ. ಮತ್ತು ಈ ತಂತ್ರ ಪರಂಪರೆಗಳು ನಿಗೂಢವಾಗಿಯಲ್ಲ ಜನ ಸಾಮಾನ್ಯರ ಬದುಕಿನಲ್ಲಿ ಸಾರ್ವತ್ರಿಕವಾಗಿ ಬೇರೂರಿದವೆಂಬುದನ್ನು ಮನಗಂಡಿದ್ದೇವೆ. ಸಾಧನೆಯ ಸ್ವರೂಪ ಕೆಲವು ಸಲ ನಿಗೂಢವಿದ್ದಿರಬಹುದಾದರೂ ಅದರ ಪ್ರಯೋಜನ ಇಡೀ ಸಮಾಜಕ್ಕೆ ಉಪಯೋಗವಾಗುವಂತಿತ್ತು.

ಅವೈದಿಕ ಮತ್ತು ಭೌತವಾದಿ ದ್ರಾವಿಡ ಸಿದ್ಧಾಂತಗಳು, ಪ್ರತಿಪಾದಿಸುವ ತತ್ತ್ವಗಳು ಭಾರತೀಯ ಚಿಂತನೆಯ ಬಹು ಮುಖ್ಯವಾದ ಭಾಗಗಳಾಗಿವೆ. ಅವು ವೈದಿಕ ವಾಙ್ಮಯದ ಮೇಲಷ್ಟೆ ಅಲ್ಲ ಬೌದ್ಧ ಜೈನಾದಿ ತತ್ತ್ವಗಳ ಮೇಲೆ ಅಪಾರವಾದ ಪ್ರಭಾವ ಬೀರಿದವು. ಈ ತತ್ತ್ವಗಳಲ್ಲಿಯೂ ಮಹಾಮಾತೆಯ ವಿಭಿನ್ನ ಪ್ರಭಾವಗಳನ್ನು ಕಾಣಬಹುದಾಗಿದೆ.

ಪ್ರಕೃತಿ ತತ್ತ್ವದಲ್ಲಿ ಪಂಚ ಮಹಾಭೂತಗಳ ವಿಷಯವಿದೆಯಷ್ಟೆ. ಇಲ್ಲಿ ವೈದಿಕ ಉಪನಿಷತ್ತು, ಪಂಚ ಮಹಾಭೂತಗಳನ್ನು ಹೇಳಿದರೂ ಭೌತಿಕವಾದವು ಆಕಾಶ ತತ್ತ್ವವನ್ನು ಒಪ್ಪದ ನಾಲ್ಕು ಭೂತಗಳನ್ನು ಮಾತ್ರ ಹೇಳುತ್ತದೆ. ಅವು ಪೃಥ್ವಿ (ಭೂಮಿ) ಅಪ್ (ನೀರು) ತೇಜ (ಬೆಂಕಿ) ವಾಯುಗಳು. ಇವೆಲ್ಲವೂ ಪ್ರಕೃತಿ ಭೂತಗಳು. ಪ್ರಕೃತಿ ಎಂದರೆ ತಾಯಿ, ಭೂತಗಳ ಒಡೆಯರು ಹೊಲೆ ಮಾದಿಗರು; ತಾಯಿಯ ಸೃಷ್ಟಿಕರ್ತರೂ ಹೊಲೆ ಮಾದಿಗರೇ. ಭೂಮಿ

ತಾಯಿ, ನೀರು, ಗಂಗಮ್ಮ ; ಬೆಂಕಿ, ಜೊತೆಮ್ಮ ; ವಾಯು, ಗಾಳೆಮ್ಮ ; ಒಟ್ಟಾರೆ ಭೂತಗಳು ಅಥವಾ ಪ್ರಕೃತಿ 'ಅಮ್ಮ'ನ ವಿಭಿನ್ನ ರೂಪಗಳು. ಹೀಗೆ ಜ್ಞಾನೇಂದ್ರಿಯ ಕರ್ಮೇಂದ್ರಿಯ ಕಾರ್ಯಗಳಿಗೆ ಇವೆಲ್ಲ (ತಾಯಿ) ಆಧಾರವಾಗುತ್ತದೆ. ತಾತ್ವಿಕವಾಗಿಯೂ ಹೀಗೆ ತಾಯಿ ಪಂಥದ ಚರ್ಚೆ ಅವಶ್ಯವಾಗುತ್ತದೆ.

ಬಲಗೈ ಜಾತಿಗಳಿಗೆ ಮುಖಂಡನಾಗಿರುತ್ತಿದ್ದ ದೇಸಾಯಿಯ ಕುರಿತು ಥರ್‌ಸ್ಟನ್ ವಿವರಿಸುವುದನ್ನು ನೋಡಬೇಕು.[98] ಉತ್ತರ ಅರ್ಕಾಟ್‌ನ ಎಲ್ಲ ತಾಲೂಕುಗಳಲ್ಲಿ 18 ಬಲಗೈ ಜಾತಿಗಳಿಗೆ ಮುಖಂಡನಾದ ದೇಸಾಯಿ ಕವರೈ (ಬಲಿಜ) ಜಾತಿಯವನು.

ಈ ದೇಸಾಯಿ ಚಟ್ಟೆಯ ಮನೆ ಹೆಸರು ಧನಪಾಲ. ಈತ 18 ಜಾತಿಗಳಿಗೆ ಮರಿರಾಜನಿದ್ದಂತೆ. ಈತನ ಆಡಳಿತಕ್ಕೆ ಬರುವ ಪ್ರತಿ 18 ಜಾತಿಗಳ ಮನೆಗಳಲ್ಲಿ ಮದುವೆ ಅಥವಾ ಸಾವು ಆದಾಗ ನಿರ್ದಿಷ್ಟ ಪ್ರಮಾಣದ ಹಣ, ಕಾಳು ಕಡಿಯನ್ನು ಕೊಡಬೇಕಿತ್ತು. ಇದನ್ನು ವಸೂಲಿ ಮಾಡಲು ಮತ್ತು ಎಲ್ಲ ಆಗುಹೋಗುಗಳನ್ನು ಬರೆದಿಡಲು ಏಜೆಂಟರನ್ನು ಹಳ್ಳಿ ಹಳ್ಳಿಗೆ ನೇಮಿಸಿರಲಾಗುತ್ತಿತ್ತು. ಜಾತಿ ಜಗಳವಾದರೆ, ಗಂಭೀರ ವಿಷಯಗಳಿದ್ದರೆ ಎತ್ತಿನ ಗಾಡಿನಲ್ಲಿ ದೇಸಾಯಿ ಹಳ್ಳಿಗೆ ಬರುತ್ತಿದ್ದ. ಬಂಡಿಯ ಮುಂದೆ ಪರೈಯನು ಕಾಳಿಯೂದುತ್ತ ಬರುತ್ತಿದ್ದ. ಪಂಚಾಯಿತಿ ಸೇರಿ ಜಾತಿ ಜಗಳದ ನಿರ್ಣಯ ಮಾಡಿ ದಂಡ ವಿಧಿಸುತ್ತಿದ್ದ. ಸೇರಿದ ವಿವಿಧ ಹಳ್ಳಿಗಳ ಏಜೆಂಟರಿಗೆ 4 ಆಣೆಯಂತೆ ಹಂಚಿ ಉಳಿದೆಲ್ಲವನ್ನು (20 ರೂ.ವರೆಗೆ) ತಾನೆ ತೆಗೆದುಕೊಳ್ಳುತ್ತಿದ್ದ. ಈತನ ನ್ಯಾಯ ನಿರ್ಣಯವನ್ನು ವಿರೋಧಿಸುವವರನ್ನು ಜಾತಿಯಿಂದ ಬಹಿಷ್ಕಾರ ಹಾಕಲಾಗುತ್ತಿತ್ತು. ಹಿಂದಲ ರಾಜರು, ಮತ್ತು ಬ್ರಿಟೀಶ್ ಸರಕಾರ ಕೂಡ ಇವನ ನಿರ್ಣಯಗಳನ್ನು ಒಪ್ಪುತ್ತಿದ್ದವು. ಈತ ತನ್ನ ಅಧಿಕಾರವನ್ನು ಸಾವಿರಾರು ರೂಪಾಯಿಗಳಿಗೆ ಮಾರಿ ಕೊಳ್ಳಬಹುದಿತ್ತು. ಒಂದು ದೊಡ್ಡ ಚಮಚೆ ಆಕಾರದ ವಸ್ತು ಮತ್ತು ಗಂಟೆ ಇವನ ಗುರುತು. ಈ ಚಮಚೆಯ ಮೇಲೆ 18 ಜಾತಿಗಳ ಗುರುತುಗಳನ್ನು ಕೆತ್ತಲಾಗುತ್ತಿತ್ತು. ಈತ ತನ್ನ ಪ್ರದೇಶದ ಎಲ್ಲ ಆಗುಹೋಗುಗಳ ಮಾಹಿತಿ ಸಂಗ್ರಹಿಸಿಡುತ್ತಿದ್ದ.

ಕರ್ನಾಟಕದಲ್ಲಿ ದಾಸರಿ ಎಂಬ ವೈಷ್ಣವರನ್ನು 'ಸಮಯ'ವೆಂದು ರಾಜರು ನೇಮಿಸುತ್ತಿದ್ದರು.[99] ಇವರು ನೈತಿಕ ಆಚಾರವನ್ನು ಗಮನಿಸುತ್ತಿದ್ದರು. 'ಸಮಯಾಚಾರ'ದ ಪ್ರಕಾರ ಹೆಂಗಸರನ್ನು ಮಾರುವ ಹಕ್ಕು ಇತ್ತು. ಬ್ರಾಹ್ಮಣ-ಕೊಮಟಿ ಜಾತಿಯ 'ಕೆಟ್ಟ' ಹೆಂಗಸರನ್ನು ಜಾತಿಯಿಂದ ಹೊರ ಹಾಕುವುದು ಮತ್ತು ಭುಜದ ಮೇಲೆ ಸೂಳೆ ಎಂದು ಗುರುತು ಮಾಡುತ್ತಿದ್ದರು. 'ಇಜಾರದಾರರಿಗೆ' ಇವರು ಸಾಯುವವರೆಗೆ ವಾರ್ಷಿಕ ತೆರಿಗೆ ಕೊಡಬೇಕಿತ್ತು. ಇತರ ಜಾತಿಗಳ ಹೆಂಗಸರನ್ನು ಮುಲಾಜಿಲ್ಲದೆ ಮಾರಲಾಗುತ್ತಿತ್ತು. ಸಮಯದವರನ್ನು ಬಿಟ್ಟು ಯಾವ ವಿಧಿಯೂ ನಡೆಯುವಂತಿರಲಿಲ್ಲ.

ಜಾತಿ ವ್ಯವಸ್ಥೆಯನ್ನು ಊಳಿಗಮಾನ್ಯ ರಾಜಶಾಹಿ ಕ್ರೋಡಿಕರಿಸಿ, ಸುಲಿಗೆಗೆ ಒಳಪಡಿಸುವುದಕ್ಕೆ ಈ ಕ್ರಮವನ್ನು ಅನುಸರಿಸುವುದು ಸ್ಪಷ್ಟವಿದೆ. ಇದರ ವಿಪರೀತ ರೂಪ ಶೃಂಗೇರಿ ಮಠದ ಚರಿತ್ರೆಯಲ್ಲಿ ಕಾಣಸಿಗುತ್ತದೆ[100]. ಮೇಲಿನ ಉದಾಹರಣೆಯಲ್ಲಿ ಬಲಗೈ ಜಾತಿಗಳ ಮುಖಂಡ 'ದೇಸಾಯಿ' ಶೋಷಕ ವ್ಯಾಪಾರಿ ಕುಲದವನಾಗಿದ್ದುದನ್ನು ಗಮನಿಸಬೇಕು. ಜಾತಿಗಳ ಆಚಾರವನ್ನು ಮೀರದಂತೆ ರಾಜಶಾಹಿ ನಿಯಂತ್ರಿಸುತ್ತಿದ್ದ ಈ

ಕ್ರಮ ನಿಜವಾಗಿ ಭಯಾನಕವಾದುದು.

ಆದರೆ ಯಾವ ಆಧಾರದಲ್ಲಿ ಎಡಗೈ, ಬಲಗೈ ಜಾತಿಗಳನ್ನು ವಿಂಗಡಿಸಲಾಯಿತು? ಹಾಗೆ ಮಾಡಿದ ಸಾಮಾಜಿಕ ಸಂದರ್ಭವೆಂಥದು? ಮೊದಲಾದ ಪ್ರಶ್ನೆಗಳು ಉಳಿಯುತ್ತವೆ.

ತಮಿಳುನಾಡಿನ 'ದಾಸಿ'ಯರಲ್ಲಿ ವಲಂಗೈ (ಬಲಗೈ) ಮತ್ತು ಇಡಂಗೈ (ಎಡಗೈ) ಎಂಬ ಎರಡು ಭಾಗಗಳಿದ್ದು; ಬಲಗೈ ವಿಭಾಗದ ದಾಸಿಯರು ಎಡಗೈ ಜಾತಿಗಳ ಮದುವೆಗಳಿಗೆ; ಮನೆಗಳಿಗೆ ಹೋಗುವುದಿಲ್ಲ, ಹಾಡುವುದಿಲ್ಲ. ಎಡಗೈ ವಿಭಾಗದವರಾದ ಕಮ್ಮಾಲನ್ (ಕರಕುಶಲ ಕರ್ಮಿಗಳು)ರಿಂದ ಎಡಗೈ ದಾಸಿಯರಿಗೆ ಕಮ್ಮಾಲ ದಾಸಿಯರೆಂದು ಹೆಸರಿಸುತ್ತಾರೆ. ಎರಡೂ ವಿಭಾಗಗಳ ದಾಸಿಯರು ಕೆಳ ಜಾತಿಗಳ ಜತೆ ಸಂಪರ್ಕವಿರಿಸಿಕೊಳ್ಳುವಂತಿಲ್ಲ ಎಂಬ ಕಟ್ಟಳೆ ಇದೆ[101]. ಮಲೆಯಾಳಂ ಹತ್ತಿಬಟ್ಟೆ ನೇಯುವ ಜಾತಿ ಜನಕ್ಕೆ ಚಾಲಿಯನ್‌ರೆಂದು ಹೆಸರು. ಪೂರ್ವ ಕರಾವಳಿ ತೀರದಿಂದ ಇವರು ಮಲೆಯಾಳಂ ದೇಶಕ್ಕೆ ವಲಸೆ ಬಂದವರು. 'ಪೋತುವಾನ್' ಎಂಬ ಕ್ಷೌರಿಕರು ಮತ್ತು ಪುರೋಹಿತರು ಇವರಲ್ಲಿದ್ದಾರೆ. ಮಲೆಯಾಳ ದೇಶದಲ್ಲಿ ಎಡಗೈ, ಬಲಗೈ ವಿಭಾಗವಿರುವ ಏಕೈಕ ಜಾತಿ ಜಾಲಿಯನ್‌ರದ್ದು. ಇವೆರಡರಲ್ಲಿ ಎಡಗೈ ವಿಭಾಗದವರು ಶ್ರೇಷ್ಠರು. ಬಲಗೈ ವಿಭಾಗದವರು ಗಣೇಶನನ್ನು ಎಡಗೈ ವಿಭಾಗದವರು ಭಗವತಿಯನ್ನು ಆರಾಧಿಸುವರು. ಇಬ್ಬರಲ್ಲೂ ಯಾವುದೇ ವಿಧದ ಸಂಬಂಧವಿರುವುದಿಲ್ಲ. ಈ ಜಾತಿಯಲ್ಲಿ 'ಕೊಮಾರಂ' ಎಂಬ ಹೆಸರಿನ ಜನ ಭಗವತಿಯ ಅರಾಧನೆಯಲ್ಲಿ ಭೂತ ನೃತ್ಯವನ್ನು ಮಾಡುತ್ತಾರೆ. ಮಕ್ಕತಾಯಂ ಮತ್ತು ಮರುಮಕ್ಕತಾಯಂ ಎರಡೂ ಪದ್ಧತಿಗಳು ಇವರಲ್ಲಿವೆ.[102]

ಬಲಗೈ ಜಾತಿಗಳ ಮದುವೆಯ ಸಂದರ್ಭದಲ್ಲಿ ಚಲವಾದಿ (ಉತ್ತರ ಕರ್ನಾಟಕದಲ್ಲಿ ಇವರಿಗೆ 'ಚನ್ನ ಹೊಲೆಯರು' ಎನ್ನುವರು) ಗಂಟೆ ಮತ್ತು ಚಮಚೆಯ ಬಿರುದುಗಳನ್ನು (in-signia) ತಂದು ಕರಿಕಂಬಳಿ ಗದ್ದಿಗೆಯ ಮೇಲೆ ಇಟ್ಟು ಪೂಜುತ್ತಿದ್ದನು. ಲಿಂಗಾಯತರ ಮದುವೆಗಳಲ್ಲಿ ಚಲವಾದಿ ಗಂಟೆ ಬಟ್ಟಲನ್ನು ಮನೆಯೊಳಗೊಯ್ದು ಪೂಜುವರು.[103] 18 ಕುಲಗಳ ಬಲಗೈ ಮುಖಂಡ ಬಲಿಜರು (ಬಣಜಿಗ) ಗೌರಿ ಪುತ್ರರಾಗಿದ್ದರು; ಎಂದು ಅನಂತ ಕೃಷ್ಣ ಅಯ್ಯರ್ ಹೇಳುತ್ತಾರೆ.[104]

ವ್ಯಾಪಾರಿ ವೃತ್ತಿಯ ತೆಲಗು ಬಲಿಜರಿಗೆ ನಿರ್ದಿಷ್ಟ ಜಾತಿ ಎಂಬುದಿಲ್ಲ. ಆವರ ಕುಲದ ಹುಟ್ಟಿನ ಬಗೆಗಿನ ಕತೆಗಳು ವೈದಿಕ, ಅವೈದಿಕ ಕಲಬೆರಕೆಯ ಸೂಚನೆಯನ್ನು ನೀಡುವವು. ಇವರ ಮದುವೆಯಲ್ಲಿ ಎಷ್ಟು ಕಂಬಗಳನ್ನು ನೆಡಬೇಕು ಅಥವಾ ವಧುವಿಗೆ ಎಷ್ಟು ಸೀರೆಗಳನ್ನು ತರಬೇಕು ಎಂಬುದರ ಮೇಲೆ ತಮ್ಮ ಜಾತಿಯ ಒಳಭಾಗಗಳನ್ನು ಮಾಡಿಕೊಳ್ಳುತ್ತಾರೆ. ಈ ಪದ್ಧತಿ ಉಪ್ಪಾರರೆ ಮೊದಲಾದ ಇನ್ನು ಹಲವು ಜಾತಿ ಜನರಲ್ಲಿ ಪ್ರಚಲಿತವಿದೆ. ಹೆಣ್ಣಿಗೆ ಕೊಡುವ 8 ವರಹ, ಐದು ವರಹದ ಆಧಾರದಲ್ಲಿ ಈ ಭೇದ ಕಾಣುತ್ತದೆ. 18 ಪಣದವರು (ಬಲಗೈ) ಎಂಬುದು ಬಹುಶಃ ವಧುವಿಗೆ ಕೊಡುತ್ತಿದ್ದ ತೆರದ ಲೆಕ್ಕವಾಗಿರಬೇಕು.

ಪಾರ್ವತಿ ಮಾಡಿದ ಯಾಗದಲ್ಲಿ ಹುಟ್ಟಿದ ರಥಿಕಾರ ಮತ್ತು ಪಟ್ಟಭದ್ರ ಎಂಬವರಿಂದ ಎಡಗೈ, ಬಲಗೈ ಪಂಗಡಗಳು ಹುಟ್ಟಿದವೆಂಬ ಕಥೆಯೂ ಕೃತಕವೆಂದು ಕಾಣದೆ ಇರದು.

ಅದೇನಿದ್ದರೂ ಎಡಗೈ, ಬಲಗೈ ಕಲ್ಪನೆಯ ಹುಟ್ಟಿಗೆ ದ್ರಾವಿಡ ದೇವರುಗಳಾದ ಶಿವನಿಗೊ ಅಥವಾ ಪಾರ್ವತಿಗೊ ಅಂಟಿಸಿರುವುದಂತೂ ಸ್ಪಷ್ಟ. ಬಲಗೈ ಜಾತಿಗಳು-ಬಣಜಿಗ, ಒಕ್ಕಲಿಗ, ಗಾಣಿಗ, ರಂಗಾರಿ, ಲಾಡ, ಗುಜರಾಥಿ, ವ್ಯಾಪಾರಿ, ಕೊಮಟೆ, ಜೈನ, ಬೌದ್ಧ, ಕುರುಬ, ಕುಂಬಾರ, ಅಗಸ, ಬೆಸ್ತ, ಪದ್ಮಸಾಲಿ, ನಾಯಿಂದ, ಉಪ್ಪಾರ, ಚಿತ್ರಗಾರ, ಗೊಲ್ಲ, ಹೊಲೆಯ. ಎಡಗೈ ಜಾತಿಗಳು-ಪಂಚಾಳ, ಭೇರಿ, ದೇವಾಂಗ, ಹೆಗ್ಗಾಣಿಗ (ಎರಡು ಎತ್ತು ಹೂಡುವವ), ಗೊಲ್ಲ, ಬೇಡ, ಒಕ್ಕಲು, ಪಲ್ಲಿ, ಮಾದಿಗ.

ಈ ಪಟ್ಟಿ ದ್ರಾವಿಡ ಜಾತಿಗಳನ್ನಷ್ಟೆ ಒಳಗೊಳ್ಳದೆ ವೈದಿಕ ವಲಸೆಗಾರ ವ್ಯಾಪಾರಿ ಮೊದಲಾದ ಜಾತಿಯವರನ್ನು ಒಳಗೊಂಡಿರುವುದನ್ನು ನೋಡಿದರೆ ಈ ವಿಭಜನೆ ತೀರ ಪ್ರಾಚೀನದ್ದಲ್ಲ. ಈಚಿನವೆಂದು ಖಚಿತವಾಗುತ್ತದೆ. ವಾಮಾಚಾರಿ ಎಡಗೈ ಗುಂಪಿಗೆ ಗ್ರಾಮದೇವತೆಗಳ ಪೂಜಾರಿಗಳಾದ ಪಂಚಾಳರನ್ನು ನೇತಾರರನ್ನಾಗಿ ಮಾಡಿರುವುದು ಅರ್ಥ ಪೂರ್ಣವಾಗಿದೆ. ಗೊಲ್ಲ ಒಕ್ಕಲಿಗ ಜಾತಿಗಳು ಎರಡೂ ಪಂಗಡಗಳಲ್ಲಿರುವ ವಿಶೇಷ ಸಂಗತಿಯೂ ಇದೆ. ಈ ಎರಡೂ ಗುಂಪಿನ ಜಾತಿಗಳ ಮಧ್ಯೆ ಆಗಾಗ ಜಗಳವಾಗುತ್ತಿದ್ದು, ಆದು ತುಂಬ ಗಂಭೀರವಾದ ಸ್ಥಿತಿಯನ್ನು ನಿರ್ಮಾಣ ಮಾಡುತ್ತಿದ್ದ ಬಗ್ಗೆ ಉಲ್ಲೇಖಗಳಿವೆ. ಮದುವೆಯ ಮೆರವಣಿಗೆ, ಜಾತ್ರೆ, ಉತ್ಸವ ಹಬ್ಬಗಳಲ್ಲಿ ಈ ಘರ್ಷಣೆಗಳು ಪ್ರಕಟವಾಗುತ್ತಿದ್ದು, ಇಂದಿನ ಕೋಮು ಗಲಭೆಗಳನ್ನು ನೆನಪಿಗೆ ತರುವಂತಿದ್ದವು. ಆಗಿನ ರಾಜಶಾಹಿ ಶೋಷಕ ವರ್ಗಕ್ಕೆ ಇದರಿಂದ ಅನುಕೂಲವೆ ಇತ್ತು. ಕಳಸ, ಆರತಿ, ಛತ್ರಿ, ಚಾಮರ ಮೊದಲಾದ ಬಿರುದಾವಳಿಗಳನ್ನು (ಗೌರವದ ಸ್ಥಾನಮಾನದ ಸಂಕೇತಗಳು) ಬಳಸುವುದೆ ಮೊದಲಾದ ಸಣ್ಣ (ಕ್ಷುಲ್ಲಕವೆಂದು ನಮಗೆ ಈಗ ಕಾಣುತ್ತವೆ) ಕಾರಣಗಳಿಗೂ ವೈಷಮ್ಯ ವಿಪರೀತಕ್ಕೆ ಹೋಗುತ್ತಿದ್ದವು. ಹಾಗಾಗಿ ಅವರವರ ಪದ್ಧತಿಗಳನ್ನು ತಾಮ್ರ ಶಾಸನಗಳಲ್ಲಿ ಬರೆದು ನಿರ್ಧರಿಸುತ್ತಿದ್ದುದಿತ್ತು (ಕಂಚಿನ ಶಾಸನಕ್ಕೆ ನೋಡಿ 110-46). ಇಷ್ಟಾದರೂ ಘರ್ಷಣೆಗಳಲ್ಲಿ ಸಾವು ನೋವುಗಳಾಗುವುದು ಸಾಮಾನ್ಯವಾಗಿತ್ತು. ಆದರೆ ಘರ್ಷಣೆ ಕೃತಕವಾಗಿ ಸೃಷ್ಟಿಸಿದ್ದಾಗಿತ್ತು. ಮೂಲತಃ ಈ ಗುಂಪುಗಳ ಮಧ್ಯೆ ಸಹಕಾರ ಸಮನ್ವಯವೇ ಆಧಾರವಾಗಿತ್ತು.

ಎಡಗೈ ಗುಂಪಿಗೆ ಪಂಚಾಳರು ಮುಖಂಡರಾಗಿದ್ದರು. ಇವರೂ ಬಲಿಜ ನೇತಾರನಂತೆ ಹಳ್ಳಿ ಹಳ್ಳಿಗೆ ಹೋಗಿ "ಪಂಚಾಯಿತಿ" ಮಾಡುವ ಹಕ್ಕುಳ್ಳವರಾಗಿದ್ದರು.

ಪಣಕಟ್ಟು ಪದ್ಧತಿಯ ಮೂಲದ ಬಗ್ಗೆ ಕೆಲವು ವಿದ್ವಾಂಸರು ಚರ್ಚೆ ಮಾಡಿದ್ದಾರೆ. "ಹತ್ತನೇ ಶತಮಾನದಿಂದ ಹಿಡಿದು ಹತ್ತೊಂಬತ್ತನೇ ಶತಮಾನದವರೆಗೂ ಅಲ್ಲಲ್ಲಿ ಸ್ಫೋಟಗೊಳ್ಳುತ್ತಲೇ ಬಂದ ಈ ಪಣ ದ್ವೇಷ ಗಮನಾರ್ಹವಾದ ಸಾಮಾಜಿಕ ಸ್ಥಾನ ಪಲ್ಲಟವೊಂದಕ್ಕೆ ದಾರಿ ಮಾಡಿಕೊಟ್ಟಿರಬಹುದೆಂಬುದು ಅಷ್ಟೆ ಆಶ್ಚರ್ಯಕರ."[105] ಜಾತಿ ಪದ್ಧತಿಯ ನರಕದ ವಿರುದ್ಧ, ಹಟ ಬಿಡದ ತ್ರಿವಿಕ್ರಮರಂತೆ ಮಾರ್ಯಾದಸ್ಥ ಸ್ಥಾನ ಮಾನಗಳಿಗೆ ಹೋರಾಡಿದವರು ಪಂಚಾಳರು. ಅದೂ ಪಣವ್ಯಾಜ್ಯದ ಮೂಲಕ (ಆದೇ). ಇದಕ್ಕೆ ಅವರು ಉಪಯೋಗಿಸಿದ ತಂತ್ರ ಬ್ರಾಹ್ಮಣರು ಉಪಯೋಗಿಸುತ್ತಿದ್ದ ಸಾಧನೆಗಳನ್ನೇ ಬಳಸಿಕೊಳ್ಳುವುದು. ಜನಿವಾರಧಾರಣೆ, ಪುರೋಹಿತಿಕೆ ಮೊದಲಾದವು. ಆದರೆ "ಕಾಳಿ ಮತ್ತು ಇತರೆ ಗ್ರಾಮದೇವತೆಗಳನ್ನು ಪೂಜಿಸುವ ಸತ್ತವರನ್ನು ಹುಗಿಯುವ ವಿಶ್ವಕರ್ಮರಲ್ಲಿ

ವಿಷ್ಣು ಪೂಜೆ ಖಡಾಖಂಡಿತವಾಗಿ ಇಲ್ಲವೇ ಇಲ್ಲ. ತಮ್ಮ ಮದುವೆ ಮತ್ತು ಸಾವಿನ ವಿಧಿಗಳಲ್ಲಿ ಪುರೋಹಿತರನ್ನು ಹತ್ತಿರಕ್ಕೂ ಬಿಟ್ಟುಕೊಳ್ಳುವುದಿಲ್ಲ. ಬದಲಿಗೆ ತಾವೆ ಪುರೋಹಿತರಾಗಿ ಕಾರ್ಯನಿರ್ವಹಿಸಿಕೊಳ್ಳುತ್ತಾರೆ."[106]

ಈ ಎಲ್ಲ ಅಂಶಗಳು ಆರ್ಥಿಕ ಸಮಸ್ಯೆಗಳಿಗೂ, ಸಾಮಾಜಿಕ ಸ್ಥಾನಮಾನಗಳಿಗಾಗಿ ನಡೆದ ಹೋರಾಟಕ್ಕೆ ಸಂಬಂಧ ಕಲ್ಪಿಸುತ್ತದೆ. ಪಂಚಾಳರು ಹೊರ ಮಾದಿಗ ಮೂಲದವರೇ ಆಗಿರಬೇಕೆನ್ನಲು ಹಲವು ಆಧಾರಗಳಿವೆ. ಮುಖ್ಯವಾಗಿ ಅವರು ಶಾಕ್ತಮೂಲದ ಕಾಳಿಯ ಆರಾಧಕರು. ಮಾಸ್ತೀಕರು, ಸಿಂದ್ ಮಾದಿಗರಂತೆ ಕಮ್ಮಾರರಲ್ಲೂ ಗುಪ್ತ ಭಾಷೆ ಬಳಕೆಯಲ್ಲಿತ್ತು. ಇವರು ಬ್ರಾಹ್ಮಣ ದ್ವೇಷಿಗಳು. ತಮಿಳು ಹೊಲೆ ಮಾದಿಗರಲ್ಲಿ ಪಂಚಾಳ ವೃತ್ತಿಗಳು ಮೊದಲಿನಿಂದಲೂ ಇದ್ದವು. ಎಂ. ಶ್ರೀನಿವಾಸ ಅಯ್ಯಂಗಾರ್ ಹೇಳುವಂತೆ ಪಂಚಾಲರು ಚೋಳರ ರಾಜಗುರುಗಳು ಪುರೋಹಿತರು. ಪರಿಮಲನ್ ಚೋಳನ ಕಾಲದಲ್ಲಿ ವೇದವ್ಯಾಸ ಇದನ್ನು ವಿರೋಧಿಸಿದ. ರಾಜನನ್ನು ಕೊಲೆ ಮಾಡಿಸಿ ಅವನ ಅಕ್ರಮ ಸಂತಾನ ಮಗನನ್ನು ಪಟ್ಟಕ್ಕೆ ತಂದ. ವಿರೋಧಿಸಿದ ಜನರನ್ನು ವೇದವ್ಯಾಸನ ಒತ್ತಡದಿಂದ ರಾಜ 'ಬಲಗೈ'ಯವರು ಎಂದು ಘೋಷಿಸಿದ.[107] ಮೊದಲು ಐದು ವೇದಗಳಿದ್ದುವೆಂದು ಪಂಚಾಳ ಹೇಳಿಕೊಂಡಿದ್ದರಿಂದಲೇ ಅವನಿಗೆ ಪುರೋಹಿತ ಪಟ್ಟ ಚೋಳರಿಂದ ದೊರಕಿತು[108] ಎಂಬ ಮಾತಿನ ಸ್ವಾರಸ್ಯವೇನು? ಪಂಚ'ಮ'ಕಾರದ ಪಂಜಾಳರು ('ಐದು'- ಹೊಲೆ ಮಾದಿಗರ ಪವಿತ್ರ ಸಂಖ್ಯೆ) ಬ್ರಾಹ್ಮಣರ ಪ್ರಾಬಲ್ಯದ ಮೂಲವಾದ ವೇದವನ್ನೇ ಆಧರಿಸಿ ಐದನೇ ವೇದ ( ಪಂಚಮರು)ವನ್ನು 'ಶಾಕ್ತ' ಎಂಬರ್ಥದಲ್ಲಿ ಹೇಳಿರಬೇಕು. ಒಟ್ಟಾರೆ ಪಣ ವ್ಯಾಜ್ಯದ ಮೂಲದಲ್ಲಿ ಕೆಲಸ ಮಾಡಿರುವುದು "ಮತೀಯ" ಕಾರಣಗಳು. ಭಾರತದ ಯಾವ ಜನಪದ ಚಳುವಳಿಗಳೂ ಕೂಡ ಮತೀಯ ರೂಪದಲ್ಲೇ ಪ್ರಕಟವಾದವು ಎಂಬ ವಿಚಾರದ ಹಿನ್ನೆಲೆಯಲ್ಲಿ ನೋಡುವುದಾದರೆ, ಬ್ರಾಹ್ಮಣರನ್ನು ಮತ್ತು ವೈದಿಕ ಸಂಸ್ಕೃತಿಯ ದಬ್ಬಾಳಿಕೆಯನ್ನು ಶರಣರ ಚಳುವಳಿಯ ಹಿಂದೆ ದಕ್ಷಿಣ ಭಾರತದಲ್ಲಿ ಹುಟ್ಟು ಹಾಕಿದವರು ಹೊಲೆ-ಮಾದಿಗರೇ. ಈ ಜನವರ್ಗದಲ್ಲಿದ್ದ ಪೂಜಾರಿ ಮತ್ತು ಪಂಚಾಳ ವರ್ಗ. ಇವರು ನೇತೃತ್ವ ವಹಿಸಲು ಮುಖ್ಯ ಕಾರಣ ಆರ್ಥಿಕವಾಗಿ, ಬೌದ್ಧಿಕವಾಗಿ ಮುಂದುವರೆದಿದ್ದರು. ಇದನ್ನು ಕೆ. ರಾಮಯ್ಯ ಹೀಗೆ ವಿವರಿಸಿದ್ದಾರೆ- "ಚೋಳ ಸಾಮ್ರಾಜ್ಯ ಪ್ರವರ್ಧಮಾನಕ್ಕೆ ಬರುವ ವೇಳೆಗಾಗಲೇ ಬ್ರಾಹ್ಮಣರ ಕೈ ಮೇಲಾಗಿ, ಬಿರುಸಿನ ಬ್ರಾಹ್ಮಣೀಕರಣದ ಬಿಸಿಗೆ ಬ್ರಾಹ್ಮಣೇತರ ಶೂದ್ರ ಸಮಾಜದಲ್ಲಿ ಕುದಿಯೊಂದು ಏರ್ಪಡತೊಡಗಿತು. ಪಂಚಾಳರು ಬ್ರಾಹ್ಮಣರೊಂದಿಗೆ ಮುಖಾಮುಖಿಯಾಗಿ ನಿಂತು ಸಮರ್ಥ ಸವಾಲೊಡ್ಡಲು ಅರಂಭಿಸಿದ ಕೂಡಲೇ ಈ ಕುದಿತ ಪಣ ಜ್ವಾಲಾಮುಖಿಯ ರೂಪದಲ್ಲಿ ಹೊರ ಹೊಮ್ಮತೊಡಗಿತು. ರಾಜರನ್ನು ತಮ್ಮ ಕೈವಶ ಮಾಡಿಕೊಂಡಿದ್ದ ಪಂಚಾಳರಿಗೆ ಬ್ರಾಹ್ಮಣರನ್ನು ಎದುರು ಹಾಕಿಕೊಳ್ಳುವಷ್ಟು ಚೈತನ್ಯ, ಧೈರ್ಯ ಬರಲು ಕಾರಣ ಆ ಕಾಲವಲ್ಲಿ ನಡೆಯುತ್ತಿದ್ದ ಅಪಾರ ಗುಡಿ ಗೋಪುರಗಳ ನಿರ್ಮಾಣ ಕಾರ್ಯ. ಆಳರಸರಿಗೆ ಪಂಚಾಳರನ್ನು ನಿರ್ಲಕ್ಷಿಸುವುದು ಈ ಕಾರಣದಿಂದ ಅಸಾಧ್ಯವಾಗಿರಬೇಕು. ಈ ಎಲ್ಲ ಕಾರಣಗಳು ಏಕೀಭವಿಸಿ ದಕ್ಷಿಣ ಭಾರತದ ಇಡೀ ನೆಲ ಪಣ ಯುದ್ಧದ ರಣಾಂಗಣವಾಗಿ ರೂಪುಗೊಂಡಿತು. ಹೀಗೆ ಸ್ಫೋಟಗೊಂಡ ಪಣ ದ್ವೇಷ 10ನೇ ಶತಮಾನದಿಂದ ಹಿಡಿದು

19ನೇ ಶತಮಾನದ ಆರಂಭದವರೆಗೂ ಹರಡಿಕೊಂಡಿತು."[109]

"ಪಂಚಾಳರು ಕಾಳಿಯನ್ನು ವಾಮಾಚಾರದ ಮೂಲಕ ಆರಾಧಿಸುತ್ತಿದ್ದ ಇತರ ಕುಶಲಕರ್ಮಿ ಜಾತಿಗಳನ್ನು ಎಡಗೈ ವೇದಿಕೆಯಡಿ ಸಂಘಟಿಸಿ ನಾಯಕತ್ವ ವಹಿಸಿದರೆ. ಬ್ರಾಹ್ಮಣರು ಕೃಷಿ ಮೂಲದ ಬಲಿಷ್ಠ ಜಾತಿಗಳನ್ನು ಬಲಗೈ ಬ್ಯಾನರ್‌ನಡಿ ಯುದ್ಧಕ್ಕೆ ಛೂ ಬಿಟ್ಟರು. ನಗರಗಳಲ್ಲಿನ್ನೂ ಜೈನರ ಪ್ರಭಾವ ದಟ್ಟವಾಗಿದ್ದುದರಿಂದ ಹಾಗೂ ಕುಶಲಕರ್ಮಿಗಳು ಕೂಡ ಸಂಖ್ಯೆಯಲ್ಲಿ ಸಾಕಷ್ಟು ಗಣನೀಯವಾಗಿದ್ದು ಬಲಿಷ್ಠರಾದುದರಿಂದ ಬ್ರಾಹ್ಮಣರ ಬೇಳೆಕಾಳು ಇಲ್ಲಿ ಬೇಯದೆ ಸುತ್ತ ಮುತ್ತಲ ಜಮೀನುದಾರಿ ಕೃಷಿಕ ಜಾತಿಗಳ ಮೊರೆ ಹೋದರು."[110]

ದಕ್ಷಿಣ ಭಾರತದಲ್ಲಿ ಜಾತಿ ವ್ಯವಸ್ಥೆ ಶೋಷಣೆಯ ಆಧಾರದ ಆರ್ಥಿಕತೆಗೆ ಮೂಲವಾದ ರಾಜ್ಯ ವ್ಯವಸ್ಥೆಯ ಜತೆ ಬೆಳೆದು ಬಂದ ಕ್ರಮವನ್ನು ವಿರೋಧಿಸಿದ ದ್ರಾವಿಡರ ಅತ್ಯದ್ಭುತ ಘಟನೆ ಈ ಪಣವ್ಯಾಜ್ಯ ರೂಪದಲ್ಲಿದೆ.

ಹೋರಾಟವನ್ನು ಪ್ರಪ್ರಥಮ ಬಾರಿ ಪಣಕಟ್ಟಿನ ರೂಪದಲ್ಲಿ ಹುಟ್ಟು ಹಾಕಿದ್ದ ಹೊಲೆ-ಮಾದಿಗರೇ ಕರ್ನಾಟಕದಲ್ಲಿ 12ನೇ ಶತಮಾನದಲ್ಲಿ ಮತ್ತೊಂದು ಪ್ರಯತ್ನವನ್ನೂ ಕೈಕೊಂಡರು. ಈಗಲೂ ಅವರಿಗೆ ಬೆಂಬಲವಾದವರು ಕರ ಕುಶಲ ಕರ್ಮಿಗಳೆ. ಇಡೀ ದ್ರಾವಿಡ ಜನವರ್ಗವು ಒಂದಾಗಿ ಪ್ರಪ್ರಥಮ ಹೋರಾಟದಲ್ಲಿ ('ಪಣ') ಒಂದಾಗುಳಿದಿದ್ದರೆ ವೈದಿಕ ಸಂಸ್ಕೃತಿ ದಕ್ಷಿಣ ಭಾರತದಿಂದ ಕಿತ್ತೊಗೆಯುವುದು ಅನಿವಾರ್ಯವಾಗುತ್ತಿತ್ತು. ಆದರೆ ಹಾಗಗಲೆ ಇಲ್ಲ. ಜಾತಿವರ್ಣ ವ್ಯವಸ್ಥೆಯ ಹರಿಕಾರರಾದ ವೈದಿಕರು (ಬ್ರಾಹ್ಮಣರು) ತಮ್ಮ ಎಂದಿನ ಒಡೆದಾಳುವ ನೀತಿಯನ್ನು ಇಲ್ಲಿಯೂ ಅನುಸರಿಸಿದರು. ಇವರಿಗೆ ಬೆಂಬಲವಾಗಿ ನಿಂತವರು ಬಲಗೈಯವರಾದರು. ಪಂಥ ಪದ್ಧತಿಗಳ ಪ್ರಭೇದಗಳಿಂದ ದ್ರಾವಿಡರಲ್ಲಿದ್ದ ವೈಷಮ್ಯರಹಿತ ವೈರುದ್ಯವನ್ನೂ ಬ್ರಾಹ್ಮಣರು ಬಳಸಿಕೊಂಡರು. ಆದನ್ನು ಪಣವ್ಯಾಜ್ಯದಲ್ಲಿ ವೈಷಮ್ಯಪೂರಿತ ವೈರುಧ್ಯವನ್ನಾಗಿ ಪರಿವರ್ತಿಸುವಲ್ಲಿ ಸಫಲರಾದರು. ಬಹುಶಃ ಈ ಎಲ್ಲಕ್ಕೂ ರಾಜ್ಯ ವ್ಯವಸ್ಥೆ ಬೆಂಬಲವಾಗಿ ನಿಂತಿತು. ಅದು ಸಹಜವಾಗಿ ವೈದಿಕರನ್ನು ಬೆಂಬಲಿಸಿತು. ಏಕೆಂದರೆ ತನ್ನ ಆಸ್ತಿತ್ವಕ್ಕೆ ಅದು ಜಾತಿ ಪದ್ಧತಿಯನ್ನೇ ಆಶ್ರಯಿಸಬೇಕಾಗಿತ್ತು. ಅದರ ಪಕ್ಕಾ ಪ್ರತಿವಾದಕರು ವೈದಿಕರೇ ಆಗಿದ್ದರು. ಕರ್ನಾಟಕದ ಮೊದಲ ಕದಂಬ ಅರಸ ಬ್ರಾಹ್ಮಣರನ್ನು ದೊಡ್ಡ ಸಂಖ್ಯೆಯಲ್ಲಿ ಆಮದು ಮಾಡಿದ್ದಕ್ಕೆ ಕಾರಣ ಇದೇ ಆಗಿತ್ತು. 12ನೇ ಶತಮಾನದ ಸಾಮಾನ್ಯರ ಚಳುವಳಿಯ ಲಾಭ, ಕಾಳಾಮುಖ ಮಠಾಧೀಶರು ವೀರಶೈವ ಮಠಾಧೀಶರಾಗಿ ಆಸ್ತಿ-ಪಾಸ್ತಿ, ಗೌರವ-ಘನತೆಗಳನ್ನು ಪಡೆಯುವಲ್ಲಿರುವಂತೆ, ಪಣವ್ಯಾಜ್ಯದ ಪ್ರಪ್ರಥಮ ಹೋರಾಟದ ಲಾಭ ಪಂಚಾಳರಿಗೆ ಆಯಿತು. ಅವರು 12ನೇ ಶತಮಾನದ ನಂತರದ ವೀರಶೈವ ಮಠಾಧೀಶರಂತೆ ವೈದಿಕ ಆಚರಣೆಗಳನ್ನೆ ಅನುಕರಿಸಿದರು. ಅಂದರೆ ವೈದಿಕೀಕರಣಕ್ಕೆ ಒಳಗಾದರು. ಅವರ ಆರ್ಥಿಕ ಊರ್ಧ್ವಮುಖಿ ಚಲನೆಯು ಮಠೀಯ ಆದರ್ಶದಲ್ಲಿ ವೈದಿಕರನ್ನೆ ಮಾನದಂಡವನ್ನಾಗಿ ಸ್ವೀಕಸಿದ್ದು ಎಂಥ ದುರಂತ! ಇದೇ ಭಾರತದ ಚರಿತ್ರೆಯ ಸಾಮಾಜಿಕ ದುಸ್ಥಿತಿಗೆ ಮೂಲ ಕಾರಣವಲ್ಲವೆ? ಈ ಆದರ್ಶದ ಗ್ರಾಮೀಣ ಸ್ವರೂಪವೆಂದರೆ ಉತ್ತರ ಕರ್ನಾಟಕದಲ್ಲಿ ಕೃಷಿಕ ಹೊಲೆಮಾದಿಗ ಮೂಲದ ಕಾಳವ್ವ

ದೇವಿ+ಅಮ್ಮ > ದೇವಮ್ಮ - ದ್ಯಾಮವ್ವನಾಗಿ ಪಂಚಾಳಂ ಕೈವಶವಾದಳು. ದುರುಗವ್ವ ಈಕೆಯ ಸೋದರಿಯಾದಳು. ಇನ್ನು ಮಾದಿಗರಲ್ಲೇ ಉಳಿದಿದ್ದ ಮಾತಂಗಿ, ದ್ಯಾಮವ್ವನ ಗುಡಿ ಎದುರು ಅಂಗಳದಲ್ಲಿ ಪಾದಗಟ್ಟೆಯ ಅಲ್ಪ ಗೌರವವನ್ನು ಮಾತ್ರ ಉಳಿಸಿಕೊಂಡಳು. ಆದರೆ ಹೊಲೆ-ಮಾದಿಗರು ಜಾತ್ರೆಯಲ್ಲಿ ಮುಖ್ಯ ಪಾತ್ರವನ್ನಾಡುವುದನ್ನು ತಪ್ಪಿಸಲು ಚರಿತ್ರೆಗೆ ಸಾಧ್ಯವಾಗಲೇ ಇಲ್ಲ.

ಪಣ ವ್ಯವಸ್ಥೆಯ ಮೂಲವನ್ನು ಆಜೀವಿಕರ ಸಮಸ್ಯೆಯಲ್ಲಿ ಶೋಧಿಸುವ ಒಳ್ಳೆಯ ಪ್ರಯತ್ನವನ್ನು ಲಕ್ಷ್ಮೀಪತಿ ಕೋಲಾರ ಕೈಗೊಂಡಿದ್ದಾರೆ.[111]

ಒಟ್ಟಾರೆ ಆದಿಮ ಕೃಷಿಕ ಬುಡಕಟ್ಟುಗಳಾದ ಹೊಲೆಯ-ಮಾದಿಗರಲ್ಲಿ ತಾಂತ್ರಿಕ ಪ್ರಭೇದಗಳಾಗಿ ಹುಟ್ಟಿ ತತ್ವಜ್ಞಾನದೊಳಗೂ ಪ್ರತಿಫಲಿಸಿ, ಸಾಮಾಜಿಕ ವಿಭಜನೆಗೆ ಕಾರಣವಾಗಿ, ಊಳಿಗಮಾನ್ಯ ಕಾಲದಲ್ಲಿ ಶೋಷಕ ವರ್ಗ ಹಿತಗಳಿಗೆ ಅನುಗುಣವಾಗಿ ಮಾರ್ಪಟ್ಟು, ಬ್ರಿಟೀಷ್ ನಂತರದ ಕಾಲದಲ್ಲಿ ಈ ಪದ್ಧತಿ ಜೀವ ಹಿಡಿದುಕೊಂಡು ಬಂದಿತು ಎಂದು ಕ್ರೋಡಿಕರಿಸಬಹುದಾಗಿದೆ. ದ್ರಾವಿಡ ಸಂಸ್ಕೃತಿಯ ಹಲವು ನಿಗೂಢ ಸಮಸ್ಯೆಗಳಲ್ಲಿ ಇದು ಒಂದಾಗಿದೆ.

**ಕೊನೆ ಟಿಪ್ಪಣಿಗಳು:**


1. Castes and Tribes of Southern India; E.Thurston, Volume-II; ಪುಟ 340.
2. ಮನುಸ್ಮೃತಿ; ಅನುವಾದ-ಟಿ.ಈಶ್ವರ ಶಾಸ್ತ್ರಿ; ಪುಟ 340.
3. ಮನುಸ್ಮೃತಿ; ಅನುವಾದ-ಟಿ.ಈಶ್ವರ ಶಾಸ್ತ್ರಿ; ಪುಟ 339.
4. ಮಲೆನಾಡು ಒಕ್ಕಲಿಗರು ಮತ್ತು ಅವರ ಜಾನಪದ; ಎ.ಹಿರಿಯಣ್ಣ ; ಪುಟ 424.
5. ಅಳಿಯ ಸಂತಾನ ಕಟ್ಟು ಅಥವಾ ಮರುಮಕ್ಕತಾಯಂ ಎಂಬ ಪದ್ಧತಿ, ಕೇರಳ ಕರ್ನಾಟಕ ಕರಾವಳಿ ಪ್ರದೇಶದ ಹಲವಾರು ಜನಾಂಗಗಳಲ್ಲಿ ಜೀವಂತ ವಾಗಿರುವ ಮಾತೃ ಪ್ರಧಾನ ಕುಟುಂಬ ಪದ್ಧತಿಯ ಪಳೆಯುಳಿಕೆಯಾಗಿದೆ. ಇದರ ಮುಖ್ಯ ಲಕ್ಷಣಗಳು 1) ಬಂಧುತ್ವವನ್ನು ಒಂದು ಕುಟುಂಬದಲ್ಲಿ ಮಾತೃ ಮೂಲದ ಮೂಲಕ ಗುರುತಿಸುವುದು 2) ಕುಟುಂಬ ಪದ್ಧತಿಯಲ್ಲಿ ಮದುವೆ ಎನ್ನುವ ಸಂಸ್ಥೆಯನ್ನು ಒಪ್ಪದೆ ಇರುವುದು 3) ಆಸ್ತಿ ಹಕ್ಕಿನ ಕಡ್ಡಾಯ ವಿಭಜನೆಯನ್ನು ನಿಷೇಧಿಸುವುದು (ತುಳು ಜಾನಪದ ಸಾಹಿತ್ಯ; ವಿವೇಕ ರೈ; ಪುಟ 15.)
6. ಜಾತ್ರೆ ಮತ್ತು ಇತರ ಸಂಶೋಧನಾತ್ಮಕ ಪ್ರಬಂಧಗಳು; ಚಂದ್ರಶೇಖರ ದಾಮ್ಲೆ (ಸಂ); ಪುಟ 45.
7. Castes and Tribes of Southern India; E.Thurston, Volume-VI; ಪುಟ 244.
8. ತುಳು ಜಾನಪದ ಸಾಹಿತ್ಯ; ವಿವೇಕ ರೈ; ಪುಟ 43.
9. ಅದೇ.
10. ಅದೇ.
11. ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ; ಎಂ.ಚಿದಾನಂದಮೂರ್ತಿ; ಪುಟ 54.
12. ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ; ಎಂ.ಚಿದಾನಂದಮೂರ್ತಿ; ಪುಟ 53.
13. ದಲಿತರ ಕೈಪಿಡಿ; ತೆಲುಗು ಮೂಲ-ಬೋಯಿ ಭೀಮನ್ನ, ಕನ್ನಡಕ್ಕೆ-ಕೆ.ನಾರಾಯಣಸ್ವಾಮಿ; 06.
14. ಗ್ಯಾಝೆಟೀಯರು(ಮುಂಬಯಿ ಇಲಾಖೆಗೆ ಸೇರಿದ) ಕರ್ನಾಟಕ ಭಾಗದ್ದು ಅಥವಾ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳ ಸಹಿತ ಧಾರವಾಡ, ವಿಜಾಪುರ, ಬೆಳಗಾವಿ, ಕಾನಡಾ ಈ ನಾಲ್ಕು ಜಿಲ್ಲೆಗಳದ್ದು. ಭಾಷಾಂತರ:

ವೆಂಕಟರಂಗೋ ಕಟ್ಟಿ; 1893; ಪುಟ 217.
15. ಕಪ್ಪೆ ಹೊಲೆಯರ ಸಂಸ್ಕೃತಿ; ಕೇಶವಪ್ರಸಾದ್; ಕರ್ನಾಟಕ ಸಾಹಿತ್ಯ ಅಕಾಡೆಮಿ; 1993; ಪುಟ 02.
16. ಅದೇ; ಪುಟ 03.
17. ಅದೇ; ಪುಟ 04.
18. ಗ್ಯಾಝೆಟೀಯರು(ಮುಂಬಯಿ ಇಲಾಖೆಗೆ ಸೇರಿದ) ಕರ್ನಾಟಕ ಭಾಗದ್ದು ಅಥವಾ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳ ಸಹಿತ ಧಾರವಾಡ, ವಿಜಾಪುರ, ಬೆಳಗಾವಿ, ಕಾನಡಾ ಈ ನಾಲ್ಕು ಜಿಲ್ಲೆಗಳದ್ದು. ಭಾಷಾಂತರ: ವೆಂಕಟರಂಗೋ ಕಟ್ಟಿ; 1893; ಪುಟ 217.
19. ಕಾಡುಗೊಲ್ಲರ ಜಾನಪದ: ಒಂದು ಅಧ್ಯಯನ; ಕಾಳೇಗೌಡ ನಾಗವಾರ; 1984; ಪುಟ 71.
20. ಅದೇ.
21. Pastoral Deities in Western India; Gunther-Dietz Sontheimer; Page 82-172.
22. ಕರ್ನಾಟಕದ ಜಾತ್ರೆಗಳು; ಸಂ.ಸಿ.ಎಸ್.ಶಿವಕುಮಾರಸ್ವಾಮಿ; ಪುಟ 32.
23. ಅಸ್ಪೃಶ್ಯರು; ಮೂಲ-ಬಿ.ಆರ್.ಅಂಬೇಡ್ಕರ್; ಅನುವಾದ-ಕುಮಾರ ವೆಂಕಣ್ಣ; ಪುಟ 67.
24. ಅಸ್ಪೃಶ್ಯರು; ಮೂಲ-ಬಿ.ಆರ್.ಅಂಬೇಡ್ಕರ್; ಅನುವಾದ-ಕುಮಾರ ವೆಂಕಣ್ಣ; ಪುಟ 56.
25. The Tribes and Castes of Bombay-II; R.E.Enthoven; 1922; Page 434.
26. ಅದೇ.
27. ಕಾಡ್ಯನಾಟ; ಎ.ವಿ.ನಾವಡ ಮತ್ತು ಗಾಯತ್ರಿ ನಾವಡ; ಪುಟ VIII.
28. ಕಾಡ್ಯನಾಟ; ಎ.ವಿ.ನಾವಡ ಮತ್ತು ಗಾಯತ್ರಿ ನಾವಡ; ಪುಟ X.
29. ಕಾಡ್ಯನಾಟ; ಎ.ವಿ.ನಾವಡ ಮತ್ತು ಗಾಯತ್ರಿ ನಾವಡ; ಪುಟ XVI.
30. ಕಾಡ್ಯನಾಟ; ಎ.ವಿ.ನಾವಡ ಮತ್ತು ಗಾಯತ್ರಿ ನಾವಡ; ಪುಟ 34.
31. ಅದೇ.
32. ಕಾಡ್ಯನಾಟ; ಎ.ವಿ.ನಾವಡ ಮತ್ತು ಗಾಯತ್ರಿ ನಾವಡ; ಪುಟ 5.
33. ಕಾಡ್ಯನಾಟ; ಎ.ವಿ.ನಾವಡ ಮತ್ತು ಗಾಯತ್ರಿ ನಾವಡ; ಪುಟ 31.
34. ಹಾಲಮತ ದರ್ಶನ; ಶಂ.ಬಾ.ಜೋಷಿ; 1960; ಪುಟ 271.
35. ಮೂರ್ತಿಶಿಲ್ಪ ನೆಲೆ ಹಿನ್ನೆಲೆ; ಎಸ್.ಕೆ.ರಾಮಚಂದ್ರರಾವ್; ಪುಟ 19.
36. ಹಾಲಮತ ದರ್ಶನ; ಶಂ.ಬಾ.ಜೋಷಿ; 1960; ಪುಟ 271.
37. ಅದೇ.
38. ಮೂರ್ತಿಶಿಲ್ಪ ನೆಲೆ ಹಿನ್ನೆಲೆ; ಎಸ್.ಕೆ.ರಾಮಚಂದ್ರರಾವ್; ಪುಟ 21.
39. ಕರ್ನಾಟಕದ ಜಾತ್ರೆಗಳು; ಸಂ.ಸಿ.ಎಸ್.ಶಿವಕುಮಾರಸ್ವಾಮಿ; ಪುಟ 42.
40. ಕರ್ನಾಟಕದ ಜಾತ್ರೆಗಳು; ಸಂ.ಸಿ.ಎಸ್.ಶಿವಕುಮಾರಸ್ವಾಮಿ; ಪುಟ 42.
41. ಮಲೆನಾಡು ಒಕ್ಕಲಿಗರು ಮತ್ತು ಅವರ ಜಾನಪದ; ಎ.ಹಿರಿಯಣ್ಣ; ಪುಟ 368.
42. ಜಾನಪದ ಸಾಹಿತ್ಯ ದರ್ಶನ-ಭಾಗ 9; ಕರ್ನಾಟಕ ವಿವಿ, ಧಾರವಾಡ; ಪುಟ 62.
43. The Earth Mother; Pupul Jayakar; 1980; Page 29.
44. ಆನ್ವಯಿಕ ಜಾನಪದ; ವಿವೇಕ ರೈ; ಪುಟ 37.
45. ಅದೇ.
46. ಜಾತ್ರೆ ಮತ್ತು ಇತರ ಸಂಶೋಧನಾತ್ಮಕ ಪ್ರಬಂಧಗಳು; ಚಂದ್ರಶೇಖರ ದಾಮ್ಲೆ (ಸಂ); ಪುಟ 5.
47. ಜಾತ್ರೆ ಮತ್ತು ಇತರ ಸಂಶೋಧನಾತ್ಮಕ ಪ್ರಬಂಧಗಳು; ಚಂದ್ರಶೇಖರ ದಾಮ್ಲೆ (ಸಂ); ಪುಟ 8.
48. ತುಳು ಜಾನಪದ ಸಾಹಿತ್ಯ; ವಿವೇಕ ರೈ; ಪುಟ 215.
49. ಅದೇ.
50. ಮೂರ್ತಿಶಿಲ್ಪ ನೆಲೆ ಹಿನ್ನೆಲೆ; ಎಸ್.ಕೆ.ರಾಮಚಂದ್ರರಾವ್; ಪುಟ 283.
51. ಮಲೆನಾಡು ಒಕ್ಕಲಿಗರು ಮತ್ತು ಅವರ ಜಾನಪದ; ಎ.ಹಿರಿಯಣ್ಣ; ಪುಟ 357.

52. ನೋಡಿ: ತುಳು ಜಾನಪದ ಸಾಹಿತ್ಯ; ವಿವೇಕ ರೈ.
53. ತುಳು ಜಾನಪದ ಸಾಹಿತ್ಯ; ವಿವೇಕ ರೈ; ಪುಟ 40.
54. ಕುಟುಂಬ ಖಾಸಗಿ ಆಸ್ತಿ ಹಾಗೂ ಇವುಗಳ ಉಗಮ; ಏಂಗಲ್ಸ್; ಪುಟ 54.
55. ಕುಟುಂಬ ಖಾಸಗಿ ಆಸ್ತಿ ಹಾಗೂ ಇವುಗಳ ಉಗಮ; ಏಂಗಲ್ಸ್; ಪುಟ 56.
56. Lokayata; Debi Prasad Chattopadhyaya; ಪುಟ 284.
57. ಕನ್ನಡ ಜಾನಪದ ವಿಶ್ವಕೋಶ; ಪುಟ 925.
58. ಅರಿವು-ಬರೆಹ 4; 1993; ರಾಜಾರಾಮ ಹೆಗಡೆ ಅವರ ಲೇಖನ; ಪುಟ 122.
59. The Elimentary Forms of the religious Life; Emile Durkheim; Page 25.
60. The Tribes and Castes of Bombay-II; R.E.Enthoven; 1922; Page 3.
61. The Tribes and Castes of Bombay-II; R.E.Enthoven; 1922; Page 5.
62. ಅದೇ.
63. The Tribes and Castes of Bombay-II; R.E.Enthoven; 1922; Page 6.
64. The Tribes and Castes of Bombay-II; R.E.Enthoven; 1922; Page 10.
65. ಸಿಂಧ್ ಮಾದಿಗರ ಸಂಸ್ಕೃತಿ; ಕೋಟಿಗಾನಹಳ್ಳಿ ರಾಮಯ್ಯ; 1993; ಪುಟ 65.
66. ಸಿಂಧ್ ಮಾದಿಗರ ಸಂಸ್ಕೃತಿ; ಕೋಟಿಗಾನಹಳ್ಳಿ ರಾಮಯ್ಯ; 1993; ಪುಟ 72.
67. ಸಿಂಧ್ ಮಾದಿಗರ ಸಂಸ್ಕೃತಿ; ಕೋಟಿಗಾನಹಳ್ಳಿ ರಾಮಯ್ಯ; 1993; ಪುಟ 73.
68. Hindu Religion Customs and Manners; P.Thomas; 1975.
69. Hindu Religion Customs and Manners; P.Thomas; 1975; Page 27.
70. Lokayata; Debi Prasad Chattopadhyaya; Page 279.
71. Lokayata; Debi Prasad Chattopadhyaya; Page 277.
72. ಸುಧಾ-ಯುಗಾದಿ ವಿಶೇಷಾಂಕ-1993; ತಾಂತ್ರಿಕ ರಾಧನೆಯ ವಿಶಾಲ ಹರವು ಲೇಖನ-ಸಾ.ಕೃ. ರಾಮಚಂದ್ರರಾವ್; ಪುಟ 20.
73. ಸುಧಾ-ಯುಗಾದಿ ವಿಶೇಷಾಂಕ-1993; ತಾಂತ್ರಿಕ ರಾಧನೆಯ ವಿಶಾಲ ಹರವು ಲೇಖನ-ಸಾ.ಕೃ. ರಾಮಚಂದ್ರರಾವ್; ಪುಟ 20.
74. ಸುಧಾ-ಯುಗಾದಿ ವಿಶೇಷಾಂಕ-1993; ತಾಂತ್ರಿಕ ರಾಧನೆಯ ವಿಶಾಲ ಹರವು ಲೇಖನ-ಸಾ.ಕೃ. ರಾಮಚಂದ್ರರಾವ್; ಪುಟ 21.
75. ಸುಧಾ-ಯುಗಾದಿ ವಿಶೇಷಾಂಕ-1993; ತಾಂತ್ರಿಕ ರಾಧನೆಯ ವಿಶಾಲ ಹರವು ಲೇಖನ-ಸಾ.ಕೃ. ರಾಮಚಂದ್ರರಾವ್.
76. ಸಕಲ ಪರಾತನರ ವಚನಗಳು; ಸಂ-3; ಎಂ.ಎಸ್.ಸುಂಕಾಪುರ' ಪುಟ 247.
77. The Cult of Draupadi; Alf Hiltebitel; Page 35.
78. Lokayata; Debi Prasad Chattopadhyaya; Page 382.
79. ಅದೇ.
80. ಕುಟುಂಬ ಖಾಸಗಿ ಆಸ್ತಿ ಹಾಗೂ ಇವುಗಳ ಉಗಮ; ಏಂಗಲ್ಸ್; ಪುಟ 98.
81. ಅದೇ.
82. ದೇವತೆಗಳು ಮತ್ತು ಹಬ್ಬಗಳು; ಮ.ಶ್ರೀಧರಮೂರ್ತಿ; ಪುಟ 32.
83. ದೇವತೆಗಳು ಮತ್ತು ಹಬ್ಬಗಳು; ಮ.ಶ್ರೀಧರಮೂರ್ತಿ; ಪುಟ 31.
84. ಮೈಲಾರಲಿಂಗ; ಖಂಡೋಬಾ-ಒಂದು ಸಾಂಸ್ಕೃತಿಕ ಅಧ್ಯಯನ; ಎಂ.ಬಿ.ನೇಗಿನಹಾಳ, ಕರ್ನಾಟಕ ವಿವಿ, ಧಾರವಾಡ; ಪುಟ 141.
85. ಅದೇ.
86. ಅದೇ.

87. ಮೈಲಾರಲಿಂಗ; ಖಂಡೋಬಾ-ಒಂದು ಸಾಂಸ್ಕೃತಿಕ ಅಧ್ಯಯನ; ಎಂ.ಬಿ.ನೇಗಿನಹಾಳ, ಕರ್ನಾಟಕ ವಿವಿ, ಧಾರವಾಡ; ಪುಟ 145.
88. Lokayata; Debi Prasad Chattopadhyaya; Page 359-458.
89. ಅದೇ.
90. Lokayata; Debi Prasad Chattopadhyaya; Page 363.
91. Lokayata; Debi Prasad Chattopadhyaya; Page 436-445.
92. ಸಂಶೋಧನ ತರಂಗ; ಸಂ-2; ಎಂ.ಚಿದಾನಂದಮೂರ್ತಿ; ಪುಟ 254.
93. Indian Atheism; Debiprasad Chattopadyaya; Page 315.
94. ದಕ್ಷಿಣ ಭಾರತದ ಜನಪದ ಕಾವ್ಯ ಪ್ರಕಾರಗಳು; ಜಿ.ಶಂ.ಪರಮಶಿವಯ್ಯ; ಪುಟ 91.
95. ಸಂಶೋಧನ ತರಂಗ; ಸಂ-2; ಎಂ.ಚಿದಾನಂದಮೂರ್ತಿ; ಪುಟ 258, 259.
96. The art of Tantra; Philip Rawson; 1973; Page 124.
97. Castes and Tribes of Southern India; E.Thurston, Volume-VI; ಪುಟ 56.
98. Castes and Tribes of Southern India; E.Thurston, Volume-II; ಪುಟ 124.
99. Castes and Tribes of Southern India; E.Thurston, Volume-VI; ಪುಟ 290.
100. ನೋಡಿ: ಶೃಂಗೇರಿ ಧರ್ಮಸಂಸ್ಥಾನ; ಶಾಸ್ತ್ರಿ ಎ.ಕೆ.
101. Castes and Tribes of Southern India; E.Thurston, Volume-II; ಪುಟ 128.
102. Castes and Tribes of Southern India; E.Thurston, Volume-II; ಪುಟ 12.
103. ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ; ಎಂ.ಚಿದಾನಂದಮೂರ್ತಿ; ಪುಟ 29.
104. Please Refer: The Mysore Caste and Tribes; H.V.Nnjundiah and Anantha Krishna Ayyar.
105. ಸಿಂಧ್ ಮಾದಿಗರ ಸಂಸ್ಕೃತಿ; ಕೋಟಿಗಾನಹಳ್ಳಿ ರಾಮಯ್ಯ; 1993; ಪುಟ 70.
106. ಅದೇ.
107. ಸಿಂಧ್ ಮಾದಿಗರ ಸಂಸ್ಕೃತಿ; ಕೋಟಿಗಾನಹಳ್ಳಿ ರಾಮಯ್ಯ; 1993; ಪುಟ 71.
108. ಸಿಂಧ್ ಮಾದಿಗರ ಸಂಸ್ಕೃತಿ; ಕೋಟಿಗಾನಹಳ್ಳಿ ರಾಮಯ್ಯ; 1993; ಪುಟ 72.
109. ಸಿಂಧ್ ಮಾದಿಗರ ಸಂಸ್ಕೃತಿ; ಕೋಟಿಗಾನಹಳ್ಳಿ ರಾಮಯ್ಯ; 1993; ಪುಟ 66.
110. ಅದೇ.
111. ಮಾಸ್ತಿಕರ ಸಂಸ್ಕೃತಿ; ಲಕ್ಷ್ಮೀಪತಿ ಕೋಲಾರ; ಕರ್ನಾಟಕ ಸಾಹಿತ್ಯ ಅಕಾಡೆಮಿ; 1993; ಪುಟ 50-74.